Sri K. HANUMANTHAIYA.—Yes, I will do it, Sir.

Sri J. MOHAMED IMAM.—I would like to know the order of legislative business that would be taken up after 1st April and would like to have an indication of the programme of work and the order of the Bills that are going to be taken up, so that we may be able to study the Bills as they come up.

Mr. SPEAKER.—The Law Minister will be able to tell us, so that the Hon'ble members may be in a position to discuss the Bills as they come up.

Sri A. G. RAMACHANDRA RAO.—In the course of the day, I will submit, Sir.

MESSAGE FROM H. H. THE RAJPRAMUKH.

Mr. SPEAKER.—Here is a message from H. H. the Rajpramukh :

> "In pursuance of clause 1 of Article 207 of the Constitution of India, I, Jayachamaraja Wadiyar, Rajpramukh of Mysore, do hereby recommend that the Mysore Appropriation (No. 2) Bill, 1955, be introduced and moved in the Legislative Assembly."

MYSORE APPROPRIATION (No. 2) BILL, 1955.

Introduction.

Sri K. HANUMANTHAIYA (Chief Minister).—Sir, I introduce the Mysore Appropriation (No. 2) Bill, 1955 which has been published in the *Mysore Gazette* Extraordinary dated 29th March 1955 under Rule 48 of the Rules of Procedure and Conduct of Business in the Mysore Legislative Assembly.

ADJOURNMENT MOTION.

Sri B. V. NARAYANA REDDY (Bagepally—Gudibanda).—What about my adjournment motion which I had given notice of, Sir?

Mr. SPEAKER.—I learnt that your adjournment motion was received in the office a little late. It will be taken up tomorrow.

Sri B. V. NARAYANA REDDY.—I will not be here tomorrow. Will you be kind enough to take it up on Monday, Sir?

Mr. SPEAKER.—Yes.

MYSORE APPROPRIATION (No. 2) BILL, 1955.

Motion to consider.

1 P.M.

Sri K. HANUMANTHAIYA (Chief Minister).—Sir, I move.

> "That the Mysore Appropriation (No. 2) Bill, 1955, be taken into consideration."

Sir, I do not want to take the time of the House in making a speech on this Bill, for I have made a very exhaustive Budget speech.

Whatever criticisms that are now being made by Hon'ble Members—I will be very glad to reply to them. For this purpose some time is to be fixed. I have no objection to the Leader of the Opposition taking the time required for his criticisms. The other speakers have to be allotted time. So far as Government is concerned, at least an hour and a half is required for this purpose. It may be that the Hon'ble Members will traverse many departments of Government, in which case the Ministers concerned have to reply and finally I have to reply. With this view, I request you to fix up the time and to allot an hour and a half to Government.

Sri J. MOHAMED IMAM (Jagalur).—Are we closing at 5 or is it possible to extend the time because only one day is allotted?

Mr. SPEAKER.—It is left to the House.

Sri J. MOHAMED IMAM.—You can extend the time.

Sri M. LINGANNA (Nanjangud).—So far as the fixing the time limit, there is no scope. It is after all a money Bill wherein any limitation of time cannot be imposed.

Sri J. MOHAMED IMAM.—I think we can come to some understanding. We can disperse a little late.

Mr. SPEAKER.—It cannot be indefinite. We must fix at least the time up to which the House has to sit.

Sri K. HANUMANTHAIYA.—I would have had no objection to the time being extended, but to-day there is the State Harijan Conference which meets at 6 o'clock. At least half an hour is required to go there. I very much request that it is not possible to comply with the request of the Leader of the Opposition. After all no new point is made. He has spoken these three years—at least 10 hours over this matter and I am sure he is so intelligent that he will be able to compress his criticisms in this short time and not put the Government to embarrassment.

Mr. SPEAKER.—I think all of us have to attend the Harijan Conference. We cannot extend the time beyond 5-30. Motion moved:

> "That the Mysore Appropriation (No. 2) Bill, 1955, be taken into consideration."

It is better to fix a time limit. If the House agrees, I will make a suggestion. Members who have not spoken on the Budget itself, may be given preference.

SEVERAL MEMBERS.—Yes.

Mr. SPEAKER.—But there is always an exception in the case of the Leader of the Opposition, because he represents the Opposition party.

Sri K. PATTABHIRAMAN (Kolar).—A few others also.

Mr. SPEAKER.—Yes.

*Sri J. MOHAMED IMAM.—It is always my unpleasant duty to oppose the Appropriation Bill. This time it is more unpleasant and the duty is all the more solemn because we are asked to vote a big sum, nearly Rs. 60 crores. This is the first time the Government is required to spend such a huge amount. Rs. 60 crores works out at the rate of Rs. 60 *per capita*. We are asking the Government to spend nearly Rs. 60 on every person . . . .

Sri K. HANUMANTHAIYA.—Rs. 60 ?

Sri J. MOHAMED IMAM.—*Per capita* expenditure comes to Rs. 60. You are asking for Rs. 60 crores. We have been dealing with the budget with various figures for the last one month. We have offered various criticisms, but we have not been able to change even by a single pie the various allotments made. In spite of our repeated requests, the Government is not influenced in any way. Whatever figures are furnished by the Finance Minister at the time of the presentation of the Budget, they still stand solid and it looks as if all our efforts from the last one month have been in vain. But it is my duty to point out what the future policy of the Government should be, lest there may be a crisis in the financial history of Mysore. Of these Rs. 60 crores, nearly one-third of the amount comes from the Centre by way of loan. The stability of our Budget entirely depends upon the assistance given by the Government of India. I made very detailed observations in the course of my budget speech and I have what I believe to be very cogent reasons and I offered very constructive criticisms and we wanted elucidation of certain facts. But the Chief Minister, in the course of his reply, has disposed of our objections very cheaply. In fact, he has made a few remarks which I cannot take and it is my duty to reply to some of the observations he has made. For example, he has stated that all our criticisms are the usual common place criciticisms and that we are proceeding in the same usual mental rut, misclassifying, mis-dealing and misrepresenting facts. He has also said that we are after cheap popularity, after cheap applause and that we always play to the gallery. Whoever is aiming at cheap popularity, whoever is playing to the gallery and whoever is proceeding in the same mental rut ? It is true, for the last 4 or 5 years, ever since I have been taking part in the discussion of the Budget, I have been representing and members of my party have been representing certain facts. Even yesterday Sri Mariappa remarked that when he read my speech he also felt that I have been repeating the same thing. It is true I cannot go against the facts. (*A Voice : Where did he say that* ?) In the Lounge room.

Sri T. MARIAPPA (Mysore City—North).—After all, it is a private conversation between Sri Imam and myself.

Sri J. MOHAMED IMAM.—I will quote official conversation.

Sri T. MARIAPPA.—He wanted to know my opinion. He has been repeating these things for the last so many years. It is only a private talk. I never thought that he would make use of it.

Sri J. MOHAMED IMAM.—Even when he was in power, his usual reply was the same. Anyhow, I admit that we have to repeat, to proceed in the same mental rut ; but, at the same breath I cannot go against . . .

Sri T. MARIAPPA.—There was no flagging of enthusiasm on his part.

Sri J. MOHAMED IMAM.—When the mistakes repeat themselves, when the rut repeats itself, it is my duty to emphasise the need for the Government to correct themselves and not proceed in the same mental rut as they have been doing all along.

The deficit, and the increase in reckless expenditure are common factors. The deficit is a progressive one. It has been increasing year by year and I do not know where it will land us. These facts I have to repeat every year. Can I say just to give them a change that the deficit is a surplus one ? It will be against the truth. Can I say that the Chief Minister is against effecting economy ? I wish he has given me a chance, an opportunity to compliment the ministry on their economy measures and on the steps that they have taken to minimise the deficit in the Budget. On the other hand, it is my painful duty to bring to their notice that in spite of our repeated efforts, repeated criticisms, in spite of honest attempts to mend the matters, Government have not changed their policy and they are still continuing in the same old mental rut and it is really unfortunate that they are misunderstanding us, and are misrepresenting or misunderstanding the just and honest criticisms which we have been making. What were the point raised by us ? We only pointed out to the Finance Minister, that there is such a big gap between the revenue and the expenditure to the extent of Rs. 4 crores and 5 lakhs. We wanted to know how he whould meet this situation, how he would allay our fears. Secondly we wanted to say : it is a progressive deficit, it is a growing deficit, it is growing every year ; what are the measures to counteract it ; are you going to effect economy ? We wanted from him concrete proposals, but the Finance Minister was not in a position to give concrete proposals ; On the other hand, he began to justify himself and some of his followers also justified that this huge deficit is necessary if we have to provide enough money for national building departments. I would like to ask : is the increased allotment for the nation building departments, is it alone responsible for the huge deficit, or is it mainly responsible for this huge deficit. Has not the expenditure on the establishment of officers gone up since 1951-52 when the Finance Minister assumed office ? I will just give figures from the Budget itself. In the year 1951-52 the expenditure on the pay of officers, on establishment, and on allowances was Rs. 6,18,00,000, whereas during the present year it has gone up to Rs. 9 crores. So merely on the pay of officers and on the establishment, the increased expenditure is Rs. 9 crores. It has gone up by three crores and I say that this sum of Rs. 3 crores, is a stabilised form of expenditure, an expenditure which we are not able to reduce ; it is this that was responsible for this huge deficit. It is on this ground we drew the attention of the Chief Minister to the need for effecting economy, but he has not been doing it. Even the difference between last year and this year is enormous. Last year the expenditure on establishment, on officers, has been Rs. $8\frac{1}{2}$ crores ; this year Rs. 9 crores. So the cost on establishment, on officers, is going up heavily. What is more, nearly 40-45 per cent of our revenue is spent on the establishment and on our officers and on T.A. and the remaining amount is spent on the nation building departments and on other needs. The Chief

Minister has said in his reply that if you go on effecting economy, every year, then there will be no Government. This is a strange statement which I cannot accept. What I wanted to say is: economise, taking the income into consideration; but he says: if you go on effecting economy, there will be no Government. On the other hand, I stated that if he went on persisting in this increased expenditure and if he fails to stabilise the position, then in course of time, there would not be any Government and a crisis was bound to come. Sir, I do not find any evidence even now on the part of the Chief Minister and the Government to economise the expenditure and to cut down the expenditure. On the other hand, we see fresh proposals for enhanced expenditure. Recently, Sir, a new Department was created known as the Office of the Commissioner for Transport and a new Officer has been appointed with a huge staff. I had occasion to look into the *Mysore Gazette* and I think the new department costs us a good bit of money. Is this the time to start a new department? Were you not managing all the present departments efficiently? Where was the need for this new department? Well, if we had been in an affluent position, if we had enough of money, there was enough justification. When there was such a critical position, and need for utmost economy, where was the need to create a big department involving a huge staff costing Rs. 3 lakhs? The other day I pointed out how there had been increase in the number of Engineers, and similarly in other departments also. I read in the newspapers that the Chief Minister yesterday announced in the Upper House that he is thinking of expanding the Ministry on the ground that there is going to be increased work. I cannot understand why. . . .

SRI K. PATTABHIRAMAN (Kolar).—Is it a coalition Ministry?

SRI J. MOHAMED IMAM.—No. The Chief Minister and his colleagues have been going on with the work for the last 3½ years. Suddenly he discovers himself that he is more worked and that he wants more Ministers. I do not know what the view of the Chief Minister is. But if the expansion of the Ministry comes into effect, that will result in greater expenditure. What is more, this addition of new Ministers will be done not with a view to cope with the increased work, but with a view to satisfy party passions and party ambitions and it will not be a *bona fide* necessity. Sir, I was thinking of suggesting on this occasion to reduce the number of Ministers in the interest of economy. But to expand the Ministry, to take in more Ministers when there is absolutely no need, I think, will be against the policy of the Government who say they will always economise. Let not my friends who are in this House and who are anxious to become Ministers misunderstand me. Personally I have got great regard for them. But we must think of the interest of the State and it is not due to administrative convenience that the expansion of the Ministry will be done, but it will be done with a view to satisfy some of the persons in the Party who would be otherwise dissatisfied. Sir, again, the Chief Minister said that I am going to oppose every measure of taxation. When I opposed his new taxation measure, he has been pleased to characterise me as playing to the gallery, as courting cheap popularity and as courting cheap applause. Sir, when I oppose this, I oppose it not on my own behalf, but on behalf of 10 million people who have already been overburdened with taxation, whose standard of living is very low and in whose case taxation has reached the saturation point. And in such a case, to impose further taxation, I said, would be not only undemocratic but it would be creating a great hardship and burdening the people with greater taxation, and even now I persist in these remarks. Sir, what I wanted to know is this: Have the Government found out the taxable capacity, the earning capacity of the agriculturists? Of the 10 million people who are residing in Mysore, 8 millions depend upon agriculture. One million are industrialists and merchants and 10 per cent of the population are Government officers and other

(SRI J. MOHAMED IMAM.)

miscellaneous officers. Your measure must be such that it should not affect the 8 million people who are already overburdened with taxation. But even now to tax them will be doing it without properly understanding their position. I will just quote a passage from the Census Report regarding the condition of our people :

> "He who runs may see that the average Mysorean is about as poor as the proverbial church-mouse. His standard of life is extremely low, if not altogether appalling. An Economic Survey that was conducted a few years ago revealed that his average income was Rs. 65 per annum. That was about the time when the authors of the Bombay Plan estimated that an income of Rs. 120 *per capita* would be necessary to support what according to them was the minimum standard of living. In the intervening years cost of living has zoomed up to dizzy heights. With income making a futile bid to keep pace with rising costs, inevitably there has been a deterioration in living standards. Soaring prices have compelled large numbers to part with their savings and properties in order to make both ends meet. The fact that many are unable to draw the full quota of their rations only emphasises the tragedy. In Mysore, as in the rest of the country, the middle classes who have always made the most significant contributions towards social welfare, are now threatened with extinction."

This is an observation made in the Census Report for which the Government themselves are responsible.

SRI T. MARIAPPA.—There is a note to the effect that it is the opinion of the author and not of the Government.

SRI J. MOHAMED IMAM.—But it has been adopted by the Government. It is left to the Government to contradict it. There, it is clearly said that the *per capita* income of the Mysorean who is as poor as the church mouse is Rs. 60. When that is the *per capita* income, then what justification is there to impose fresh burdens ? I say all your taxes will affect people who are agriculturists and who are living through cultivation. Such being the case, without knowing the nature of the case, the Government still every year go on adding fresh taxation. So, I ask where is the justification for fresh taxation ?

MR. SPEAKER.—They have not increased the land tax.

SRI J. MOHAMED IMAM.—Any form of tax. All the taxes that are levied and imposed have primarily and mainly affected the cultivator class because they form 80 per cent of the population. Secondly, the industrialists and the commercial people are next affected; the least affected are the 10 per cent who form the miscellaneous services, Government servants and others who pay comparatively less amount of taxes. I just now mentioned that out of the State's revenue, Rs. 8 crores are spent on salary and allowances of 10 per cent of the Mysore population.

SRI H. M. CHANNABASAPPA (Periyapatna).—The Hon'ble Member said some time ago that it was Rs. 9 crores.

SRI J. MOHAMED IMAM.—Thank you very much; Rs. 9 crores. These people are described in the Census Report as follows :—

> "From 'Transport' we now come to that heterogenous hamper of livelihoods in which Ministers and menials, Jagatgurus and jail-birds, doctors and ward boys, all jostle with one another."

These are the 10 per cent people.

SRI K. HANUMANTHAIYA.—Under what category do you come ?

SRI J. MOHAMED IMAM.—I come under 'Agriculturists.' I want to state that Rs. 9 crores are being spent on this 10 per cent of the population. Whatever new tax is levied will go for the betterment of others. Think of the plight of 8 million people who are agriculturists, who are agricultural labourers and who are tenants; as pointed out therein ; their *per capita*

income has not exceeded Rs. 60 ; there are millions and millions who have no sustained or sure means of income; there are millions who are toiling in the heat, sun and wind and cold but who hardly get 8 annas per day. I don't grudge them ; but these are the people who have got assured means of income, who comparatively live a higher standard of living and it is their duty to go to the rescue of the people who are downtrodden and who are in less fortunate position. Sir, in the year 1924-25 when there was a similar crisis but of lesser magnitude, the State was faced with a deficit of Rs. 16 lakhs; at once there was a hue and cry; the Government at once appointed a Retrenchment Committee under Justice Chandrasekhara Iyer and that Committee went into all the details, and, to make up the deficit and balance the Budget that Committee recommended at once to effect retrenchment in the pay and allowances of officers to the extent of 10 per cent and the very next year the Budget was balanced and when more affluent times came, their pay and allowances were gradually restored. Similarly, a more critical time has now come and the State is faced with an overall deficit of Rs. 5 crores and the Government have no other source of filling this gap. So, I think the time has come when all our superior officers of the Government and Government employees who are in more fortunate position should make a sacrifice. Well, Sir, as I have pointed out Rs. 9 crores out of Rs. 20 crores of revenue are meant for them now and unless they make a sacrifice, there is no salvation for us. At this time, our Government servants and others who are equally patriotic, who are equally interested and who are also Mysoreans should make a sacrifice and the Government should effect retrenchment. I would suggest here that in the case of all officers drawing Rs. 100 and above, 15 to 20 per cent cut must be effected. I know they will find fault with me. I only appeal to them: "Look at the State ; a crisis may develop when it may be impossible even to meet your pay ; think of all those unfortunate millions and millions of raiyats, and labourers who have been toiling in the sun." The time has come to effect retrenchment and to reduce the pay and allowances of other officers by 15 to 20 per cent and then you will be able to save one or two crores of rupees. It is only through these means that we can hope to balance the deficit. When we get better times, when we have got plenty of money, let us be very considerate towards them ; let us be sympathetic. Now, this is the time when every person in the State must undergo hardship; they must be patriotic from the lowest to the highest. The Ministers themselves should set an example towards economy by reducing their pay to an appreciable extent.

1-30 P.M.

It is only through these means that we can hope to balance the deficit. Of course, when we get better times, when we have plenty of money, let us be very considerate towards them, let us be very sympathetic. But now this is the time when every person in this State must undergo certain amount of hardship from the lowest to the highest. I am sure, the Ministers themselves will first set an example towards economy by reducing their pay to an appreciable extent.

Sir, a battle has been going on between myself and the Finance Minister regarding an anecdote I narrated, about '*Nama*'. I stated the Government has been taxing the people to such an extent that they are not sparing even the '*Namas*', and the Chief Minister retorted and said that we taxed only those who put '*Namas*'.

'ಯಾರು ಬೇರೆಯವರಿಗೆ ನಾಮ ಹಾಕುತ್ತಾರೋ ಅವರಿಗೆ ಮಾತ್ರ ತೆರಿಗೆ ಹಾಕುತ್ತೇವೆ' ಎಂದು ಅವರು ಹೇಳಿದರು. ಅದರಂತೆ ಈಗ ನಾಮ ಹಾಕುವವರು ಯಾರು? ಎಂಬ ಪ್ರಶ್ನೆ ಬರುತ್ತದೆ. 'ಬೇರೆಯವರು ನಾಮ ಹಾಕುವವರು' ಎಂದರೆ ಯಾರು ರೈತರಿಗೆ ಎಲ್ಲಾ ಕಿರುಕುಳಗಳನ್ನು ಕೊಟ್ಟು ಅವರಿಂದ ಹಣ ಕಿತ್ತು ಕೊಂಡು, ತಮ್ಮ ಖರ್ಚನ್ನೆಲ್ಲಾ ಜಾಸ್ತಿಮಾಡಿಕೊಂಡು, ಸಂಸ್ಥಾನಕ್ಕೆ ಬರತಕ್ಕ 18 ಕೋಟಿಯಲ್ಲಿ ಒಂಭತ್ತು ಕೋಟಿಯನ್ನು ತಮ್ಮ ಸಂಬಳ ಸಾರಿಗೆಗಳಿಗೇ ಉಪಯೋಗಿಸಿಕೊಂಡು ರೈತರ ಮೇಲೆ ಮತ್ತೆ ತೆರಿಗೆ ಹಾಕುತ್ತಾರೋ ಅವರು 'ನಾಮ ಹಾಕುವವರು'! ಅವರಲ್ಲಿ ಅಗ್ರಸ್ಥಾನ ನಾನು ಕೊಡುವುದು ಮುಖ್ಯ ಮಂತ್ರಿಗಳಿಗೆ. Because he has put the biggest ನಾಮ to the people of the State by

(SRI J. MOHAMED IMAM.)

constructing 'ವಿಧಾನ ಸೌಧ'. I think he has put the biggest "*Nama*" on the State by constructing 'Vidhana Soudha'. I am sure he appreciates these remarks. He is a sport himself. If the people had been assured that all the taxes that will be levied will go for their own benefits, they will not grudge much. But they know, all the taxes that will be levied and all the amount that will be collected will go to meet the pay of the officers or to create a new department, or for the creation of a new Ministry. Then it is absolutely a question of exploitation. ಆದ್ದರಿಂದ ನಾವು ಹಾಕುವವರು ಎಂದರೆ exploit ಮಾಡುವವರು. ಈಗ ರೈತರನ್ನು Exploit ಮಾಡುತ್ತಿರುವವರು ತಾವಲ್ಲವೇ? And in my humble opinion, I am taking it very seriously. I said, all our raiyats and others have been exploited and the exploiters are those people who want to squeeze them out of their own money for their increased expenditure, for their increased luxuries and to build buildings like Vidhana Soudha and other buildings.

I think, I have taken only half an hour and I do not want to take much time.

So, Sir, another reason given by the Chief Minister—and he wants to justify this increased expenditure,—is that they have made increased allotment towards education, towards medicine and towards other Nation Building Departments. Sir, I am not a person to grudge or to oppose any increased grant for Nation Building Departments. If any increased allotment is made towards education and if I am convinced that education will develop and progress, I will be the first to rejoice and I will be the first man to rejoice over the increased medical facilities that may be given to the entire State. But what I am anxious about is this: any development made and any facilities given should be solid, secure and permanent; and secondly, it must admit of further development and admit of security and ensure continuity. It is true, Sir, that this year an increased allotment has been made towards education and an increased allotment has been made towards medical facilities. Well, Sir, these increased allotments, according to me, have created a big deficit of Rs. 409·87 lakhs. Now I ask him why don't you allot Rs. 10 crores towards education and Rs. 3 crores towards medicine? (*Sri K. Hanumanthaiya.—I will take the suggestion for next year*). It is immaterial whether you take the suggestion or not. I said development must have a continuity. Now he is in the midst of reforms. Implementations of these reforms involve a good deal of expenditure, involving crores and crores of rupees and he has made a beginning in that direction. The beginning has been made by the sifting of holidays from April to December, from summer to Sarvodaya day. Well, I understand, this shifting has created a good deal of complications. In the first place, it is peculiar to Mysore. It does not conform to an All India set up. There is no uniform policy with regard to Primary, Middle and High School Holidays. The Colleges have not fallen in line and I am told that they are not going to fall in line, and there will be confusion.

Now, Sir, you have allotted Rs. 92 lakhs to commence your reforms and when once you have commenced to implement the reforms, you must be in a position to implement the entire scheme for which you require a lot of money. In the beginning alone you have made an increased allotment of Rs. 90 lakhs or Rs. 70 lakhs; for the next year what is it that you are going to do unless you find out the resources? Even this one, I can say, has been done only to gain cheap popularity. It is only a showy budget just to show to the people that you have made an allotment for education. I have said, they have made it without the means and without resources and at the end of the year, I will not be surprised if the revised Budget instead of showing Rs. 490 lakhs, may go down to Rs. 300 lakhs. These enhanced provisions for development are only a showy budget and they have been made only to earn cheap popularity and I must say they are playing to the gallery and playing to the people. On the other hand, if the Chief Minister had shown on the left side the incomes, I would have

been very glad. An increased allotment will be made for expenditure during next year also. There is huge deficit and you are trying to increase the allotment on the Nation Building Departments. Where is the money ? In course of time, you will all landy ourselves into trouble ; and what is more Sir, our very stability, our entire administration depends upon the generosity of the Government of India. This year we have asked for a loan to the extent of Rs. 14 crores. All our development works must be started by loans and central assistance. It has been provided in the Budget as Rs. 3 crores from loans and Rs. 14 crores from central assistance. Supposing the Central Government which has got its own worries and problems and which itself has a deficit budget, are not in a mood to comply with our request, what would be our fate ? I want to know from some members who have studied the Central Budget, whether they have made any provision specifically in their budget for assistance to the Mysore State ? I would like to know from the Finance Minister himself if the Centre has made categorical assurance that they are going to give us Rs. 14 crores. All these are doubtful factors and uncertain factors. What about the floating of Rs. 3 crores loan ? Government have not secured that loan. I am prepared to offer my co-operation, but let the Government from their past experience tell us, are they going to collect this loan ? So, all the items of revenue on the left side, are all uncertain factors, they are undependable factors and we are passing our expenditure. The difficulty will be this : when the revenue remains solid while the expenditure cannot be cut down, the expenditure will always have a tendency to go up ; unless the revenue is increased which is so uncertain, it is very difficult to balance the budget. The prices of food-stuffs are going down, as a result of which the producers are hard hit. They are struggling for their existence. Such being the case, I am sure your normal revenue will be dwindling.

With this, Sir, I feel, it is my dutyto give due warning to the Government. That is what I have been doing from the very beginning. I never court cheap popularity, I never play to the gallery, because we have no gallery at all, we have no gallery to play to and we do not want cheap applause. We all leave it to you. The duty of the Opposition is to point out irregularities, to point out defects and hardships under which our people are groaning and to appeal to the Government to mend their policies and to mend their policies in such a way that their policies do good for the entire State.

* ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ. ಈ ಮಾನ್ಯ ಸಭೆಯ ಮುಂದಿರುವ, ಸ್ವತಂತ್ರ ಭಾರತದ 6ನೆಯ ವರ್ಷದಲ್ಲಿ ಕಾನೂನಾಗಲು ಮಂಡಿಸಿರುವ ಮೈಸೂರು ಅಪ್ರೋಪ್ರಿಯೇಷನ್ 1955ನೆಯ ಇಸವಿಯ (2)ನೆಯ ಮಸೂದೆಯನ್ನು ನಾನು ವಿರೋಧಿಸಲು ನಿಂತಿದ್ದೇನೆ. ಈಗ ನೀವು ಅನುಮತಿ ಕೊಡಬೇಕೆಂದು ಕೇಳಿರುವ ಹಣದ ಮೊತ್ತ 60 ಕೋಟಿ 70 ಲಕ್ಷದ 25 ಸಾವಿರದ 384 ರೂಪಾಯಿಗಳಿಗೆ ಮೀರಿದಷ್ಟಿದೆ. ಈ ಹಣವನ್ನು ಮೈಸೂರು ಸರ್ಕಾರದ ಬೊಕ್ಕಸದಿಂದ 1956ನೆಯ ಇಸವಿಯ ಮಾರ್ಚಿ 31ನೆಯ ತಾರೀಖಿಗೆ ಆಖೈರಾಗುವ ಹಣಕಾಸಿನ ನಾನಾ ಬಾಬುಗಳಿಗೆ ಖರ್ಚುಮಾಡಲು ಬೇಕೆಂದು ಸರ್ಕಾರದವರು ಕೇಳಿದ್ದಾರೆ. ಈ ಮಸೂದೆ ರಾಜ್ಯಾಂಗದ 204ನೆ ಆರ್ಟಿಕಲ್ (1)ನೆಯ ವಿಧಿಯ ಆದೇಶದ ಪ್ರಕಾರ ಈ ಸಭೆಯ ಮುಂದೆ ಮಂಡಿಸಲ್ಪಟ್ಟಿದೆ. ಈ ಮಾನ್ಯ ಸಭೆ ಕೂಲಂಕಷವಾಗಿ ಪ್ರತಿಯೊಂದು ಬಾಬನ್ನೂ ಪರಿಶೀಲಿಸಿ ಸೂಕ್ತ ವಿಷಯಗಳ ಸೂಚನೆ ಕೊಟ್ಟು ಅನುಮತಿ ಕೊಡಬೇಕಾಗಿದೆ. ಈ ಖರ್ಚಿನ ವಿವರಗಳನ್ನು ತೋರಿಸತಕ್ಕ ಷೆಡ್ಯೂಲನ್ನು (*a*), (*b*), (*c*), (*d*), ಎಂಬುದಾಗಿ ನಾಲ್ಕು ಭಾಗಗಳನ್ನಾಗಿ ಮಾಡಿದ್ದಾರೆ. ನಾವು ಮತ ಕೊಡಬೇಕಾದ ಬಾಬುಗಳ ಸಂಖ್ಯೆ 39 ಮತ್ತು ಉದ್ದೇಶಗಳು 41 ಇದರಲ್ಲಿ 31 (*a*) ಮತ್ತು 32 (*a*) ಕೂಡ ಸೇರಿಕೊಂಡಿವೆ. ಮತ ಕೊಡಬೇಕಾದ ಮೊಬಲಗಿನ ಮೊತ್ತ 29 ಕೋಟಿ 6 ಲಕ್ಷದ 67 ಸಾವಿರದ 684 ರೂಪಾಯಿಗಳು. ಇಷ್ಟೊಂದು ವಿಶದವಾಗಿ ನಾನು ಹೇಳುವುದಕ್ಕೆ ಪ್ರಯತ್ನಪಡುತ್ತಿರುವುದರ ಉದ್ದೇಶವಿಷ್ಟೆ. ನಾನೇನೋ ನನ್ನ ವಾಗ್ಝರಿಯನ್ನು ಪ್ರದರ್ಶಿಸುವುದಕ್ಕೆ, ಈ ಸಭೆಯ ಕಾಲವನ್ನು ಉಪಯೋಗಿಸುವುದಕ್ಕೆ ಪ್ರಯತ್ನಿಸುತ್ತಿದ್ದೇನೆಂದು ಯಾರೂ ತಿಳಿಯಕೂಡದು ; ಅಂಥ ಇಚ್ಛೆ ನನಗಿಲ್ಲ. ನಾನೂ ಜನತೆಯಿಂದ ಆರಿಸಿಬಂದ ಸದಸ್ಯನಾಗಿರುವುದರಿಂದ ಈ ಸಭೆಯ ಕಾಲದ ಮಹತ್ವವನ್ನು ಅರಿತುಕೊಂಡು ಮಾತನಾಡುವವನಾಗಿದ್ದೇನೆ. ಇನ್ನು ಈ (ಬಿ) ಭಾಗದಲ್ಲಿ ಹೇಳಿರುವ Capital outlay not met from Revenue ಈ ಬಾಬಿಗೆ ಒಟವಾಡೆ ಮಾಡಲು 21 ಕೋಟಿ 8 ಲಕ್ಷ 27 ಸಾವಿರದ 900 ರೂಪಾಯಿಗಳಿಗೆ ನಾವೀಗ ನಮ್ಮ ಮತವನ್ನು ಕೊಡಬೇಕಾಗಿದೆ ಮತ್ತು ಇದರ ಜೊತೆಗೆ Charged on the Consolidated Fund ಎಂದು 5 ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ. ಅಲ್ಲಿಗೆ ಒಟ್ಟು Capital outlay not met from Revenue ಎಲ್ಲಾ ಸೇರಿ 21,08,32,900 ರೂಪಾಯಿಗಳಾಗುತ್ತವೆ. ಇಷ್ಟೇ ಮೊತ್ತವಲ್ಲದೆ ಇನ್ನೂ ಕೆಲವು ಬಾಬು

(ಶ್ರೀ ಎಸ್. ಗೋಪಾಲಗೌಡ.)

ಗಳಿವೆ. ಇನ್ನು (ಸಿ) ಭಾಗದಲ್ಲಿ 3,24,69,800 ರೂಪಾಯಿಗಳನ್ನು Loans and Advances by the State Government ಎಂದು ಬೇರೆ ಕೇಳಿದ್ದಾರೆ. (ಡಿ) ಭಾಗದಲ್ಲಿ ಸಾರ್ವಜನಿಕರಿಂದ ಎತ್ತಿರತಕ್ಕಂಥ ಸಾಲತೀರ್ವೆಯ ಬಗ್ಗೆ ಮೂರು ಬಾಬುಗಳನ್ನು ತೋರಿಸಿದ್ದಾರೆ :—(i) ಪರ್ಮನೆಂಟ್ ಡೆಟ್, ಇದರಲ್ಲಿ 1,63,54,000 ರೂಪಾಯಿಗಳಿವೆ, (ii) ಫ್ಲೋಟಿಂಗ್ ಡೆಟ್ 1,00,00,000 ರೂಪಾಯಿಗಳು, (iii) 94,25,000 ರೂಪಾಯಿಗಳು ಈ ಐಟಂಗಳೆಲ್ಲಾ ಒಟ್ಟಿಗೆ ಸೇರಿದರೆ 3,57,80,000 ರೂಪಾಯಿಗಳಾಗುತ್ತವೆ. ಈ ರೀತಿಯಾಗಿ ನಾವು ಈ ದಿವಸ 55-56 ನೆಯ ಸಾಲಿನ ಬಡ್ಜೆಟ್ ಜೊತೆಗೆ 53,39,65,384 ರೂಪಾಯಿಗಳಿಗೆ ಮತದಾನ ಕೊಡಬೇಕಾಗಿದೆ. ಇದಲ್ಲದೆ Charged on the Consolidated Fund ಎಂದುಹೇಳಿ ಅದುಬೇರೆ 7,30,60,000 ರೂಪಾಯಿಗಳಿವೆ. ಹೀಗೆ ಎಲ್ಲವನ್ನೂ ಒಟ್ಟು ಸೇರಿಸಿದರೆ Grand Total 60,70,25,384 ರೂಪಾಯಿಗಳಾಗುತ್ತವೆ. ಇಷ್ಟು ಮೊತ್ತಕ್ಕೆ ನಾವೀಗ ನಮ್ಮ ಒಪ್ಪಿಗೆಯನ್ನು ಕೊಡಬೇಕಾಗಿದೆ. ಈ ವರ್ಷದ ಅವಧಿಯಲ್ಲಿ ಇಷ್ಟೊಂದು ಭಾರಿ ಮೊಬಲಗನ್ನು ಸರ್ಕಾರ ಖರ್ಚುಮಾಡಲು ಈ ಮಾನ್ಯ ಸಭೆ ತನ್ನ ಒಪ್ಪಿಗೆಯನ್ನು ಕೊಡಬೇಕಾಗಿದೆ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲಪೇಕ್ಷಿಸುತ್ತೇನೆ. ಈ ಮೊಬಲಗೆಲ್ಲಾ ಸಾರ್ವಜನಿಕರ ಬೊಕ್ಕಸಕ್ಕೆ ಸಂಬಂಧಪಟ್ಟಿರುವುದರಿಂದ ಈ ಹಣದ ಖರ್ಚು ವೆಚ್ಚಗಳಿಂದ ದೇಶದ ಜನರಿಗೆ ಎಷ್ಟರ ಮಟ್ಟಿನ ಪ್ರಯೋಜನಗಳಾಗಿವೆ ; ಹಾಗೆ ಪ್ರಯೋಜನಗಳಾಗಿದ್ದರೆ ಅವು ಎಷ್ಟರ ಮಟ್ಟಿಗೆ ಪ್ರಜೆಗಳಿಗೆ ಲಭಿಸಿರುತ್ತವೆ ; ಹಾಗೆ ಅವುಗಳೊಂದುವೇಳೆ ಪ್ರಜೆಗಳಿಗೆ ಲಭಿಸದಿದ್ದರೆ ಮತ್ತೆ ಯಾರಿಗೆ ಲಭಿಸಿರುತ್ತವೆ ; ಈ ಖರ್ಚುಗಳನ್ನು ಮಾಡಿದ್ದರಿಂದ ದೇಶಕ್ಕೆ ಎಷ್ಟರ ಮಟ್ಟಿನ ಅನುಕೂಲವಾಗಿದೆ, ಹೀಗೆ ಇಷ್ಟೊಂದು ಭಾರಿ ಮೊತ್ತದ ಹಣವನ್ನು ವಿನಿಯೋಗ ಮಾಡತಕ್ಕದ್ದರ ಬಗ್ಗೆ ಯಾವ ಆರ್ಥಿಕ ಮತ್ತು ರಾಜಕೀಯ ನೀತಿ ನೈಪುಣ್ಯತೆ ಅಡಗಿದೆ—ಎನ್ನತಕ್ಕದ್ದನ್ನೆಲ್ಲಾ ನಾವೀಗ ಕೂಲಂಕಷವಾಗಿ ಪರಿಶೀಲನೆಮಾಡಿ ನೋಡತಕ್ಕಂಥ ಒಂದು ದೊಡ್ಡ ಜವಾಬ್ದಾರಿ ಈ ಮಾನ್ಯ ಸಭೆಯವರಾದ ನಮ್ಮೆಲ್ಲರ ಮೇಲೂ ಬಿದ್ದಿದೆ. ಅದು ನಾವು ನಿರ್ವಹಿಸಬೇಕಾದಂಥ ಕೆಲಸ. ಈ ದಿವಸ ಸರ್ಕಾರದವರು ನಮ್ಮ ಮುಂದೆ ನಾನಾ ಬಾಬುಗಳನ್ನಿಟ್ಟಿದ್ದಾರೆ. ಆದರೆ ಈ ಪೈಕಿ ಕೆಲವು ಬಾಬುಗಳ ಬಗ್ಗೆ ನನ್ನ ರಚನಾತ್ಮಕ ಟೀಕೆಯನ್ನೂ ಮತ್ತೆ ಕೆಲವು ಬಾಬುಗಳ ಬಗ್ಗೆ ನನ್ನ ಖಚಿತವಾದ ಅಭಿಪ್ರಾಯವನ್ನೂ ಸರ್ಕಾರದವರಿಗೆ ಕೊಡಬೇಕೆಂದು ಇಚ್ಛೆಪಟ್ಟಿದ್ದೇನೆ. ಆದರೆ ನಾನು ಈ ವಿಚಾರಗಳ ಮೇಲೆ ಪ್ರಸ್ತಾಪ ಮಾಡುವ ಮೊದಲು ನನ್ನ ಸ್ವಂತ ಕ್ಷೇತ್ರದ ಬಗ್ಗೆ ಒಂದೆರಡು ಮಾತುಗಳನ್ನಾಡಲು ಅಪೇಕ್ಷಿಸುತ್ತೇನೆ. ಇಲ್ಲಿಯತನಕ ನಾನು ನನ್ನ ಕ್ಷೇತ್ರದ ಬಗ್ಗೆ ಅಷ್ಟು ಹೆಚ್ಚಿನ ಆಸಕ್ತಿಯನ್ನೇನೂ ವಹಿಸಲಿಲ್ಲ. ಇದು ನನ್ನ ಒಂದು ದೊಡ್ಡತಪ್ಪು. ನಾನು ಈವರೆಗೂ ನನ್ನ ಕ್ಷೇತ್ರಕ್ಕೆ ಅತ್ಯಗತ್ಯವಾಗಿ ಬೇಕಾಗಿರುವಂಥ ಒಂದು ರಸ್ತೆ, ಬಾವಿ, ಸ್ಕೂಲು ಇತ್ಯಾದಿಗಳ ವಿಚಾರಗಳಲ್ಲಿ ಒಂದಕ್ಕೂ ಅಷ್ಟಾಗಿ ಗಮನ ಕೊಟ್ಟಿಲ್ಲ. ಯಾವ ಜನರು ನನ್ನನ್ನು ಆರಿಸಿ ಈ ಮಾನ್ಯ ಸಭೆಗೆ ಕಳುಹಿಸಿ ಕೊಟ್ಟಿದ್ದಾರೋ ಅಂಥ ಜನರು ಇರುವುದು ಆ ಹೊಸನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳು ಸೇರಿರುವಂಥ ಒಂದು ಕಾನ್ಸ್ಟಿಟ್ಯುಯೆನ್ಸಿಯಲ್ಲಿ. ಈ ಕಾನ್ಸ್ಟಿಟ್ಯುಯೆನ್ಸಿ ನಮ್ಮ ದೇಶದ ಪಶ್ಚಿಮ ಗಡಿ ಸರಹದ್ದಿನಲ್ಲಿದೆ. ಹಿಂದೆ ಇದು ಬಿದನೂರು ರಾಜ್ಯವಾಗಿತ್ತು. ಆ ರಾಜ್ಯವನ್ನು ಹೈದರಾಲಿಯು ಕೈಬಿಟ್ಟನಂತರ ಅದು ಬ್ರಿಟಿಷರ ಆಡಳಿತಕ್ಕೆ ಸೇರಿದನಂತರ ಕೌಲೇ ದುರ್ಗದಲ್ಲಿದಂಥ ಕಛೇರಿಗಳನ್ನೆಲ್ಲಾ, ಅದು ಬಹಳ ಕಾಡು ಪ್ರದೇಶವೆಂತಲೂ, ಆ ಸ್ಥಳಕ್ಕೆ ಜನರು ಹೋಗಿ ಬರಲು ಬಹಳವಾಗಿ ಹೆದರುತ್ತಿದ್ದಾರೆಂದೂ ಹೇಳಿ, ಇತ್ತೀಚೆಗೆ ಆ ಕಛೇರಿಗಳನ್ನೆಲ್ಲಾ ತೀರ್ಥಹಳ್ಳಿ ಮತ್ತು ಹೊಸನಗರ ಟೌನುಗಳಿಗೆ ತಂದರು. ಆದರೆ ಆಗಿನ ಕಾಲದಿಂದಲೂ ಈವರೆಗೂ ಆ ಗುಡ್ಡಗಾಡಿನಲ್ಲಿ ವಾಸ ಮಾಡುತ್ತಿರುವಂಥ ಜನರ ಮೇಲೆ ಬ್ರಿಟಿಷ್ ಆಳಿಕೆಯಲ್ಲಿ ಅವರ ಕೃಪಾಕಟಾಕ್ಷ ಬೀಳಲಿಲ್ಲವೆಂದು ಹೇಳಿದರೆ ಅದು ಅಷ್ಟೇನೂ ಒಂದು ಅತಿಶಯೋಕ್ತಿಯಾಗಲಾರದು. ಹೊಸನಗರದಿಂದ ಶಿವಮೊಗ್ಗಾಕ್ಕೆ ಬರತಕ್ಕಂಥ ರಸ್ತೆಯಲ್ಲಿ ಒಂದು ಸೇತುವೆಯಿತ್ತು. ಆ ಸೇತುವೆ ಮುರಿದುಹೋಗಿ ಬಹಳ ದಿನಗಳ ತನಕ ಹೊಸನಗರಕ್ಕೂ ಮತ್ತು ಹೊಸನಗರದಿಂದ ಶಿವಮೊಗ್ಗಾಕ್ಕೂ ಬರತಕ್ಕ ಬಸ್ಸು ಮತ್ತು ಲಾರಿಗಳು 20-30 ಮೈಲಿಗಳನ್ನು ಸುತ್ತಿಕೊಂಡು ಬರಬೇಕಾಗಿತ್ತು. ಈಗೇನೋ ಆ ಸೇತುವೆಯ ರಿಪೇರಿಯನ್ನು ಹಿಡಿದಿದ್ದಾರೆಂದು ಕೇಳುತ್ತೇನೆ. ಇದೇರೀತಿ ರಿಪ್ಪನ್‌ಪೇಟೆಯಿಂದ ತೀರ್ಥಹಳ್ಳಿಗೆ ಹೋಗಲು ಒಂದು ರಸ್ತೆಯಿದೆ. ಶಿವಮೊಗ್ಗಾದಿಂದ ಸಾಗರಕ್ಕೊಂದು ರಸ್ತೆಯಿದೆ. ಇನ್ನು ಸಾಗರದಿಂದ ಜೋಗಿಗೂ, ತೀರ್ಥಹಳ್ಳಿಯಿಂದ ಹೊಸನಗರಕ್ಕೂ ಮತ್ತು ಹೊಸನಗರದಿಂದ ಹುಲಿಕಲ್ ಘಾಟಿಗೂ ಹೀಗೆ ನಾಲ್ಕೈದು ರಸ್ತೆಗಳಿರುತ್ತವೆ. ಈ ನಾಲ್ಕೈದು ರಸ್ತೆಗಳೂ ಕೂಡ ಮಳೆಗಾಲದಲ್ಲಿ ಬಹಳವಾಗಿ ಕೆಟ್ಟುಹೋಗಿ ಪ್ರಯಾಣಿಕರಿಗೆ ತಿರುಗಾಡಲು ಸಾಧ್ಯವೇ ಇಲ್ಲದಂತಾಗುತ್ತವೆ. ಆದರೆ ಇದೇ ಸಂದರ್ಭದಲ್ಲಿ ನಾನು ಮತ್ತೊಂದು ಬಹುಮುಖ್ಯವಾದ ಅಂಶವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಹಿರೇಭಾಸ್ಕರದಲ್ಲಿ ವಿದ್ಯುಚ್ಛಕ್ತಿಗಾಗಿ ಒಂದು ರಿಜರ್ವಾಯಿರನ್ನು ಕಟ್ಟಿದನಂತರ ಅಲ್ಲಿ ಕೆಲವು ಗ್ರಾಮಗಳು ಮುಳುಗಡೆಯಾದವು ಮತ್ತೆ ಕೆಲವು ಗ್ರಾಮಗಳವರು ದ್ವೀಪಾಂತರ ವಾಸಿಗಳಾಗಿರುತ್ತಾರೆ. ಹೀಗೆ ಈ ದಿವಸ ಕೆಲವರು ಅಲ್ಲಿ ಸುತ್ತಲೂ ನೀರಿನಿಂದ ಆವರಿಸಲ್ಪಟ್ಟು ಆ ಒಂದು ಶಿಕ್ಷೆಗೊಳಗಾಗಿದ್ದಾರೆ. ಈಗ ತಾವುಗಳು ವಾಸಮಾಡುತ್ತಿರುವ ಸ್ಥಳದ ಸುತ್ತಲೂ ಒಂದು ಕಂದಕವನ್ನು ಹೊಡೆದು ಅದರಲ್ಲಿ ನೀರನ್ನು ಬಿಟ್ಟು ನೀವು ಎತ್ತ ಕಡೆಗೂ ಹೋಗದಹಾಗೆ ನಿಮ್ಮ ಸಂಚಾರಕ್ಕೆ ಹೀಗೊಂದು ಪ್ರತಿಬಂಧನವನ್ನುಂಟುಮಾಡಿದರೆ ಅದು ಎಂಥ ಒಂದು ದೊಡ್ಡ ತಕ್ಲೀಫಾಗುತ್ತದೆಂಬುದು ತಮಗೆಲ್ಲರಿಗೂ ಗೊತ್ತೇ ಇದೆ. ಇಂಥ ಒಂದು ಅಪರಾಧವನ್ನು ಆ ಪ್ರದೇಶದ ಕೆಲವು ಜನಗಳಿಗೆ ಆ ಹಿರೇಭಾಸ್ಕರ ಪ್ರಾಜೆಕ್ಟನ್ನು ಕಟ್ಟುವ ಸಂಬಂಧವಾಗಿ ಮಾಡಿರುತ್ತಾರೆ. ಹೀಗೆ ಆ ಪ್ರದೇಶದ ಜನರು ಎತ್ತ ಕಡೆಗೂ ಹೋಗದಂಥ ಒಂದು ತೊಂದರೆಗೊಳಗಾಗಿ, ಅವರಿಗೆ ವೈದ್ಯ ಸೌಕರ್ಯ ಇತ್ಯಾದಿ ಯಾವ ಒಂದು ಅನುಕೂಲತೆಯೂ ಇಲ್ಲದಿದೆ. ಅನೇಕ ಸಂದರ್ಭಗಳಲ್ಲಿ ಅಲ್ಲಿ ಕಾಯಿಲೆಯಿಂದ ನರಳತಕ್ಕಂಥ ಜನರನ್ನು ಆಸ್ಪತ್ರೆಗಳಿರುವ ಬೇರೆ ಪ್ರದೇಶಗಳಿಗೆ ಹೊತ್ತುಕೊಂಡು ಹೋಗಬೇಕಾಗಿ ಬರುತ್ತದೆ. ಹೀಗೆ ಜನರನ್ನು ಹೊತ್ತು ಸಾಗರಕ್ಕೋ ಅಥವಾ ಶಿವಮೊಗ್ಗಾಕ್ಕೋ ಸಾಗಿಸುವಾಗ ಕೆಲವರು ದಾರಿಯಲ್ಲೇ ಸತ್ತುಹೋಗಿದ್ದಾರೆ. ಹೀಗೆ ಆ ಜನರು ಅಂಥ ಗುಡ್ಡಗಾಡುಗಳಲ್ಲಿ ವಾಸವಾಗಿದ್ದರೂ, ಇತರ ಎಲ್ಲಾ ಜನರಂತೆ ಅವರೂ ಸರ್ಕಾರಕ್ಕೆ ಕಂದಾಯ ಕವಳಿಗೆಯನ್ನು ಕೊಡುತ್ತಿದ್ದಾರೆ. ಇತರ

ಎಲ್ಲಾ ತೆರಿಗೆಗಳನ್ನೂ ಕೊಡುತ್ತಿದ್ದಾರೆ. ಇಷ್ಟೆಲ್ಲಾ ಸರ್ಕಾರಕ್ಕೆ ಅವರು ತೆರುತ್ತಿದ್ದಾಗ್ಗೂ ಕೊನೆಗೆ ಅವರಿಗೆ ಒಂದು ವೈದ್ಯ ಸೌಕರ್ಯವಾಗಲಿ ಅಥವಾ ಒಂದು ಸರಿಯಾದ ರಸ್ತೆ ಸೌಕರ್ಯವಾಗಲಿ ಇಲ್ಲ.

ಶ್ರೀ ಕೆ. ಹನುಮಂತಯ್ಯ.—ತಾವು ಈಗ ತಾನೆ ಕಾಯಿಲೆಯಾದಂಥ ಜನರನ್ನು ಹೊತ್ತು ಶಿವಮೊಗ್ಗಿಗೆ ಸಾಗಿಸುವಾಗ ಕೆಲವರು ದಾರಿಯಲ್ಲೇ ಸತ್ತುಹೋಗಿದ್ದಾರೆಂದು ಹೇಳಿದಿರಿ. ಇದಕ್ಕೆ ತಾವು ಒಂದು ನಿದರ್ಶನವನ್ನಾದರೂ ಕೊಡಬಲ್ಲಿರಾ ?

ಶ್ರೀ ಎಸ್. ಗೋಪಾಲಗೌಡ.—ಈಗ ಸದ್ಯದಲ್ಲಿ ಆ ಅಂಕಿ ಅಂಶಗಳನ್ನೆಲ್ಲಾ ನಾನು ಇಟ್ಟುಕೊಂಡಿಲ್ಲ. ಆ ಮೇಲೆ ನಾನು ಆ ಅಂಶಗಳನ್ನೆಲ್ಲಾ ಶೇಖರಿಸಿ ಸಾಲುವಾರಾಗಿ ಜೋಡಿಸಿ ತರುತ್ತೇನೆ. ಮುಂದಿನ ಅಧಿವೇಶನಕ್ಕೆ ಈ ಸಂಬಂಧವಾಗಿ ನಾನು ಒಂದು ಪ್ರತ್ಯೇಕವಾಗಿ ಪ್ರಶ್ನಾವಳಿಯನ್ನೇ ಕಳುಹಿಸಬೇಕೆಂತಲೂ ಮನಸ್ಸುಮಾಡಿದ್ದೇನೆ. ಸರ್ಕಾರದವರು ಈಗಲಾದರೂ ಆ ಜನರು ಹಾಗೆ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದರೂ, ಅವರೂ ಸಹ ಈ ಮಾನವ ಗುಂಪಿಗೆ ಸೇರಿದವರಾಗಿರುತ್ತಾರೆಂಬ ಅಂಶವನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಆ ಜನಗಳ ಹಿತರಕ್ಷಣೆಯ ಕಡೆಗೂ ಸಾಕಷ್ಟು ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಲಾದರೂ ತಾವು ಆ ಪ್ರದೇಶಕ್ಕೆ ಸಾಕಷ್ಟು ವೈದ್ಯ ಸಹಾಯ, ಮಾರ್ಗಾನುಕೂಲತೆ ಇತ್ಯಾದಿಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹೊತ್ತೂ ಕೂಡ ಆ ಪ್ರದೇಶದಲ್ಲಿ ವಾಸಮಾಡತಕ್ಕ ಜನರಿಗೆ ಒಂದು ಸ್ಕೂಲಿಲ್ಲ ; ಒಂದು ಆಸ್ಪತ್ರೆಯಿರುವುದಿಲ್ಲ. ನಾನು ಎಲ್ಲೋ ಒಂದಾವರ್ತಿ ಮಾತ್ರ ದೋಣಿಯಲ್ಲಿ ದಾಟಿಕೊಂಡು ಆ ಪ್ರದೇಶಕ್ಕೆ ಹೋಗಿದ್ದೆ.

ಶ್ರೀ ಕೆ. ಹನುಮಂತಯ್ಯ.—ಹಾಗೆ ನೀವು ಹೋಗುವಾಗ ನನ್ನನ್ನೂ ಕೂಡ ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಬಾರದಾಗಿತ್ತೇ ?

ಶ್ರೀ ಎಸ್. ಗೋಪಾಲಗೌಡ.—ತಮಗೆ ತುಂಬ ತೊಂದರೆಯಾಗುತ್ತದೆ. ಅಲ್ಲಿ ದಾರಿ ನಡೆಯಬೇಕು. ನಮ್ಮ ವಿಚಾರವಾದರೇನೋ ಪರವಾ ಇಲ್ಲ. ಆದರೆ ತಮ್ಮ ವಿಚಾರ ಹಾಗಲ್ಲ. ನಾನು ಚುನಾವಣೆಯಾಗಿ ಬಂದಿರತಕ್ಕಂಥ ಆ ನನ್ನ ಕ್ಷೇತ್ರ ಈ ಅಠಾರ ಕಛೇರಿಗೆ 250 ಮೈಲಿಗಳ ಫಾಸಲೆಯಲ್ಲಿದೆ. ಆದರೆ ಸಾಮಾನ್ಯವಾಗಿ ಮಲೆನಾಡು ಜನರು ವಿನಯಶೀಲರು. ಅವರ ಸ್ವಭಾವ ಯಾವಾಗ್ಗೂ ಈ ಕೋರ್ಟು-ಕಛೇರಿ ಪೋಲೀಸ್ ಸ್ಟೇಷನ್ ಇತ್ಯಾದಿ ವ್ಯವಹಾರಗಳಿಂದ ದೂರವಾಗಿರಬೇಕೆಂಬುದೇ ಆಗಿದೆ ; ಅಂದರೆ ಅವರು ಅಷ್ಟು ಸಂಪನ್ನರು ಮತ್ತು ವಿನಯಶೀಲ ಜನಗಳು. ಆದರೆ ಇತರರು ಆ ಜನಗಳ ವಿನಯ ಮತ್ತು ಶೀಲ ಸ್ವಭಾವಗಳನ್ನು ಅವರ ಅಸಮರ್ಥತೆಯೆಂದು ಭಾವಿಸಿರುವಂತೆ ಕಾಣುತ್ತದೆ. ಸರ್ಕಾರಕ್ಕೂ ಬಹುಶಃ ಅದೇ ಭಾವನೆ ಇದೆಯೋ ಏನೋ! ಆದರೆ ಈ ಮೈಸೂರು ಸಂಸ್ಥಾನ ಅಭಿವೃದ್ಧಿಗೆ ಬರಬೇಕಾದರೆ ಸಂಸ್ಥಾನದ ಮೂಲೆ ಮೂಲೆಗಳೆಲ್ಲಾ ಅಭಿವೃದ್ಧಿಗೆ ಬರಲೇಬೇಕು. ಇದು ತೀರಾ ಅಗತ್ಯ ಮತ್ತು ಆವಶ್ಯಕ. ಮಲೆನಾಡು ಭರತಖಂಡದಲ್ಲೆಲ್ಲಾ ಅಡಕೆ, ಕಾಫಿ, ಏಲಕ್ಕಿ ಮತ್ತು ಬಾಳೆ ಇತ್ಯಾದಿ ವಸ್ತುಗಳಿಗೆ ಸುಪ್ರಸಿದ್ಧಿ ಪಡೆದಿದೆ. ಈ ಬೆಳೆಗಳು ಮಾತ್ರವೇ ಅಲ್ಲದೆ ಆ ಪ್ರದೇಶದಲ್ಲಿ ಅನೇಕ ತರಹ ಬೆಲೆಬಾಳತಕ್ಕಂಥ ಅಮೂಲ್ಯ ಗಿಡ ಮೂಲಿಕೆಗಳೂ ಹೇರಳವಾಗಿ ದೊರೆಯುತ್ತವೆ. ಹೀಗಿರುವಾಗ ತಾವು ಈ ವಿಚಾರಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ, ಆ ಮಲೆನಾಡಿರುವುದು ಕೇವಲ ಆ ಭದ್ರಾವತಿ ಕಾರ್ಖಾನೆಯ ಸೌದೆ ಸರಬರಾಯಿಗಾಗಿಮಾತ್ರ ಎಂದು ಖಂಡಿತ ಭಾವಿಸಬಾರದು. ಮಲೆನಾಡು ಅಭಿವೃದ್ಧಿಯಾದರೆ ದೇಶದ ಸಂಪತ್ತು ಹೆಚ್ಚುತ್ತದೆ. ಹಾಗೆ ಆ ದೈವ ದೊರಕಿಸಿಕೊಟ್ಟಿರುವಂಥ ಸೌಲಭ್ಯಗಳನ್ನು ನಾವು ಹೆಚ್ಚಿಸಿಕೊಳ್ಳದೆ ಹೋದರೆ ಅದು ನಮ್ಮಲ್ಲಿರುವ ಮೂರ್ಖತನವನ್ನು ತೋರಿಸುತ್ತದೆ. ಆದಕಾರಣ ಆ ಮಲೆನಾಡನ್ನು ನಾವು ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸಲು ಸತತವೂ ಪ್ರಯತ್ನಪಡಬೇಕಾಗಿರುತ್ತೆಂದು ಹೇಳುತ್ತೇನೆ. ಈಗ ಈ ರಸ್ತೆಗಳ ರಿಪೇರಿಗೋಸ್ಕರವಾಗಿ ಕೆಲವು ಹಣವನ್ನು ತೆಗೆದಿಟ್ಟಿದ್ದಾರೆ, ಆದರೆ ಆ ಹಣವು ಆ ಕೆಲಸಕ್ಕೆ ವಿನಿಯೋಗವಾಗದೆ ವರ್ಷದ ಕೊನೆಯ ತನಕವೂ ಹಾಗೆಯೇ ಉಳಿದಿದ್ದು ಕೊನೆಯಲ್ಲಿ ಲ್ಯಾಪ್ಸ್ ಆಗಿ ಹೋಗುತ್ತದೆ. ಆದರೆ ನನಗೆ ಈ ಅಧಿಕಾರಿಗಳ ಮನೋಭಾವ ಗೊತ್ತಿರುವುದರಿಂದ ಅವರಲ್ಲಿ ಪದೇ ಪದೇ ಹೋಗಿ ಅವರನ್ನು ನೋಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಹೀಗಾಗಿ ಈ ಹೊತ್ತು ನನ್ನ ಕ್ಷೇತ್ರದ ಪರಿಸ್ಥಿತಿ ಬಹಳ ಹೀನಸ್ಥಿತಿಯಲ್ಲಿದೆ. ಅಲ್ಲಿಗೆ ಅತ್ಯಗತ್ಯವಾಗಿ ಬೇಕಾಗಿರುವಂಥ ವಿದ್ಯಾ ಸೌಕರ್ಯ, ವೈದ್ಯ ಸೌಕರ್ಯಗಳೊಂದೂ ಇಲ್ಲವಾದದ್ದರಿಂದ ಆ ಮಲೆನಾಡಿನ ಕಡೆಗೆ ಸರ್ಕಾರದವರು ತಮ್ಮ ತೀವ್ರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸ ನಮ್ಮ ಮಲೆನಾಡಿನಲ್ಲಿರತಕ್ಕಂಥ ಜೋಗ್ ಜಲಪಾತದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರುಮಾಡುತ್ತಿದ್ದಾರೆ. ಆ ವಿದ್ಯುಚ್ಛಕ್ತಿಯಿಂದ ನಾಡೆಲ್ಲಾ ಬೆಳಕಾಗಿದ್ದರೂ, ಆ ವಿದ್ಯುಚ್ಛಕ್ತಿ ಎಲ್ಲಿ ತಯಾರಾಗುತ್ತಿದೆಯೋ ಆ ಪ್ರದೇಶಕ್ಕೇ ಇನ್ನೂ ಈ ಬೆಳಕು ಬಂದಿಲ್ಲ. ಎಷ್ಟೋ ವರ್ಷಗಳು ಕಳೆದುಹೋದವು. ಆದರೆ ಈಗೇನೋ ಅಲ್ಲಲ್ಲೇ ಕಂಬಗಳನ್ನೂ ಮತ್ತು ತಂತಿಯನ್ನೂ ಈಗೀಗ ಹಾಕುತ್ತಿದ್ದಾರೆ. ಮಲೆನಾಡಿನ ಮಂತ್ರಿಗಳು ಮಂತ್ರಿಮಂಡಲದಲ್ಲಿ ಕೆಲಸ ಮಾಡುತ್ತಿದ್ದಾಗ್ಗೂ ಮಲೆನಾಡಿನ ಅಭಿವೃದ್ಧಿಗೆ ಸಾಕಷ್ಟು ಗಮನವನ್ನು ಕೊಟ್ಟಿಲ್ಲವೆಂಬ ಅಂಶವನ್ನು ನಾನೀ ಸಂದರ್ಭದಲ್ಲಿ ತಿಳಿಸಲು ತುಂಬ ವಿಷಾದಪಡುತ್ತೇನೆ. ಮೈದಾನದ ಸಂಪತ್ತನ್ನು ಹೆಚ್ಚಿಸುವುದಕ್ಕಿಂತ ಆ ಮಲೆನಾಡಿನ ಸಂಪತ್ತನ್ನು ಹೆಚ್ಚಿಸಲು ಅಲ್ಲಿ ಸದವಕಾಶಗಳು ಜಾಸ್ತಿಯಿರುತ್ತವೆ. ಅದಕ್ಕಾಗಿಯಾದರೂ ಆ ಮಲೆನಾಡಿನ ಅಭಿವೃದ್ಧಿಗೆ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈಗ ಜಾರಿಯಲ್ಲಿರತಕ್ಕಂಥ ಭೂಕಂದಾಯದ ಸರ್ವೆಯನ್ನು ಪುನಃ ಪರಿಶೀಲನೆ ಮಾಡಬೇಕೆಂದು ಅನೇಕ ಮಾನ್ಯ ಸದಸ್ಯರು ಒತ್ತಿ ಒತ್ತಿ ಹೇಳಿರುತ್ತಾರೆ. ಈ ಭೂಮಿಯ ರೀಸರ್ವೆ ಕಾರ್ಯವನ್ನು ತ್ವರಿತಗೊಳಿಸಬೇಕು. ಇದರಿಂದ ಸರ್ಕಾರಕ್ಕಿರುವ ಕಷ್ಟ ಬಹಳ ಮಟ್ಟಿಗೆ ಕಡಮೆಯಾಗುತ್ತದೆ. ಈ ಕಾರ್ಯವನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕಾಗಿದೆ. ಈ ಭೂಸಾಗುವಳಿ ಹಕ್ಕಿನ ವಿಚಾರದಲ್ಲಿ ಆ ನಿಮ್ಮ ಅವಧಿ ಅಧಿವೇಶನದಲ್ಲಿ ಪಾಸಾದ ನಿರ್ಣಯಕ್ಕನುಸಾರವಾಗಿ ಗೇಣಿದಾರರಾಗಿರತಕ್ಕಂಥ ರೈತರ ಹಿತಸಾಧನೆಗಾಗಿ ಸರ್ಕಾರದವರು ಕೂಡಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಮೂರನೆಯದಾಗಿ ಪಟೇಲ್ ಶ್ಯಾನುಭೋಗರ ಹಕ್ಕು ಒಂದೇ ಸಮವಾಗಿ ವಂಶಪಾರಂಪರ್ಯವಾಗಿ ನಡೆದುಕೊಂಡು ಬರುತ್ತಿದೆ. ಅವರಿಗೆ ಈಗ ಬರತಕ್ಕಂಥ ಪೋಟಿಗೆ ಬಹಳ ಕಮ್ಮಿ ; ಕೆಲಸ ಮಾತ್ರ ಜಾಸ್ತಿಯಾಗಿರುತ್ತದೆ. ಅವರಿಗೆ ಇನ್ನೂ ಹೆಚ್ಚಿನ ಅಧಿಕಾರ ವ್ಯಾಪ್ತಿಯನ್ನು ಕೊಟ್ಟು ಈ ವಂಶಪಾರಂಪರ್ಯವಾಗಿ ಬರುತ್ತಿರುವಂಥ ಪದ್ಧತಿಯನ್ನು ರದ್ದುಮಾಡಿ,

(ಶ್ರೀ ಎಸ್. ಗೋಪಾಲಗೌಡ.)

ಇವರೆಲ್ಲರಿಗೂ ಸರಿಯಾದ ಒಂದು ಸಂಬಳ ಸಾರಿಗೆಯನ್ನು ನಿಗದಿಮಾಡಿ ಇದನ್ನು ಪುನರ್ರಚನೆ ಮಾಡದ ಹೊರತು ಸರಿಹೋಗುವುದಿಲ್ಲವೆಂದು ತಿಳಿಸಲಚ್ಛಿಸುತ್ತೇನೆ.

ಅಧ್ಯಕ್ಷರು.—ಅದಕ್ಕೆ ಅವರು ಒಪ್ಪುತ್ತಿಲ್ಲವಲ್ಲ.

ಶ್ರೀ ಎಸ್. ಗೋಪಾಲಗೌಡ.—ಮುಂಬೈ ಪ್ರಾಂತ್ಯದಲ್ಲಿ ಹಾಗೆ ಒಂದು ರೆಸಲ್ಯೂಷನ್ ತಂದು ಅದನ್ನು ಪಾಸ್ ಮಾಡಿದ್ದಾರೆ. ಅದರಿಂದ ಅಲ್ಲೆಲ್ಲಾ ಅವರಿಗೆ ಅನುಕೂಲವಾಗಿದೆ. ಆ ರೀತಿ ತಾವೂ ಮಾಡಿದರೆ ಚೆನ್ನಾಗಿರುತ್ತದೆ. ಆದರೆ ಅಭಿಪ್ರಾಯದಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಇರಬಹುದು. ಈಗ ಬರೆಯುತ್ತಿರುವಂಥ ಆ ಪಹಣಿ ಲೆಕ್ಕ ಬಹಳ ಜವಾಬ್ದಾರಿಯುತವಾದಂಥ ಕೆಲಸ. ಆ ಲೆಕ್ಕದಲ್ಲಿ ಆಯಾ ಜಮೀನಿನಲ್ಲಿ ಇಟ್ಟಿರತಕ್ಕಂಥ ಬೆಳೆ ಸ್ವಂತ ಸಾಗುವಳಿಯಿಂದ ಮಾಡಲ್ಪಟ್ಟಿದೆಯೇ ಅಥವಾ ಬೇರೆ ರೈತರಿಂದ ಗೇಣಿಗಾಗಿ ಮಾಡಲ್ಪಟ್ಟಿದ್ದಾಗಿರುತ್ತದೆಯೇ ಎನ್ನುವುದನ್ನೆಲ್ಲಾ ಸರಿಯಾಗಿ ನಮೂದಿಸಬೇಕು. ರೈತರು ಒಂದೇ ಸಮನಾಗಿ 7-8 ವರ್ಷಗಟ್ಟಲೆ ವ್ಯವಸಾಯ ಮಾಡಿಕೊಂಡು ಬಂದಿದ್ದಾಗ್ಯೂ ಯಾವ ಕಾಗದ ಪತ್ರದಲ್ಲೂ ದಾಖಲೆಯೇ ಇರುವುದಿಲ್ಲ. ಆ ರೈತರಿಗೆ ಜಮೀನ್ದಾರರು ರಶೀದಿ ಸಹ ಕೊಡುವುದಿಲ್ಲ. ಇನ್ನು ಮುಂದೆ ಇದನ್ನು ಆ ಕಂದಾಯದ ಪಟ್ಟಿಗಳಲ್ಲಿ ಕೂಡ ಬರೆಯಬೇಕೆಂದು ಹೇಳುತ್ತೇನೆ. ಈ ಬಗ್ಗೆ ಮದ್ರಾಸಿನಲ್ಲಿ ಈ ದಿವಸ ಜಾರಿಗೆ ತಂದಿರತಕ್ಕ ಪದ್ಧತಿ ಸರಿಯಾಗಿದೆ. ಯಾರ ಯಾರ ಜಮೀನಿನಲ್ಲಿ ಯಾರು ಯಾರು ಬೆಳೆ ತೆಗೆದಿದ್ದಾರೆ, ಎಷ್ಟೆಷ್ಟು ಬೆಳೆ ಬರಬಹುದು, ಅದರಲ್ಲಿ ಗೇಣೀದಾರನಿಗೆ ಎಷ್ಟು ಹೋಗಬೇಕು ಜಮೀನ್ದಾರನಿಗೆಷ್ಟು ಹೋಗಬೇಕು ಎನ್ನುವುದನ್ನೆಲ್ಲಾ ಖಚಿತವಾಗಿ ನಮೂದು ಮಾಡದಿದ್ದರೆ ಮುಂದೆ ಇದು ಬಹಳ ಕಷ್ಟಕ್ಕೆ ಈಡಾಗುತ್ತದೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೇ ನಿಗಾ ಕೊಡಬೇಕಾಗಿದೆ. ಇನ್ನು ಈ ಕಂದಾಯದ ಬಾಕಿ ಸಹ ಅನೇಕ ವರ್ಷಗಳಿಂದ ವಸೂಲಾಗದೆ ಹಾಗೆಯೇ ನಿಂತುಬಂದಿದೆ. ಡಿಸ್ಟ್ರೆಸ್ಟ್ ಏರಿಯಾ ಎಂದು ಹೇಳಿದ್ದ ಕಡೆಯಲ್ಲೂ ಕೂಡ ಹಾಗೆ ನಿಂತಿದೆ. ಈ ಬಾಕಿಯನ್ನೆಲ್ಲಾ ವಸೂಲ್ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡು ಈ ಬಗ್ಗೆ ಅಪ್‌ಟುಡೇಟ್ ಅಂಕಿ ಅಂಶಗಳನ್ನು ಈ ಸಭೆಗೆ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಲೆನಾಡಿಗೆ ಈ ಗೇಣಿ ಹಕ್ಕು 1/6 ಭಾಗ ಎಂತಲೂ, ಮೈದಾನಕ್ಕೆ 1/5 ಭಾಗವಿರಬೇಕೆಂತಲೂ ಸರ್ಕಾರದ ಆಕ್ಟಿನಲ್ಲೇ ಹೇಳಿದೆ. ಈ ಹಿಂದೆ ಈ ಬಗ್ಗೆ ಒಂದು ಆರ್ಡರ್ ಕೂಡ ಹೊರಟಿತ್ತೆಂದು ಕೇಳುತ್ತೇನೆ. ಆದರೆ ಈ ದಿವಸ ರೈತನಾದವನಿಗೆ ಆಗುತ್ತಿರುವಂಥ ಕೆಲವು ದೌರ್ಜನ್ಯಗಳೂ—ಕಿರುಕುಳಗಳೂ ಸರ್ವಥಾ ನ್ಯಾಯವಾದವುಗಳಲ್ಲ. ಆತನು ಅಂಗಡಿಯಲ್ಲಿ ಒಂದಾವರ್ತಿ ಸಾಲಕ್ಕೆ ಕೈ ಹಾಕಿಬಿಟ್ಟರೆ—ಆತ ಎಷ್ಟು ಕೊಟ್ಟರೂ ಸಾಲಮಾತ್ರ ಹಾಗೆಯೇ ಉಳಿದಿರುತ್ತದೆ. ಸಾಲಕ್ಕಾಗಿ ಆತನು ತೆತ್ತೂ ತೆತ್ತೂ ಮೈ ಎಲುಬುಗಳೆಲ್ಲಾ ಬಿಟ್ಟುಕೊಂಡಿದ್ದಾಗ್ಯೂ ಕೊಡತಕ್ಕ ಸಾಲ ಇನ್ನೂ ಹಾಗೆಯೇ ಉಳಿದಿರುತ್ತದೆ. ಹೀಗಾಗಿ ಈ ದಿವಸ ಆ ರೈತನು ಒಂದು ಮೂಕಪ್ರಾಣಿಯಂತೆ ಇದ್ದುಕೊಂಡು ಹೇಳುವುದಕ್ಕೆ ಬಾಯಿಲ್ಲ, ಬರೆಯುವುದಕ್ಕೆ ಕೈಯಿಲ್ಲ . . . .

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಹಾಗಾದರೆ ಅಂಗಡಿಯವರು ಸಾಮಾನುಗಳನ್ನು ಹಾಗೆ ಸಾಲವಾಗಿಯೂ ಕೊಡಬಾರದೆಂದು ಹೇಳುತ್ತೀರಾ ? ಅಥವಾ ಅವರು ಸಾಮಾನುಗಳನ್ನು ಹಾಗೆಯೇ ಮುಫತ್ತಾಗಿ ಕೊಡಬೇಕಾಗಿತ್ತೇನು ?

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಒಬ್ಬ ರೈತನಿಗೆ 100 ರೂಪಾಯಿಗಳ ಸಾಲ ಕೊಟ್ಟರೆ, ಆ ಸಾಲ ತೀರ್ವೆಯ ಬಗ್ಗೆ ಆತನ ಅಜ್ಜ, ಅಪ್ಪ, ಆತ ಇವರೆಲ್ಲಾ ದುಡಿದರೂ ಸಾಲಮಾತ್ರ ತೀರಲಿಲ್ಲ ಅಂದರೆ, ಕೊಟ್ಟಿದ್ದೆಲ್ಲಾ ಬಡ್ಡಿಗೇ ಆಯಿತು ಅಂದರೆ ?

2 P.M.

ಅಂತಹ ಸಾಲಗಳಿವೆ. ಅಂತಹ ಸಾಲಗಳಿಗೆ moratorium ಮಾಡಿ ಅವರು ಸ್ವಲ್ಪ ಉತ್ತಮವಾಗುವುದಕ್ಕೆ ಬಿಡಿ. ಅವರನ್ನು ಸಾಲಕ್ಕೆ ಸಿಕ್ಕುವಂತೆ ಮಾಡಬೇಡಿ. ಆಮೇಲೆ ಬೇಕಾದರೆ ವಾಪಸ್ಸು ತೆಗೆದುಕೊಳ್ಳಿ. ವ್ಯವಸಾಯ ಮಾಡದೆಹೋದರೆ ನಮ್ಮ ರೈತರು ಆ ಪ್ರದೇಶದಲ್ಲಿ ಮಾನ ಇಟ್ಟುಕೊಂಡು ಜೀವನ ನಡೆಸಿಕೊಂಡು ಹೋಗುವುದು ಬಹಳ ಕಷ್ಟವಾಗುತ್ತದೆ. ಸರ್ಕಾರದ ಜಮೀನಿನಲ್ಲೂ ಕೂಡ ಇದು ನಡೆಯುತ್ತಿದೆ. ಇವೊತ್ತು ನಮ್ಮ ಜೋಡಿ ಗ್ರಾಮಗಳನ್ನು ರದ್ದುಪಡಿಸಬೇಕು ಎಂದು ಮಾಡಿದ್ದೇವೆ. ಕೆಲವು ಇನಾಂ ಗ್ರಾಮಗಳಲ್ಲಿ ಬಹಳ ತಗಾದೆ ನಡೆದಿದೆ, ಖರೀದಿ ಮಾಡುವುದು ಇತ್ಯಾದಿ ನಡೆದಿದೆ. ಇನಾಂ ಗ್ರಾಮಗಳಲ್ಲಿ ಅನೇಕ ವಿಧವಾದ ಸಂಪತ್ತುಗಳಿವೆ. ಅವೂ ಕೂಡ ಪರಭಾರೆ ಆಗತಕ್ಕಂಥ ಸಂದರ್ಭಗಳು ಇರಬಹುದು. ಕಾನೂನು ಬರುವುದಕ್ಕೆ ಮುಂಚಿತವಾಗಿ ರೈತರಿಗೆ ಸಿಕ್ಕುವ ಅನುಕೂಲ ರೈತರಿಗೆ ಸಿಕ್ಕುವ ಹಾಗೆ, ಸರ್ಕಾರಕ್ಕೆ ಬರುವ ಆದಾಯ ಸರ್ಕಾರಕ್ಕೆ ಬರುವಹಾಗೆ ಕಾನೂನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಗೇಣೀ ಕೇಸುಗಳನ್ನು ವಿಚಾರಿಸಲು ಅಮಲ್ದಾರರನ್ನು ನೇಮಕ ಮಾಡಿದ್ದಾರೆ. 50-100 ಕೇಸುಗಳು ಉಳಿದುಬಂದಿವೆ. ಅಮಲ್ದಾರರು ಮ್ಯಾಜಿಸ್ಟ್ರೇಟ್, ಮುನ್‌ಸೀಫ್, ಕೆಲಸ ಮಾಡಿಕೊಂಡು ಇದರ ಜೊತೆಗೆ ಈ ಕೆಲಸಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಈ ಪ್ರದೇಶದಲ್ಲಿ ಹೆಚ್ಚು ಗೇಣಿ ವಿವಾದಗಳು ಬರುವುದರಿಂದ ಒಬ್ಬರು Assistant Commissioner ಅವರನ್ನೇ ನೇಮಿಸಬೇಕು. ಚಿಕ್ಕಮಗಳೂರು ಡಿವಿಜನ್, ಸಾಗರ ಡಿವಿಜನ್ ಮತ್ತು ತೀರ್ಥಹಳ್ಳಿ ಡಿವಿಜನ್‌ಗಳಿಗೆ ತತ್‌ಕ್ಷಣ ಅಂಥ ಅಧಿಕಾರಿಗಳನ್ನು ನೇಮಿಸಿ ವಿವಾದಗಳನ್ನು ಇತ್ಯರ್ಥಮಾಡುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ತೀರ್ಥಹಳ್ಳಿಯಲ್ಲಿ ಪ್ರತಿಯೊಂದು ಕಡೆಯೂ ಓಡಾಡಿ ನ್ಯಾಯ ಒದಗಿಸುವ ಹಾಗೆ ಏರ್ಪಾಡು ಮಾಡಬೇಕು ಎಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಆ ಮೇಲೆ ವ್ಯವಸಾಯದ ಕೂಲಿಗಳ ಮತ್ತು plantation ಕೂಲಿಗಳ ಪರಿಸ್ಥಿತಿ ಬಹಳ ಹೀನಸ್ಥಿತಿಯಲ್ಲಿದೆ. ಇವೊತ್ತು ವ್ಯವಸಾಯದ ಕೂಲಿಗಳಿಗೆ Minimum Wages Act ಜಾರಿಗೆ ತರುವ ವಿಚಾರದಲ್ಲಿ ಎಲ್ಲಾ ಕಡೆಗೂ ಹೋಗಿ ಪರಿಶೀಲನೆ ಮಾಡಿದ್ದಾಯಿತು. ಯಾರೂ ಅವರ ಕಡೆ ರಕ್ಷಕರಿಲ್ಲ. ಏಕೆಂದರೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ, ರೈತರು disorganised ಆಗಿದ್ದಾರೆ ಎಂದು. ಅವರಲ್ಲಿ organisation ಇಲ್ಲ. ಸಾಮೂಹಿಕವಾಗಿ ಏನೂ bargain ಮಾಡುವ ಶಕ್ತಿ ಅವರಲ್ಲಿ ಉಳಿದಿಲ್ಲ. ಆದುದರಿಂದ ಅವರಲ್ಲಿ ಸಂಘಟನೆಯಾಗಬೇಕು. ರೈತರನ್ನು ಸಂಘಟಿಸುವುದು ಕಷ್ಟವಾದ ಕೆಲಸ. ಯಾರೂ ಆ ಕೆಲಸಕ್ಕೆ ಕೈ ಹಾಕುವುದಿಲ್ಲ. ಪೇಟೆಯಲ್ಲಿ ಮಾತ್ರ ಕಾರ್ಮಿಕರನ್ನು ಸಂಘಟನೆ ಮಾಡುವ ಕೆಲಸ ನಡೆಯುತ್ತಿದೆ. Plantation ಕೂಲಿಗಾರರಿಗೆ ಮತ್ತು Agriculture Labourers ಗೆ minimum wages ಸಿಕ್ಕುವಹಾಗೆ ಏರ್ಪಾಡುಮಾಡಬೇಕು ಎಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಇನ್ನು ವ್ಯವ

ಸಾಯ ಉತ್ಪನ್ನಗಳ ಬೆಲೆಗಳ ವಿಷಯದಲ್ಲಿ ಈಗಾಗಲೇ ಸಭೆಯಲ್ಲಿ ಗಹನವಾದ ವಿಚಾರಮಾಡಿದ್ದಾರೆ. ಮುಖ್ಯ ಮಂತ್ರಿಗಳು ಭತ್ತ ಮತ್ತು ರಾಗಿಗೆ ನಿಯಂತ್ರಿತ ಬೆಲೆಯನ್ನು ಗೊತ್ತುಮಾಡುತ್ತಾರೆಂದು ಹೇಳಿದ್ದಾರೆ. Control ಇದ್ದಾಗ ರೈತರಿಗೆ ಹಿಂಸೆಕೊಟ್ಟು 18 ರೂಪಾಯಿ 20 ರೂಪಾಯಿ ಕೊಟ್ಟು ಬಂದೋಬಸ್ತು ಮಾಡಿ ದವಸ ಧಾನ್ಯಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಆದರೆ ಇವೊತ್ತು ಬೆಲೆ ಇಳಿದು ಹೋಗಿ ಅನಿವಾರ್ಯವಾಗಿ 10-15 ರೂಪಾಯಿ ಭತ್ತಕ್ಕೆ ಬೆಲೆಯಿರುವಾಗ ಸರ್ಕಾರ ಅದರ ಕಡೆ ಗಮನ ಕೊಡುವುದೇ ಇಲ್ಲ. ಇವೊತ್ತು ರೈತರ ಪರಿಸ್ಥಿತಿಕಠಿಣವಾಗಿದೆ. ಸಾಲ ಸೋಲ ಮಾಡಿರುತ್ತಾರೆ. ಒಮ್ಮೆಗೇ ಒಂದು ಪಲ್ಲಾಕ್ಕೆ 10 ರೂಪಾಯಿಯಂತೆ ಕಡಿಮೆಯಾದರೆ ಎಷ್ಟು ಸಾಲ ತೀರಿಸಿಯಾರು? ಅದರಲ್ಲೂ ರೈತರ ಸಂಖ್ಯೆ ಅಪಾರವಾಗಿದೆ. ಆದ್ದರಿಂದ ಇದೊಂದು ವಿಷಯದಲ್ಲಿ ಸರ್ಕಾರದವರು ತತ್‌ಕ್ಷಣ ತಕ್ಕ ಕಾರ್ಯಕ್ರಮ ಕೈಗೊಂಡು ಮುಖ್ಯವಾಗಿ, ಕಾಫಿ, ಏಲಕ್ಕಿ, ಅಡಿಕೆ, ಹತ್ತಿ. ಆಲೂಗಡ್ಡೆ, ನೆಲಗಡಲೆ, ರಾಗಿ, ಬತ್ತ, ಇವುಗಳ ಬೆಲೆಯನ್ನು ಗೊತ್ತುಮಾಡಿ, ಅವಕ್ಕೆ ಮಾರುಕಟ್ಟೆಯನ್ನು ಏರ್ಪಾಡು ಮಾಡಬೇಕು. ಸಾಲದಿಂದ ರೈತರನ್ನು ಋಣ ಮುಕ್ತರನ್ನಾಗಿ ಮಾಡದೆ ಹೋದರೆ, ಕೇಳಿದಷ್ಟು ಸಾಲ ಅವರಿಗೆ ಸಿಕ್ಕದೆ ಹೋದರೆ ತಾನು ಬೆಳೆದಿದ್ದನ್ನು ಅವರು ತಕ್ಷಣ ಖರೀದಿಗೆ ಕೊಡುವುದು ತಪ್ಪುವುದಿಲ್ಲ. ಆದ್ದರಿಂದ ಒಂದು ಸಮಗ್ರ ದೃಷ್ಟಿ ಇದ್ದರೆ ಜನಜೀವನದ ಮಟ್ಟ ಮೇಲಕ್ಕೆ ಬರುತ್ತದೆ. ಒಂದು ಕಡೆ ಒಂದು ಮಾಡಿ ಇನ್ನೊಂದು ಕಡೆ ಒಂದನ್ನು ಬಿಟ್ಟರೆ ಅದರಿಂದ ಅಭಿವೃದ್ಧಿಯಾಗುವುದಿಲ್ಲ. ರೈತರಿಗೆ ಸಾಲ ಕೊಡುತ್ತೇವೆಂದು ಹೇಳುತ್ತಾರೆ. ಈಗ ಏನಾಗಿದೆಯೆಂದರೆ, ಜಮೀನು ಇರುವವರಿಗೆ ಮಾತ್ರ, ಆ ಜಮೀನು ಯಾರಿಗೂ ಈಡಾಗದೆ ಹೋದರೆ, ಸರ್ಕಾರ ಅದನ್ನು ವಶಪಡಿಸಿಕೊಳ್ಳದೆ ಇದ್ದರೆ, ಮಾತ್ರ ಸಾಲ ಕೊಡುತ್ತಾರೆ. ತಲೆತಲಾಂತರದಿಂದಲೂ, ಅಂದರೆ 90 ವರ್ಷಗಳಿಗೆ ಮೀರಿ ಗೇಣಿ ಕೊಡುತ್ತಾ ಬಂದವರಿಗೆ ಯಾವ ಅನುಕೂಲವೂ ಸಿಕ್ಕುವುವಿಲ್ಲ, ಗೇಣಿಯನ್ನು ಯಾರು ಖಾಯಂ ಮಾಡುತ್ತಿದ್ದಾರೋ ಅಂಥವರಿಗೆ ಸಣ್ಣ ಸಣ್ಣ ಕಂತುಗಳ ಸಾಲವನ್ನು ಕೊಡಬೇಕು. ಮತ್ತು ಸಣ್ಣ ಹಿಡುವಳಿದಾರರಿಗೆ ಸಾಲವನ್ನು ಒದಗಿಸುವ ಸೌಕರ್ಯ ಕಲ್ಪಿಸಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

Mr. SPEAKER.—The Hon'ble Member has taken 25 minutes already.

Sri S. GOPALA GOWDA.—I am not taking much of the time of the House. Records of right ವಿಚಾರದಲ್ಲಿ ಕೂಡ ಬಹಳ ತೊಂದರೆಯಾಗಿದೆ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಏನೇನು ಆಗಬೇಕು ಎಂಬುದನ್ನು ಹೇಳಿದ್ದಾರೆ. Phode ಮಾಡುವುದೂ ಒಂದು ಹಿಂಸೆಯ ಕೆಲಸವಾಗಿದೆ. ಇದನ್ನು ಸರ್ಕಾರದವರು ಗಮನಿಸಿ ಅಲ್ಲಿರತಕ್ಕಂಥ ನ್ಯೂನತೆಗಳನ್ನು ತೊಡೆದು ಹಾಕಬೇಕು ಎಂದು ಹೇಳುತ್ತೇನೆ. ರೆವಿನ್ಯೂ ಬಾಬಿನಲ್ಲಿ ಕೆರೆ ಕಟ್ಟೆಗಳನ್ನು ಜೀರ್ಣೋದ್ಧಾರ ಮಾಡಬೇಕು ಎಂದು ಹೇಳುತ್ತೇನೆ. ಇದನ್ನು P. W. D. ವಹಿಸಿಕೊಳ್ಳುವುದು ಒಳ್ಳೆಯದು. ಕೆರೆಯ ಅಚ್ಚುಕಟ್ಟುದಾರರು ಈ ವಿಷಯದಲ್ಲಿ ನಿಗಾ ತೆಗೆದುಕೊಳ್ಳುತ್ತಾ ಇಲ್ಲ. ಆದ್ದರಿಂದ ಕಡ್ಡಾಯವಾಗಿ ಅಚ್ಚುಕಟ್ಟುದಾರರು ನಿಗಾ ವಹಿಸುವ ಹಾಗೆ ಒತ್ತಾಯವನ್ನು ಹಾಕಬೇಕು. ಇನ್ನು ಕಂದಾಯದ ಮಂತ್ರಿಗಳು ರೆವಿನ್ಯೂ ಬೋರ್ಡನ್ನು ಮಾಡಬೇಕೆಂದು ಎಷ್ಟೋ ಶ್ರಮ ವಹಿಸಿಕೊಳ್ಳುತ್ತಿದ್ದಾರೆ. ಅದರ ರಚನೆ ಏನೇನೂ ತೃಪ್ತಿಕರವಾಗಿ ಇಲ್ಲ. ಇನ್ನುಮೇಲಾದರೂ ಜಮೀನು ವ್ಯವಸ್ಥೆ ಪುನರ್ ರಚನೆ ಆಗಬೇಕು ಎಂದು ಒಪ್ಪಿಕೊಂಡ ಮೇಲೆ ಹಂಚುವ ವ್ಯವಸ್ಥೆಯ ಕಡೆ ಕಂದಾಯ ಮಂತ್ರಿಗಳು ಹೆಚ್ಚಿನ ಗಮನವನ್ನು ಕೊಡುತ್ತಾರೆ ಎಂದು ಈ ಸಂದರ್ಭದಲ್ಲಿ ಆಶಿಸುತ್ತೇನೆ.

ಇನ್ನು ಆಬ್ಕಾರಿ ಇಲಾಖೆ ವಿಷಯವಾಗಿ ಹೇಳುವುದಾದರೆ ಪಾನನಿರೋಧ ಯಶಸ್ವಿಯಾಗಬೇಕು. ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಅದನ್ನು ಹೇಗೆ ಯಶಸ್ವಿಯಾಗಿ ಮಾಡುವುದು? ಈಗಾಗಲೇ ಹೇಳಿದ್ದಾರೆ. ಖಚಿತವಾದ ಅಭಿಪ್ರಾಯಗಳನ್ನು ರಚನಾತ್ಮಕ ಸಲಹೆಗಳನ್ನೂ ಕೊಡಬೇಕು, ಎಂದು. Bootlegging ನ್ನು ಸಂಪೂರ್ಣ ಮಟ್ಟ ಹಾಕದೇ ಹೋದರೆ ಉಳಿಯುವುದೇ ಇಲ್ಲ. ಕುಡಿತದ ಹಾವಳಿಯಿಂದ ಆಗತಕ್ಕ ಅನಾಹುತಗಳನ್ನು ಚಿತ್ರಿಸಿ ಅಲ್ಲಲ್ಲಿ ಪ್ರದರ್ಶನಗಳನ್ನು ಮಾಡಿ ಜನರಿಗೆ ತಿಳಿವಳಿಕೆ ಕೊಡಬೇಕಾಗುತ್ತದೆ. ಈ ರೀತಿ ಏತಕ್ಕೆ ಮಾಡಬಾರದು?

ಎರಡನೆಯ ವಿಷಯ. ಜನತೆಯ ಸಹಕಾರವನ್ನು ಪಡೆದುಕೊಂಡು, ಕಳ್ಳ ಭಟ್ಟಿಯನ್ನು ಎಲ್ಲೆಲ್ಲಿ ನಡೆಸುತ್ತಿದ್ದಾರೋ ಅದನ್ನು ತಡೆಗಟ್ಟಬೇಕು. ಇದು ಪೋಲೀಸಿನವರಿಗೆ ಗೊತ್ತು. ಅವರಿಂದ ವರಮಾನ ಕೂಡ ಬರುತ್ತದೆ. ಹೀಗೆ ಜನತೆಯ ಸಹಾಯವನ್ನು ಪಡೆದುಕೊಂಡು ಇದನ್ನು ನಿರ್ದಾಕ್ಷಿಣ್ಯವಾಗಿ ತಡೆಗಟ್ಟಲೇಬೇಕು. ಕುಡಿತಕ್ಕೆ ಬಲಿ ಬಿದ್ದಿರತಕ್ಕಂಥ ಕೆಲವು ಪೋಲೀಸ್ ಅಧಿಕಾರಿಗಳೂ, ಆಬ್ಕಾರಿ ಅಧಿಕಾರಿಗಳೂ ಇದ್ದಾರೆ. ಅವರ ಪೈಕಿ ನನಗೆ ಕೆಲವರ ಪರಿಚಯವಿದೆ. ಅಂಥವರನ್ನು ದೊಡ್ಡ ಕೆಲಸಕ್ಕೆ ಹಚ್ಚುವುದು ಬಹಳ ತಪ್ಪು. ಅಂತಹ ಕೆಟ್ಟ ಅಭ್ಯಾಸ ಇರುವವರು ಆಬ್ಕಾರಿ ಮತ್ತು ಪೋಲೀಸ್ ಇಲಾಖೆಯಲ್ಲಿ ಇದ್ದರೆ ಅವರನ್ನು ಅಲ್ಲಿಂದ ತೆಗೆದು ಬೇರೆ ಕಡೆಗೆ ವರ್ಗಾಯಿಸಬೇಕು. ಇವೊತ್ತಿನ ದಿವಸ ಈ ಎಕ್ಸೈಸ್ ಕಂಟ್ರಾಕ್ಟ್‌ಗಳಿಂದ ವರಮಾನ ಅಷ್ಟು ಹೆಚ್ಚಾಗಿ ಬರುತ್ತಾ ಇಲ್ಲ. ಬೆಂಗಳೂರಿನಲ್ಲಿ ಕೂಡ ಈ ರೀತಿಯಾಗಿ ಹೆಚ್ಚಿಗೆ ಬರುತ್ತಾ ಇಲ್ಲ. ಇದರ ಬಗ್ಗೆ ಸರ್ಕಾರದವರು ಸ್ವಲ್ಪ ಪರಿಶೀಲನೆ ಮಾಡಿ ಇದರಿಂದ ವರಮಾನ ಹೆಚ್ಚಾಗಿ ಬರುವುದಕ್ಕೆ ಪ್ರಯತ್ನ ಮಾಡಬೇಕು. ಕಂಟ್ರಾಕ್ಟರುಗಳ ಮೇಲೆ ನಿಲ್ಲತಕ್ಕಂಥ ಬಾಕಿಯನ್ನು ದಾಕ್ಷಿಣ್ಯದಿಂದ ಹಾಗೆಯೇ ಬಿಡುವ ಪದ್ಧತಿ ಬಂದಿದೆ. ಅದನ್ನು ನಿರ್ದಾಕ್ಷಿಣ್ಯವಾಗಿ ವಸೂಲು ಮಾಡಬೇಕು. ಈ ಬಾಬಿನಲ್ಲಿ ಇನಾಮುದಾರರಿಗೆ ಮೂರು ಲಕ್ಷ ರೂಪಾಯಿ ಸಲ್ಲಬೇಕಾದ ಹಣವನ್ನು ಒದಗಿಸಿದ್ದಾರೆ. ಅವರಿಗೆ ಈ ವರ್ಷ ಏನೂ ಸಲ್ಲಬೇಕಾದ ಅಗತ್ಯ ಇಲ್ಲ. ಈ ವಿಚಾರದಲ್ಲಿ compensation ಕೂಡ ಸರ್ಕಾರದವರು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಕುಡಿಯುವ ಅಭ್ಯಾಸವಿರುವ adicts ಇರುತ್ತಾರೆ. ಅವರು ಎಲ್ಲಾ ಊರಿನಲ್ಲಿಯೂ ಇರುತ್ತಾರೆ. ಅಂತಹವರಿಗೆ ಧಾರಾಳವಾಗಿ permit ಗಳನ್ನು ಕೊಡಬೇಕು. ಆಗ ಈ ರೀತಿ ಕುಡಿಯುವ ಅಭ್ಯಾಸವಿರುವವರು ಮುಚ್ಚುಮರೆಯಲ್ಲಿ ಕುಡಿಯ ಬೇಕಾಗಿಲ್ಲ. Permit holders ಎಲ್ಲೆಲ್ಲಿ ಇದ್ದಾರೋ ಅಲ್ಲಲ್ಲಿ ದುರುಪಯೋಗವಾಗದ ರೀತಿಯಲ್ಲಿ ಆಬ್ಕಾರಿ ಇಲಾಖೆಯವರು ನೋಡಿಕೊಳ್ಳಬೇಕು. ಕುಡಿತಕ್ಕೆ ಬಲಿ ಬಿದ್ದವನು ಅದರ ಚಟ ಬಿಡುವುದಿಲ್ಲ. ಕಳ್ಳ ಭಟ್ಟಿ ಸಾರಾಯಿಯನ್ನು ಮನೆ ಮಂದಿ ಕುಡಿದು ಖಾಯಿಲೆ ಬಿದ್ದು ಸತ್ತುಹೋಗುವುದಕ್ಕೆ ಕಾರಣವಾಗುತ್ತದೆ. ಪಾನನಿರೋಧದಿಂದ ಲಕ್ಷಾನು

(SRI S. GOPALA GOWDA.)

ಆಗುವುದರಿಂದ fine ಹಾಕಿ ಹೆಚ್ಚು ಹೆಚ್ಚಾಗಿ ವರಮಾನ ಬರುವ ರೀತಿಯಲ್ಲಿ ಮಾಡಿಕೊಳ್ಳಬೇಕೆಂದು ಸರ್ಕಾರದವರು ಮನೋಭಾವನೆಯನ್ನು ಇಟ್ಟುಕೊಂಡಿರಬಹುದು. ಒಂದು ಸಲ fine ಹಾಕಿ, warn ಮಾಡಿ, ಎರಡನೇ ಸಲ ಜೈಲಿಗೆ ಹಾಕಿ, ಮೂರನೆಯ ಸಲ ಜೈಲಿಗೆ ಹಾಕಿದ್ದವನನ್ನು ಹೊರಕ್ಕೆ ಬಿಟ್ಟು ಬಿಡಕೂಡದು. ಕಳ್ಳ ಭಟ್ಟಿ ಸಾರಾಯಿ ಕುಡಿಯುವುದನ್ನು ಬಿಡಿಸಬೇಕಾದರೆ ಕುಡಿಯುವವನಿಗೆ ಸರ್ಕಾರದ ಭಯವಿರಬೇಕು. ತಪ್ಪು ಮಾಡಿದವನಿಗೆ fine ಹಾಕುತ್ತಾರೆ ಎಂದರೆ ಅದನ್ನು ಕೊಟ್ಟು ನಾಳೆ ಪುನಃ ಮಾರುವುದಕ್ಕೆ ಬರುತ್ತಾನೆ. ಹೀಗೆ ಬಿಟ್ಟರೆ ಒಂದು ಕಡೆ ಆದಾಯವೂ ಇಲ್ಲ, ಕುಡಿತವೂ ತಪ್ಪುವುದಿಲ್ಲ. ಇನ್ನೊಂದು ಕಡೆ corruption ಬಹಳವಾಗಿ ನಡೆಯುತ್ತದೆ.

ಇನ್ನು stamps ಗಳ ವಿಷಯ. ಸರ್ಕಾರಕ್ಕೆ ಯಾವುದೇ ಅರ್ಜಿ ಬರೆಯಬೇಕಾದರೆ stamps ಕೊಡಬೇಕು ಎಂದು ಹೇಳುತ್ತಾರೆ. ಅರ್ಜಿ ಕೊಟ್ಟು ಅದು ಒಂದೇ ಸಲ ಫೈಸಲ್ ಆದರೆ ಆಗಬಹುದು. 4-5 ಸಲ ಒಂದೇ ವಿಷಯದಲ್ಲಿ ಅರ್ಜಿ ಹಾಕುತ್ತಾರೆ. ಸಣ್ಣ ಸಣ್ಣ ವಿಷಯಗಳ ಮೇಲೆ ರೈತರು ಕುಂದುಕೊರತೆಗಳನ್ನು ಹೇಳುವಾಗ ಸಾಮಾನ್ಯವಾದ ಕಾಗದದ ಮೇಲೆ ಬರೆದರೆ ಸಾಕು. ಇದರಿಂದ ಹೆಚ್ಚು ವರಮಾನ ಬರುತ್ತಾ ಇಲ್ಲ. ಆದರೆ ಕಿರುಕುಳ ಮಾತ್ರ ಜಾಸ್ತಿ ಇದೆ. ಈ ಸ್ಟಾಂಪಿನ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅನೇಕ ಕಡೆ ಸ್ಟಾಂಪುಗಳು ದೊರೆಯುವುದಿಲ್ಲ. ಆದ್ದರಿಂದ Vendors ಹೆಚ್ಚು ಮಾಡಬೇಕು. Co-operative Society ಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಕೊಡಬೇಕು. ಇದು ಸಂಸ್ಥಾನಕ್ಕೆ ಸಂಬಂಧಪಟ್ಟ ಲೆಖ್ಖಪತ್ರ ಆಗುವುದರಿಂದ ಇದನ್ನು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಪೋಸ್ಟ್ ಆಫೀಸಿಗೆ ಕೊಡುವುದು ಸರಿಹೋಗುವುದಿಲ್ಲ. ಆದ್ದರಿಂದ ನಾವೇ ಅದನ್ನು ಮಾಡಬೇಕಾಗುತ್ತದೆ. Forest ವಿಚಾರದಲ್ಲಿ ಕೆಲವು ವಿಷಯಗಳನ್ನು ಮಾತನಾಡಬೇಕಾಗುತ್ತದೆ. ನಾನು ಬಡ್ಜೆಟ್ಟಿನ ಮೇಲಾಗಲಿ ಅಥವಾ ರಾಜಪ್ರಮುಖರ ಭಾಷಣದ ಮೇಲೆ ಚರ್ಚೆ ಮಾಡುವ ಕಾಲದಲ್ಲಾಗಲಿ ಈ Forest demand ನ ಮೇಲೆ ಮಾತನಾಡಲಿಲ್ಲ.

Sri A. BHEEMAPPA NAIK.—On a point of order. Merely because he has not taken other opportunities, I do not think the Chair would be so lenient as to give him all the time. If he has not spoken previously, that is his own fault. On that account, if he takes all the time of the House, it would not be correct.

Mr. SPEAKER.—The Hon'ble Member knows the opinion of the House. He has to close at 2-15.

Sri S. GOPALA GOWDA.—But I have got something more to say. I request you to allot me 10 more minutes. Otherwise, I will not be doing any justice to this Demand. Moreover, it is a Money Bill and those who want to speak on a Money Bill cannot be curbed.

Mr. SPEAKER.—The Hon'ble Member may go on.

ಶ್ರೀ ಎಸ್. ಗೋಪಾಲಗೌಡ.—ಕಾಡುಗಳಿಂದ ಉತ್ಪತ್ತಿ ಬರುತ್ತಾ ಇಲ್ಲ. ಅದರಲ್ಲೂ ಮಲೆನಾಡು ಪ್ರದೇಶದಲ್ಲಿರತಕ್ಕಂಥ ಕಾಡುಗಳಿಂದ ಮಲೆನಾಡು ಪ್ರಾಂತಕ್ಕೆ ಉಳಿತಾಯ ಯಾವ ರೀತಿಯೂ ಆಗುತ್ತಿಲ್ಲ. ಈ ಕಾಡುಗಳನ್ನು ಬೆಳೆಸುವಾಗ ಖಾಸಗೀ ಜನರಿಗೆ ಉತ್ತೇಜನಕೊಡಬೇಕು. ಆದರೆ ಅವರು ಬೆಳೆಸುವಾಗ ಸರ್ಕಾರದ ಜಮೀನಿನ ಮೇಲೆ ಬೆಳೆಸಿದರೂ ಅವರು ಬೆಳೆಸಿದ ಕಾಡಿನ ಆದಾಯದಲ್ಲಿ ಸರ್ಕಾರಕ್ಕೆ ಭಾಗ ಸಿಕ್ಕುತ್ತದೆ. ಇಲ್ಲದಿದ್ದರೆ ಶ್ರೀಮಾನ್ ಮುನ್ಷಿಯವರು ವನಮಹೋತ್ಸವ ಮಾಡಿದಂತಾಗುತ್ತದೆ. ಈ ವನ ಮಹೋತ್ಸವ ವಿಷಯ ಮಾತನಾಡುವಾಗ ಮತ್ತೆ ದೊಡ್ಡ ವಿಷಯ ಜ್ಞಾಪಕಕ್ಕೆ ಬರುತ್ತದೆ. ಇಲ್ಲಿ ಶ್ರೀಮಾನ್ ನಂಜಪ್ಪನವರಿಗೆ ಯಾವ compensation ಕೂಡ ಕೊಡುವುದಕ್ಕೆ ನಮಗೆ ಸಾಧ್ಯವಿಲ್ಲ. ಹಾಗೆ ನೋಡಿದರೆ ಅವರಿಂದಲೇ ರೈತರಿಗೆ compensation ದೊರೆಯಬೇಕಾಗುತ್ತದೆ.

Sri K. HANUMANTHAIYA.—It is before the Land Acquisition Officer.

Sri S. GOPALA GOWDA.—My opinion is that and I have said it. ಈ ವಿಷಯದಲ್ಲಿ ಇತ್ತೀಚೆಗೆ ಆ ಭೂಮಿಯನ್ನು ಪುನಃ Forest ಇಲಾಖೆಗೆ ಕೊಡಬೇಕು ಎಂಬುದಾಗಿ ತೀರ್ಮಾನವಾಗಿದೆಯೆಂದು ಕೇಳಿದೆ. ಇದು ವಿಷಾದಕರವಾದ ವಿಷಯ. ಈ ಭೂಮಿಯನ್ನು ರೆವಿನ್ಯೂ ಇಲಾಖೆಗೋ ಅಥವಾ ರೈತರಿಗೋ ಕೊಡಲೇ ಬೇಕು ಎಂದು ಈ ಸಮಯದಲ್ಲಿ ಸರ್ಕಾರದವರಿಗೆ ತಿಳಿಸಲು ಇಷ್ಟಪಡುತ್ತೇನೆ. ಈ ಇಲಾಖೆಯ ನೌಕರರಿಂದ ಮಲೆನಾಡಿನಲ್ಲಿ ರೈತರಿಗೆ ಚಿತ್ರಹಿಂಸೆಯಾಗಿದೆ. ಮನೆ ಹತ್ತಿರ ಮರವಿದ್ದರೂ ಅದನ್ನು ಕಡಿಯುವ ಹಾಗಿಲ್ಲ. ಮುಟ್ಟ ಬೇಡಿ ಎಂದು ಹೇಳುತ್ತಾರೆ. ಮಾಫಿ ಲೈಸೆನ್ಸ್ ಕೊಡುತ್ತಾರೆ. ಮರವನ್ನು ಕಡಿದ ಮೇಲೆ ಅದನ್ನು ಸಾಗಿಸುವುದಕ್ಕೆ ಮತ್ತು ಕೊಯ್ಯುವುದಕ್ಕೆ ಬೇರೆ ಚೀಟಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದೆಲ್ಲಾ ಮಾಡುವುದಕ್ಕೆ ಎಷ್ಟೋ ಸಲ ಓಡಾಡಬೇಕಾಗುತ್ತದೆ. ನಾಟ contract ಮಾಡುವವರು Saw Mill ಮಾಲೀಕರ ಜೊತೆಗೆ ಸೇರಿಕೊಂಡು ಲಾಭ ಸಂಪಾದಿಸಿಕೊಳ್ಳುತ್ತಿದ್ದಾರೆ.

ಇಂಥ ಇಲಾಖೆಯ ಮೇಲೆ ಸರ್ಕಾರ ಕ್ರೂರ ದೃಷ್ಟಿಯನ್ನಿಟ್ಟು ಆ ಅಧಿಕಾರಿಗಳನ್ನು ಇಲಾಖೆಯಿಂದ ತೆಗೆದು ಹಾಕುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ, ಈ ಇಲಾಖೆಯಲ್ಲಿರತಕ್ಕ ಅಕ್ರಮಗಳು ತಪ್ಪುವುದಿಲ್ಲವೆಂದು ಹೇಳುತ್ತೇನೆ.

ಆಮೇಲೆ ಮನೆ ಕಟ್ಟುವುದಕ್ಕೆ ಬೇಕಾದ ಮರಮುಟ್ಟುಗಳನ್ನು ಒದಗಿಸುವುದಕ್ಕೆ ಕಾಡು ಹೇರಳವಾಗಿರತಕ್ಕ ಮಲೆನಾಡಿನಲ್ಲಿ ಒಂದು ಫಾರೆಸ್ಟ್ ಕಾಲೇಜನ್ನು ಕೂಡ ಸ್ಥಾಪಿಸಬಹುದು. ಇದರಿಂದ ಅರಣ್ಯಶಾಖೆಗೆ ಸಂಬಂಧಪಟ್ಟಂತಿರುವ ಕೈಗಾರಿಕೆಗಳನ್ನು ಕೂಡ ಸ್ಥಾಪಿಸುವುದಕ್ಕೆ ಅವಕಾಶವಿದೆಯೆಂದು ನಾನು ಹೇಳಬಯಸುತ್ತೇನೆ.

ಸಾಲುಮರಗಳ ವಿಚಾರ. ಇವುಗಳನ್ನು ಕಡಿಯಕೂಡದೆಂದಿದೆ. ಮಾನ್ಯ ಮಂತ್ರಿಗಳೇ ಒಂದು ಸಾರಿ ಸಾಲುಮರ ಕಡಿಯುತ್ತಿದ್ದವನೊಬ್ಬನನ್ನು ಹಿಡಿಸಿ ಶಿಕ್ಷೆಮಾಡುವುದಕ್ಕೆ ಪ್ರಯತ್ನಿಸಿದರು. ಆದರೆ ಇವೊ

ತ್ತಿಗೂ ಇದು ತಪ್ಪಿಲ್ಲ. ನಾಗಮಂಗಲದಲ್ಲಿ ಸಾಲುಮರಗಳನ್ನು ಕಡಿಯುತ್ತಿದ್ದಾರೆ. ಇದಕ್ಕೆ ಕಾರಣ ವೇನೆಂದರೆ ಯಾರೇ ಆಗಲಿ ಅನುಮತಿಯಿಲ್ಲದೆ ಸಾಲು ಮರವನ್ನು ಕಡಿಯುತ್ತಿರುವುದನ್ನು ನೋಡಿದರೆ ಅದನ್ನು ಗೌಣವಾಗಿ ಪರಿಭಾವಿಸಿ ಬಿಟ್ಟುಬಿಡುತ್ತಾರೆ. ಅಂಥವರನ್ನು ಬಿಡಬಾರದು.

ಮೋಟಾರು ವಾಹನಗಳಮೇಲೆ ಒಂದು ವಿಷಯ ಹೇಳಬೇಕಾಗಿದೆ. ಕೆಲವು ಜನರು ಟ್ಯಾಕ್ಸ್ ಮತ್ತು ಸೆಸ್‌ಗಳೇನನ್ನೂ ಕಟ್ಟದೆ ವಾಹನಗಳನ್ನು ಓಡಿಸುತ್ತಿರುವುದನ್ನು ಕಂಡಿದ್ದೇನೆ. ಎಷ್ಟೋ ವೇಳೆ ಬ್ರೇಕ್ ಇನ್‌ಸ್ಪೆಕ್ಟರುಗಳು ಬಸ್ಸುಗಳನ್ನು ಸರಿಯಾಗಿ ಅಜಮಾಯಿಷಿಮಾಡದೆ ಓಡಿಸುವುದಕ್ಕೆ ಅನುಮತಿ ಕೊಟ್ಟಿರುತ್ತಾರೆ. ಅನೇಕ ಬಸ್ಸುಗಳಲ್ಲಿ overload ಕೂಡ ಇದೆ. ಓವರ್‌ಲೋಡ್ ಎಲ್ಲಿಯಾದರೂ ಕಂಡು ಹಿಡಿದರೂ ಕೇಸ್ ಹಾಕುವುದರಲ್ಲಿ ಕಂಡಕ್ಟರಿನಮೇಲೆ ಕೇಸ್ ಹಾಕುವುದಕ್ಕೆ ಹೋಗುತ್ತಾರೆ. ಅವನೇನು ಮಾಡಿಯಾನು ? ಮಾಲೀಕನಾಗಿರುವವನು ಅವನಿಗೆ ಪ್ರತಿ ದಿನವೂ ಎಷ್ಟು ಬೇಕಾದರೂ ಹಾಕಿಕೊಂಡು ಬಾ ಎಂದು ಹೇಳಿರುತ್ತಾನೆ ; ಅದರಂತೆ ಇವನು overload ಮಾಡಿಕೊಂಡು ಬಂದಿರುತ್ತಾನೆ. ಆದ್ದರಿಂದ ಮಾಲೀಕನ ಮೇಲೆ ಕೇಸ್ ಹಾಕುವುದಕ್ಕೆ ಪ್ರಯತ್ನ ಮಾಡಬೇಕು.

ಕೆಲವು ಕಡೆಗಳಲ್ಲಿ ಬಸ್‌ಸ್ಟ್ಯಾಂಡ್ ಸೌಕರ್ಯಗಳೊಂದೂ ಇರುವುದಿಲ್ಲ. ಮಲವಿಸರ್ಜನೆಗೆ ಕೂಡ ಅವಕಾಶ ಮಾಡಿರುವುದಿಲ್ಲ. ಇಂಥ ಕಷ್ಟಗಳನ್ನು ನೋಡಿ ತಕ್ಕ ಪ್ರಯಾಣ ಸೌಕರ್ಯವನ್ನೊದಗಿಸಿಕೊಡಬೇಕೆಂದು ಹೇಳುತ್ತೇನೆ.

ಅಲ್ಲದೆ ಈ ಬಾಬಿನಲ್ಲಿ ಕೆಲಸಮಾಡುವ ಕೆಲಸಗಾರರು ಅನೇಕ ರೀತಿಯ ತೊಂದರೆಗಳಿಗೊಳಗಾಗಿದ್ದಾರೆ. Automobile ಕೆಲಸಗಾರರು ಅನೇಕ ಜನ ಇದ್ದಾರೆ. ಅವರ ರಕ್ಷಣೆಗೆ ಕಾನೂನು ಕಾಯಿದೆಗಳೊಂದೂ ಸರಿಯಾಗಿಲ್ಲದೆ ತೊಂದರೆಗೀಡಾಗುತ್ತಿದ್ದಾರೆ. ಅವರಲ್ಲಿ ಸರಿಯಾದ ಸಂಘಟನೆಯೂ ಇಲ್ಲ. ಸರ್ಕಾರದವರು ಪ್ರತಿಯೊಬ್ಬ ಮಾಲೀಕನಿಗೂ ಸೂಚನೆಕೊಟ್ಟು ಅವರು ತಮ್ಮ ಕೈಕೆಳಗಿರುವವರಿಗೆ ಇಷ್ಟೇ ಕನಿಷ್ಠ ವೇತನ ಕೊಡಬೇಕು, 100 ಮೈಲಿಗಳಮೇಲೆ ಕಳುಹಿಸ ಕೂಡದು, ತಿಂಗಳಿಗಿಷ್ಟು ದಿನ ರಜಾ ಕೊಡಬೇಕೆಂಬುದನ್ನು ನಿಗದಿಮಾಡಬೇಕು. ಆದ್ದರಿಂದ ಮೋಟಾರು ವಾಹನಗಳ ಆಕ್ಟಿನ ಸಂಬಂಧದಲ್ಲಿ ಈ ಎಲ್ಲಾ ವಿಷಯಗಳನ್ನೂ ಗಮನಿಸಬೇಕೆಂದು ಹೇಳುತ್ತೇನೆ.

ಮೋಟಾರು ವಾಹನಗಳ 'ಬಾಡಿ' ಕಟ್ಟುವುದನ್ನು ಈಗ ಬ್ಯಾಡಿಗಿಗೋ ಮದರಾಸಿಗೋ ಕಳುಹಿಸಿ ಕಟ್ಟಿಸುತ್ತಿದ್ದಾರೆ. ಇದಕ್ಕೆ ಬದಲು ಮೈಸೂರು ಸಂಸ್ಥಾನದಲ್ಲೇ ಮೋಟಾರು ಬಾಡಿ ಕಟ್ಟುವ ಮತ್ತು ಮೋಟಾರು ವಾಹನಗಳಿಗೆ ಸಂಬಂಧಪಟ್ಟ ಇತರ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಪ್ರಯತ್ನಮಾಡಬೇಕೆಂದು ಹೇಳುತ್ತೇನೆ.

ಕಾರ್ಯಾಂಗದ ವಿಷಯದಲ್ಲಿ ಒಂದು ಮಾತು. ನಾನು ನೋಡಿರುವ ಹಾಗೆ, ಈ ಭಾಗದಲ್ಲಿ I.A.S. ಮತ್ತು I.P.S. ಎಂದು ಇಂಡಿಯಾ ದೇಶದಲ್ಲಿ ಒಂದು ಏರ್ಪಾಡನ್ನು ಜಾರಿಗೆ ತಂದಿದ್ದಾರೆ. ನಮಗೆ ಇದು ಅಷ್ಟಾಗಿ ಸರಿಹೋಗುವುದಿಲ್ಲವೆಂದು ಕಾಣುತ್ತದೆ. ಈ ಪದ್ಧತಿಯನ್ನು ಕೈಬಿಡುವುದಕ್ಕೇನಾದರೂ ಸಾಧ್ಯವಿದೆಯೇ ಎಂಬುದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆಮಾಡಬೇಕು. ಇನ್ನೊಂದೇನೆಂದರೆ, ಯಾರ ಸಂಬಳವೂ 500 ರೂಪಾಯಿಗಳಮೇಲೆ ಹೋಗದಂತೆ ಮಾಡುವದಕ್ಕೆ ಪ್ರಯತ್ನಮಾಡಬೇಕು. ನಮ್ಮ ಡೆಪ್ಯುಟೀ ಕಮಿಷನರುಗಳ ಸಂಖ್ಯೆ ಜಾಸ್ತಿಯಿದೆ ಯೆಂದು ನಾನು ತಿಳಿದುಕೊಂಡಿದ್ದೇನೆ. ಅವರ ಸಂಖ್ಯೆಯನ್ನೂ ಕಡಮೆಮಾಡುವುದು ಅಗತ್ಯ.

ದೊಡ್ಡ ಸಂಬಳಗಳನ್ನು ಕಡಮೆಮಾಡುವಂತೆ ಹೇಳಿದಹಾಗೆ ಕಮ್ಮಿ ಸಂಬಳದವರ, N.G.O.ಗಳ ಸಂಬಳ 50 ರೂಪಾಯಿಗಳಿಗೆ ಕಡಮೆಯಿಲ್ಲದಂತೆ ಮಾಡಬೇಕು. ಈ ಲೆಜಿಸ್ಲೇಚರ್ ಸಭೆ ನಡೆಯುತ್ತಿರುವಾಗ ಇಲ್ಲಿ ಕೆಲಸಮಾಡುವ ಆ ಬಡ ನೌಕರರಿಗೆ ಸ್ವಲ್ಪ ಭತ್ಯವನ್ನು ಕೂಡ ತಾವು ಕೊಡುತ್ತಿಲ್ಲ. Over-work ಮಾಡಿದರೂ ಅದಕ್ಕೊಂದು ಪರಿಹಾರ ಕೊಡುತ್ತಿಲ್ಲ. ಚೆಂಗಲರಾಯರೆಡ್ಡಿಯವರ ಸರ್ಕಾರ ಇದ್ದಾಗ ಅವರಿಗೆ ಇದಕ್ಕಾಗಿ ಸ್ವಲ್ಪ ಭತ್ಯ ಕೊಡುತ್ತಿದ್ದರೆಂದು ಕೇಳಿದ್ದೇವೆ. ಅಂಥ ಅಲ್ಪ ಸ್ವಲ್ಪ ಭತ್ಯಗಳನ್ನು ಕೊಡುವುದರಿಂದ ಸರ್ಕಾರಕ್ಕೆ ಅಷ್ಟೇನೂ ಖರ್ಚಾಗುತ್ತದೆಂದು ಹೇಳುವುದಿಲ್ಲ. ಇನ್ನೂ ಸ್ವಲ್ಪ ಮುಂದುವರಿದು ಹೇಳುವುದಾದರೆ ಇಲ್ಲಿಗೆ ಬಂದಿರುವ ಪತ್ರಿಕಾ ಪ್ರತಿನಿಧಿಗಳಿಗೂ ಭತ್ಯ ಕೊಡುವುದಾದರೆ, ಅದರಿಂದ ನಮಗೇನೂ ಹಾನಿಯಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಅವರು ತೆಗೆದುಕೊಳ್ಳುವುದಿಲ್ಲವಲ್ಲ !

ಶ್ರೀ ಎಸ್. ಗೋಪಾಲಗೌಡ.—ತೆಗೆದುಕೊಳ್ಳದಿದ್ದರೆ ಬಿಡಲಿ ; ಅಂಥದೊಂದಕ್ಕೆ provision ಮಾಡುವುದರಲ್ಲಿ ತೊಂದರೆಯಿಲ್ಲ. ನಮ್ಮ ಸ್ಪೀಕರ್ ರವರು ಎಷ್ಟೋ ಸಲ 'ಟೀ' ಏರ್ಪಾಡು ಮಾಡುತ್ತಾರೆ. ಅನೇಕರನ್ನು ಪ್ರತಿ ದಿನವೂ ಕರೆಯುತ್ತಾರೆ. ಇದರಿಂದೇನೂ ಸರ್ಕಾರಕ್ಕೆ ಹೆಚ್ಚಿಗೆ ಖರ್ಚಾಗುತ್ತದೆಂದು ಭಾವಿಸುವುದಕ್ಕಾಗುವುದಿಲ್ಲ. ಆ ಪ್ರಕಾರ ನಮ್ಮ ಪತ್ರಿಕೆಯವರಿಗೂ ಒಂದು ಸೌಕರ್ಯ ಕೊಡುವುದು ಒಳ್ಳೆಯದು.

ಇನ್ನೊಂದು ನನ್ನ ಸೂಚನೆಯೇನೆಂದರೆ, ಈ ಅಠಾರಾ ಕಚೇರಿಯನ್ನು ಪರಿಶುದ್ಧಗೊಳಿಸಬೇಕು. ಕಾಲ ವಿಳಂಬಮಾಡುತ್ತಿರುವುದನ್ನು ಬಿಟ್ಟು ಜನತಾ ಸೇವೆಯಲ್ಲೇ ನಿರತರಾಗಿರುವಂತೆ ಮಾಡಬೇಕು. ಜನತೆಯಿಂದ ಸಂಬಳವನ್ನು ಪಡೆದು ಕಾಲಹರಣ ಮಾಡುತ್ತಿರುವ ಕಾರ್ಕೂನರನ್ನು ಬಡಿದೆಬ್ಬಿಸಬೇಕು. ಜಾತಿಯ ಮಮತೆಯಮೇಲೆ ಕೆಲಸಮಾಡುವುದನ್ನು ತಪ್ಪಿಸಿ ಅವರು ರಾಜಕೀಯದಲ್ಲಿ dabble ಮಾಡದ ಹಾಗೆ ಮಾಡಬೇಕು. ಇಲ್ಲಿ ಇದ್ದುಕೊಂಡು ಸ್ಟೇಟ್ ಆಫೀಸರಾಗಿದ್ದಾಗ್ಯೂ ರಾಜಕೀಯದಲ್ಲಿ ಕೈಹಾಕಿ 'ಗೋಪಾಲಗೌಡರು ಮುಂದೆ ಹೋದರೆ ಹೀಗಾಗುತ್ತದೆ, ಹಾಗಾಗುತ್ತದೆ' ಎಂದೆಲ್ಲಾ ಲೆಕ್ಕ ಹಾಕಿ ಕೆಲಸಮಾಡುವವರನ್ನು ಮಟ್ಟಹಾಕದೆ ಹೋದರೆ ಯಾವ ಮಂತ್ರಿಮಂಡಲಕ್ಕೂ ಸುಖವಿಲ್ಲ ; ಯಾವ ಪ್ರಜೆಗೂ ಸುಖವಿಲ್ಲ. ಇದನ್ನು ಪತ್ತೆಹಚ್ಚಿ ಸೂಕ್ತ ಕಾರ್ಯಕ್ರಮಕೈಕೊಳ್ಳುವುದು ಅಗತ್ಯ.

ಅಮೇಲೆ, ಇಲ್ಲಿ ಸರ್ವಿಸ್ಸಿನಲ್ಲಿ, ಕೆಲವು ಮುದಿ ಎತ್ತುಗಳೂ, ಮುದಿ ಕೋಣಗಳೂ ಇವೆ. ಅವೇನೋ ಅವುಗಳ ಕಾಲ ಪೂರ್ತಿ ಸರ್ವಿಸ್ ಚೆನ್ನಾಗಿಯೇ ಮಾಡಿವೆ. ಆದರೆ ಅವುಗಳಿಗೆ ಈ ಕಾಲಕ್ಕೆ ಹೊಂದಿಕೊಂಡಿರುವುದಕ್ಕಾಗುವುದಿಲ್ಲ. ಆದಷ್ಟು ಬೇಗ ಅವುಗಳನ್ನು ವಿಶ್ರಾಂತಿಗಾಗಿ ಕಳುಹಿಸಿಕೊಡುವುದು ಒಳ್ಳೆಯದು. ಆದ್ದರಿಂದ ಅವು ಮಾಡಿದ ಸೇವೆಯನ್ನು ಬೇಕಾದರೆ ಪ್ರಶಂಸಿಸಿ ವಿಶ್ರಾಂತಿಗೆ ಕಳುಹಿಸೋಣ.

ಚುನಾವಣಾ ಪಟ್ಟಿಯನ್ನು ತಯಾರಿಸುವುದರಲ್ಲಿ ಅನೇಕ ನ್ಯೂನಾತಿರಿಕ್ತಗಳನ್ನು ಕಾಣುತ್ತಿದ್ದೇವೆ. ತಾಯಿಯನ್ನು ಹೆಂಡತಿಯೆಂದು ಬರೆಯುವುದು, ಮಗಳನ್ನು ತಾಯಿಯೆಂದು ಬರೆಯುವುದು, ಸತ್ತವ

(ಶ್ರೀ ಎಸ್. ಗೋಪಾಲಗೌಡ.)

ನನ್ನು ಇದ್ದಾನೆಂದು ಕಾಣಿಸಿರುವುದು, ಯಾರ ಮನೆಯವರನ್ನೋ ಯಾರ ಹೆಂಡತಿಯೆಂದೋ ಬರೆದಿರುವುದು—ಇಂಥ ತಪ್ಪುಗಳನ್ನೆಲ್ಲ ಮಾಡಿರುತ್ತಾರೆ. ಈ ರೀತಿಯ ಪಟ್ಟಿ ಮಾಡಕೂಡದು. ಆಮೂಲಾಗ್ರವಾಗಿ ಈಗ ಪಟ್ಟಿ ತಯಾರಾಗುತ್ತಿದೆಯೆನ್ನುತ್ತಾರೆ. ನಮ್ಮ ಹೆಸರುಗಳೇ ಅಲ್ಲಿ ಕೈಬಿಟ್ಟುಹೋಗಿವೆ !

ನಮ್ಮ ಲೆಜಿಸ್ಲೇಚರಿನ ವಿಚಾರದಲ್ಲಿ ಬಹು ಮುಖ್ಯವಾದ ವಿಚಾರ ಹೇಳಬೇಕಾಗಿದೆ. ನಮ್ಮ ವಿಧಾನ ಸಭೆಯ ಸದಸ್ಯರು ತಮಗೊಬ್ಬರು ದಲಾಯಿತನನ್ನು ಕೊಡಿ ಎಂದು ಕೇಳಿದ್ದಾರೆ. ಇದಕ್ಕಿಂತ ಹೆಚ್ಚಾಗಿ, ಪ್ರತಿ ವಿಧಾನಸಭಾ ಸದಸ್ಯರಿಗೂ ತಾಲ್ಲೂಕು ಕಚೇರಿಯಲ್ಲೋ ಅಥವಾ ಇನ್ನೊಂದು ಕಡೆಯೋ ಒಂದು ಆಫೀಸುಕೊಟ್ಟು ಅಲ್ಲಿಗೊಬ್ಬ ಗುಮಾಸ್ತ, ಒಬ್ಬ ಸ್ಟೆನೋಟೈಪಿಸ್ಟ್ ಮತ್ತು ಒಬ್ಬ ಅಟೆಂಡರ್ ನೇಮಿಸಿ ಖಾಯಮ್ಮಾಗಿ ಒಂದು ಏರ್ಪಾಡುಮಾಡಿ ನಮಗೆ ಆಗಾಗ್ಗೆ ಬರುತ್ತಿರತಕ್ಕ proceedingsಗಳು, ಆಹ್ವಾನ ಪತ್ರಗಳು ಮತ್ತು ಇತರ ಕಾಗದ ಪತ್ರಗಳನ್ನು ಶೇಖರಿಸಿಟ್ಟುಕೊಂಡು ಮುಂದೆ ಮೆಂಬರಾಗಿ ಬರುವವರಿಗೂ ಅನುಕೂಲಮಾಡಿಕೊಡುವಂತೆ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ. ಏಕೆಂದರೆ ಈ ಸಭೆಯ ಸದಸ್ಯರುಗಳು ಜನರಿಗೂ ಸರ್ಕಾರಕ್ಕೂ liaison ರೂಪದಲ್ಲಿ ಇರುತ್ತಾರೆ. ಇಂಥ ಆಫೀಸಿದ್ದರೆ ಜನರಿಗೂ ಅನುಕೂಲವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಮಾಡಿಕೊಟ್ಟು ಅವರ ಹೆಸರು ಮುಂದೆ ಕೂಡ ಉಳಿಯುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ನೀವು ಅಗತ್ಯವಾಗಿ ಮಾಡಬೇಕಾಗಿರುವುದು, ಮೇಲಿನ ಮನೆಯನ್ನು (Legislative Council) 1957ನೆಯ ಇಸವಿಗೆ ಕೊನೆಗಾಣಿಸಬೇಕಾದ್ದು.

ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಸಿ.ಆರ್.ಬಿ. ಅಪ್ಲಿಕೇಷನ್ ಹಾಕಿಕೊಂಡವರ ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಳ್ಳುವುದರಲ್ಲಿ ಕೆಲವು ನ್ಯೂನತೆಗಳೂ ಲೋಪದೋಷಗಳಿವೆಯೆಂದೂ ಕೇಳಿದ್ದೇನೆ. ಇದರಿಂದಾಗಿ ಕೆಲವರು ನಮ್ಮಂಥ ಮೆಂಬರುಗಳಲ್ಲಿಗೆ ಬಂದು 'ತಮ್ಮ ಹೆಸರನ್ನು' ರಿಜಿಸ್ಟರ್ ಮಾಡಿಕೊಳ್ಳುವಂತೆ ಹೇಳಿ ಎಂದು ಕೇಳಿಕೊಳ್ಳುತ್ತಾರೆ. ನಾವು ಇಷ್ಟುದ್ದ ಶರೀರವನ್ನು ಗೇಣುದ್ದವಮಾಡಿಕೊಂಡು ಅಲ್ಲಿಗೆ ಹೋಗಿ ಹೇಳಬೇಕಾಗುವ ಧರ್ಮಸಂಕಟಕ್ಕೆ ಸಿಕ್ಕಿಕೊಳ್ಳಬೇಕಾಗಿ ಬರುತ್ತದೆ. ಇಂಥವರು ನಮ್ಮ ಹತ್ತಿರ ಬರದಂತೆ ತಡೆಗಟ್ಟಬೇಕು.

ಆಮೇಲೆ, State Broadcasting ಈಗ ಕೇಂದ್ರಕ್ಕೆ ಹೋಗಿದೆ. ಅವರು ಕನ್ನಡಕ್ಕೆ ಬಹಳ ಅವಮಾನವನ್ನು ಮಾಡುತ್ತಿದ್ದಾರೆ. ಅಲ್ಲದೆ ವಿದ್ಯುಚ್ಛಕ್ತಿ ಕೆಲಸಗಾರರ ಮುಷ್ಕರದ ಸಂಬಂಧದಲ್ಲಿ ಸುಳ್ಳು ಸುದ್ದಿಯನ್ನು ಕೂಡ ಪ್ರಚಾರಮಾಡಿರುತ್ತಾರೆ. ಇದಕ್ಕೆ ತಕ್ಕ ಏರ್ಪಾಡು ಮಾಡಬೇಕು. Mysore State Broadcasting Stationನ್ನನ್ನು ಉತ್ತಮ ಮಾರ್ಗಕ್ಕೆ ತರಬೇಕೆಂದು ಹೇಳುತ್ತೇನೆ.

Sri K. HANUMANTHAIYA.—It is not proper to cast reflections upon the Department. It is not proper nor is it within the scope of discussion.

Mr. SPEAKER.—They cannot defend themselves, you see ; therefore please avoid making reference to that Department.

AN HON'BLE MEMBER.—The matter is already *sub judice*, therefore he cannot make reference on that point.

Sri S. GOPALA GOWDA.—It has already become public property, and even a newspaper has written an editorial.

Mr. SPEAKER.—I want to bring to the notice of the Hon'ble Member that the matter has been referred to the court for enquiry. Therefore it is *sub judice*, and the member is taking a great risk in making a statement. That is what I feel.

Sri A. BHEEMAPPA NAIK.—I rise on a point of order, Sir. The subject has been referred to some other court. Therefore, there shall not be any discussion, or even a word should not be uttered about that matter.

Sri S. GOPALA GOWDA.—Is it a point of order, Sir ?

Mr. SPEAKER.— Yes, it is a point of order. When a matter is *sub judice*, there cannot be any discussion.

Sri Mulka GOVINDA REDDY (Chitaldrug).—He is not referring to a matter which has been referred to the Court of Enquiry. What he has been referring to is the judgment that was delivered by the Chief Justice of the High Court.

Mr. SPEAKER.—All those matters that are referred to in the judgment are matters for enquiry. Therefore I have given a ruling that he need not speak on them.

ಶ್ರೀ ಎಸ್. ಗೋಪಾಲಗೌಡ.—ನ್ಯಾಯಾಂಗದ ವಿಷಯದಲ್ಲಿ ಒಂದು ಮಾತು ಮಾತ್ರ ಹೇಳುತ್ತೇನೆ. ನ್ಯಾಯಾಂಗದ ವಿಷಯದಲ್ಲಿ ಇತ್ತೀಚೆಗೆ ಒಂದು ಗಮನಾರ್ಹವಾದ ವಿಷಯ ಹೊರಬಿದ್ದಿದೆ. F.I.R. ಒಂದರ ವಿಷಯದಲ್ಲಿ ಹೈಕೋರ್ಟಿನವರು ತೀರ್ಮಾನ ಕೊಡುತ್ತಾ . . . .

ಒಬ್ಬ ಸದಸ್ಯರು.—ಅದೆಲ್ಲಾ *sub judice*, Sir.

ಶ್ರೀ ಎಸ್. ಗೋಪಾಲಗೌಡ.—ಇಂಥ ಒಂದು judgment ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಹೇಳುತ್ತಿದ್ದೇನೆಯೇ ಹೊರತು ಬೇರೆ ಯಾವುದನ್ನೂ ನಾನು ಹೇಳುತ್ತಿಲ್ಲ.

Sri A. BHEEMAPPA NAIK.—A point of order, Sir.

ಶ್ರೀ ಎಸ್. ಗೋಪಾಲಗೌಡ.—ಇನ್ನೊಂದು ವಿಷಯ. ನ್ಯಾಯಾಂಗವು ದಿನ ನಿತ್ಯದ ರಾಜಕೀಯದಲ್ಲಿ ಕೈಹಾಕಬಾರದು. ಇದನ್ನು ಮುಖ್ಯವಾಗಿ ನೋಡಿಕೊಳ್ಳಬೇಕು. ನ್ಯಾಯಾಧೀಶರುಗಳನ್ನು ನಾವು ನೇಮಿಸುವಾಗ ಜಾತೀಯ ಮತ್ತು ಇತರ considerations ಗಳನ್ನು ಬಿಡಬೇಕು. ನ್ಯಾಯಾಂಗದ

ಹಿತದೃಷ್ಟಿಯಿಂದಲೇ ಜಾತಿಯ ಅಧಾರದ ಮೇಲೆ ನೇಮಕಗಳನ್ನು ಮಾಡುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ಮುಖ್ಯವಾಗಿ ನ್ಯಾಯಾಸ್ಥಾನಗಳಲ್ಲಿ ಮಾಡಬೇಕಾಗಿರುವುದೇನೆಂದರೆ, ನ್ಯಾಯಾಧೀಶರು ಕನ್ನಡದಲ್ಲಿ ಓದಿ ತಿಳಿಸಬೇಕು. ಲಾಯರುಗಳೂ ಕನ್ನಡವನ್ನೇ ಉಪಯೋಗಿಸಬೇಕು. ಮತ್ತು ಬರವಣಿಗೆಯೂ ಕನ್ನಡದಲ್ಲೇ ಆಗಬೇಕು. ಈಗ ಎಷ್ಟೋ ಸಾರಿ, ಒಬ್ಬನನ್ನು ಗಲ್ಲಿಗೆ ಹಾಕುತ್ತೇನೆ ಎಂದು ಹೇಳಿದ್ದರೂ ಅವನಿಗೆ ಅರ್ಥವಾಗಿರುವುದಿಲ್ಲ. ಆದ್ದರಿಂದ ಏನು ಮಾಡಿದರೂ ಸಂಬಂಧಪಟ್ಟವರಿಗೆ ತಿಳಿಯುವಹಾಗೆ ಮಾಡಬೇಕಲ್ಲದೆ, ನ್ಯಾಯ ಶೀಘ್ರವಾಗಿ ದೊರೆಯುವಂತೆ ಮಾಡಬೇಕು. ನ್ಯಾಯವು ಅಗ್ಗವಾಗಿ ಮತ್ತು ಶೀಘ್ರವಾಗಿ ದೊರೆಯುವಂತೆ ಮಾಡಬೇಕಾದದ್ದು ತಮ್ಮ ಕರ್ತವ್ಯ. ಈ ಕಡೆಗೆ ಸರ್ಕಾರದವರು ಹೆಚ್ಚಿಗೆ ಗಮನ ಕೊಡುತ್ತಾರೆಂದು ನಾನು ನಂಬಿದ್ದೇನೆ.

ಆಮೇಲೆ ಕಾಲೇಜಿನಲ್ಲಿ ಏನು ಹಗರಣ ನಡೆಯಿತೋ ಅದರ ಬಗ್ಗೆ ಸರ್ಕಾರದವರು ತೀವ್ರ ಗಮನ ಕೊಡಬೇಕು. ಈಗ ಕೌನ್ಸಿಲ್‌ನವರು ಒಂದು ಕಮಿಟಿಯನ್ನು ರಚನೆಮಾಡಿದ್ದಾರೆ. ಲೋಪದೋಷಗಳೇನಾದರೂ ಕಂಡುಬಂದರೆ ಯಾರೇ ಆಗಿರಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಸರಿಪಡಿಸಬೇಕು. ಇಲ್ಲದೆ ಇದ್ದರೆ ಇನ್ನು ಮೇಲೆ ವಿದ್ಯಾಸಂಸ್ಥೆಗಳಿಗೆ ಮಕ್ಕಳನ್ನು ಕಳುಹಿಸುವುದೇ ಕಷ್ಟವಾಗುತ್ತದೆಂದು ತಿಳಿಯಬೇಕು.

ಕೊನೆಯದಾಗಿ ಒಂದು ಪದ್ಯಹೇಳಿ ಮುಗಿಸುತ್ತೇನೆ. ಸೋಷಿಯಲಿಸಂ, ಸೋಷಿಯಲಿಸಂ ಎಂದು ದೇಶಾದ್ಯಂತ ಎಲ್ಲರೂ ಎಲ್ಲಾ ರೀತಿಯಲ್ಲೂ ಹೇಳುತ್ತಿದ್ದಾರೆ. ಜನರಿಗೆ ಯಾವುದು ನಿಜವಾದ ಸೋಷಯಲಿಸಂ ಎಂಬುದನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗಿಬಿಟ್ಟಿದೆ. ನನ್ನ ಅಭಿಪ್ರಾಯದಲ್ಲಿ ಪಂಡಿತ್ ಜವಹರಲಾಲ್‌ರವರು ಸೋಷಯಿಲಿಸಂ ಯಾವ ರೀತಿ work ಆಗುತ್ತದೆಂದು ಯೋಚಿಸಿ ನಾನೇ ಕುಳಿತುಕೊಂಡು ಸಮಗ್ರವಾಗಿ ಎಲ್ಲವನ್ನೂ ಸೇರಿಸಿ ಒಂದು ಪದ್ಯ ಬರೆದಿದ್ದೇನೆ. ಅದನ್ನು ಓದುವುದಕ್ಕೆ ಅವಕಾಶ ಕೊಟ್ಟರೆ ಮಾನ್ಯ ಅಧ್ಯಕ್ಷರಿಗೂ, ಈ ಸಭೆಗೂ ಬಹಳ ಕೃತಜ್ಞನಾಗಿರುತ್ತೇನೆ. ಅದು ಈ ರೀತಿಯಿದೆ.

* * *

(*Sri K. Hanumanthaiya rose*).

Sri A. BHEEMAPPA NAIK.—That is an unparliamentary word, Sir. Please ask him to avoid that.

Sri H. SIDDAVEERAPPA (Minister for Home and Industries).—I think, Sir, you may ask the Hon'ble Member to avoid those words and those words will have to be deleted. He is taking too much undue advantage. It is not correct.

Sri S. GOPALA GOWDA.—If they are unparliamentary words, then I withdraw them, Sir. They need not be mistaken by anybody, Sir.

2-30 P.M.

Sri H. SIDDAVEERAPPA.—That will have to be deleted. He is taking too much undue advantage.

Sri S. GOPALA GOWDA.—* * *

Sri A. BHEEMAPPA NAIK.—Please call for the expulsion of the member. This is bordering on vulgarity and such rudeness no decent society can tolerate.

Sri H. M. CHANNABASAPPA (Periyapatna).—I should like to submit that the Chair should take very serious notice of these things and take necessary action.

Mr. SPEAKER.—They will not go into the proceedings.

Sri Mulka GOVINDA REDDY.—Such words as might be considered unparliamentary might be expunged or the member might even be asked to withdraw those words, but nothing else is necessary.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈಗ ಸಭೆಯ ಮುಂದಿಟ್ಟಿರತಕ್ಕಂಥ ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಮಾತನಾಡಿ ಅದನ್ನು ವಿರೋಧಿಸಲು ವಿರೋಧ ಪಕ್ಷದ ನಾಯಕರಾದ ಶ್ರೀ ಮಹಮದ್ ಇಮಾಂರವರೂ ಮತ್ತು ಶ್ರೀ ಎಸ್. ಗೋಪಾಲಗೌಡರೂ ಬಹಳ ಕಾಲವನ್ನು ತೆಗೆದುಕೊಂಡಿದ್ದಾರೆ. ಅವರುಗಳು ಮಾಡಿದಂಥ ಭಾಷಣಗಳನ್ನು ನಾನೂ ಕೂಡ ಬಹಳ ಕಾತರತೆಯಿಂದ ಕೇಳಿದೆ. ಆದರೆ ನಮ್ಮ ಸರ್ಕಾರದವರು ಈ ದಿವಸ ಇಡೀ ಭರತ ಖಂಡಕ್ಕೇ ಅನ್ವಯಿಸತಕ್ಕಂಥ ಒಂದು ಸುವ್ಯವಸ್ಥಿತವಾದ ಯೋಜನೆಯನ್ನು ಹಾಕಿಕೊಂಡು ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ತತ್ವಗಳ ಆಧಾರದಮೇಲೆ ತಮ್ಮ ಕೆಲಸ ಕಾರ್ಯಗಳನ್ನು. . . .

Sri S. GOPALA GOWDA.—I have to defend socialism and my party's views. My opinion cannot be shut out.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ನಿರ್ದಿಷ್ಟವಾದ ಕಾಲದಲ್ಲಿ, ಒಂದು ನಿರ್ದಿಷ್ಟವಾದ ರೀತಿಯಲ್ಲಿ, ಪ್ರಗತಿಯನ್ನು ಸಾಧಿಸತಕ್ಕಂಥ ಒಂದು ಯೋಜನೆಯನ್ನು ಯಾವರೀತಿ ಹಾಕಬೇಕೋ ಆ ರೀತಿ ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಈ ಅಂಶವನ್ನೇ ಮಾನ್ಯ ಎದುರು ಪಕ್ಷದ ನಾಯಕರೂ ಮತ್ತು ಸದಸ್ಯರೂ ಮರೆತಿರುವಂತೆ ಕಾಣುತ್ತಿದೆ. ಹೀಗೆ ನಮ್ಮ ಸರ್ಕಾರ ಒಂದು ನಿರ್ದಿಷ್ಟವಾದಂಥ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುತ್ತಿರುವುದರ ಪರಿಣಾಮವಾಗಿ ಇದು ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವನ್ನು ದೊರೆಕಿಸಿಕೊಟ್ಟಿರುತ್ತದೆ ಎನ್ನುವುದರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಈ ಮಾನ್ಯ ಸಭೆಗೆ ತಿಳಿಸಲಪೇಕ್ಷಿಸುತ್ತೇನೆ. ಈಗ ನಾನು ಕೊಡತಕ್ಕಂಥ ಅಂಕಿ ಅಂಶಗಳೆಲ್ಲಾ 1952-53ನೆಯ ಸಾಲಿಗೆ ಸಂಬಂಧಪಟ್ಟಂಥವುಗಳು. ನಮ್ಮ ಇಡೀ ಭರತ ಖಂಡದಲ್ಲೇ ಮತ್ತೆ ಯಾವ ಸಂಸ್ಥಾನವೂ ಈ ನ್ಯಾಷನಲ್ ಸರ್ವಿಸ್ಸಿಗೆ ಖರ್ಚು ಮಾಡದೆ ಇರುವಷ್ಟು ಹಣವನ್ನು ಈ ನಮ್ಮ ಮೈಸೂರು ಸರ್ಕಾರ ಖರ್ಚು ಮಾಡಿದೆ ಎನ್ನುವುದನ್ನು ತೋರಿಸಲು ನಾನೀಗ ಈ ಅಂಕಿ ಅಂಶಗಳನ್ನು ತಮ್ಮ ಮುಂದಿಡಲು ಅಪೇಕ್ಷೆಪಟ್ಟಿದ್ದೇನೆ. ನಮ್ಮ ಸರ್ಕಾರ ಆ ವರ್ಷದ ಆದಾಯದಲ್ಲಿ ಶೇಕಡ 38·64ನ್ನು ಈ

*** Expunged as ordered by the Chair.

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಸೋಷಿಯಲ್ ಸರ್ವಿಸ್ಸಿಗಾಗಿ ವ್ಯಯಮಾಡಿದೆ. ಇದರಿಂದ ದೇಶಕ್ಕೆ ಅಷ್ಟೂ ಉಪಕಾರ ಮಾಡಿದ್ದೇವೆ. ಇಷ್ಟರವಟ್ಟಿಗೆ ಹಣವನ್ನು ಮತ್ತೆ ಯಾವ ಸಂಸ್ಥಾನವೂ ಖರ್ಚುಮಾಡಿಲ್ಲ. ಈ ಅಂಶಗಳನ್ನು ಆ ಮಾನ್ಯ ಸದಸ್ಯರು ಗಣನೆಗೆ ತೆಗೆದುಕೊಂಡು ನಮ್ಮ ಸರ್ಕಾರ ಈ ಸೋಷಿಯಲ್ ಸರ್ವಿಸ್ಸಿಗಾಗಿ ಎಷ್ಟರವಟ್ಟಿಗೆ ಹಣವನ್ನು ವಿನಿಯೋಗಿಸಿ ಪ್ರಗತಿ ಸಾಧನೆಯನ್ನು ಗಳಿಸುತ್ತಿದೆ ಎನ್ನುವುದನ್ನು ಅವರು ಮನಗಾಣಬೇಕಾಗಿದೆ. ಆದರೆ ಇಲ್ಲಿಯವರೆಗೂ ಅವರು ಮಾಡಿರತಕ್ಕಂಥ ಭಾಷಣಗಳ ಧೋರಣೆಯನ್ನು ನೋಡಿದರೆ ಅವರು ಈ ವಿಚಾರಗಳೊಂದನ್ನೂ ಮನಗಂಡಹಾಗೆ ಕಾಣುವುದಿಲ್ಲ. ಹಾಗೊಂದುವೇಳೆ ಈ ಹಣದ ವಿನಿಯೋಗದಲ್ಲಿ ಏನಾದರೂ ಲೋಪದೋಷಗಳುಂಟಾಗಿದ್ದರೆ, ಅಥವಾ ಈ ವೊಬಲಗು ಆಯಾ ಬಾಬಿಗೆ ಖರ್ಚಾಗದೆ ಇದ್ದಪಕ್ಷದಲ್ಲಿ ಅದಕ್ಕೆ ಯಾವುದಾದರೂ ನಿದರ್ಶನಗಳನ್ನು ತೋರಿಸಿ ಭಾಷಣ ಮಾಡಿದ್ದರೆ ನಾನು ಅವರ ವಾದಕ್ಕೆ ಒಪ್ಪಿಗೆಯನ್ನು ಕೊಡುತ್ತಿದ್ದೆ. ಹಾಗೆ ಅವರು ಅಂಥ ಲೋಪದೋಷಗಳಾವುದನ್ನೂ ತಿಳಿಸಲಿಲ್ಲ. ಸುಮ್ಮನೆ 80 ಲಕ್ಷ ಪ್ರಜೆಗಳಿಗೆ ಅನ್ಯಾಯವಾಗುತ್ತಿದೆ ಎಂದು ಮಾತ್ರ ಹೇಳಿದ್ದಾರೆ. ಆ ಶ್ರೀ ಮಹಮ್ಮದ್ ಇಮಾಂರಂಥ ನುರಿತ ರಾಜಕೀಯ ಪರಿಣತರ ಬಾಯಿಂದ ಇಂಥ ಮಾತುಗಳು ಬರುತ್ತವೆಂದು ನಾನು ನಂಬಿರಲಿಲ್ಲ. ಅವರು ತುಂಬ ತಿಳುವಳಿಕಸ್ಥರು, ಅನುಭವಶಾಲಿಗಳು ಮತ್ತು ರಾಜಕೀಯದಲ್ಲಿ ಅರಿತು ನುರಿತಂಥ ವ್ಯಕ್ತಿಗಳು. ಅವರಿಗೆ ಈ ರಾಜಕೀಯದಲ್ಲಿ 25 ವರ್ಷಗಳ ಮೇಲ್ಪಟ್ಟ ಅನುಭವವಿದೆ. ಅವರು ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಏನು ವ್ಯತ್ಯಾಸವಾಗಿದೆ ಎನ್ನುವುದನ್ನೆಲ್ಲಾ ಕಾದು ನೋಡುತ್ತಾ ಬಂದಿದ್ದಾರೆ. ಆ ದಿವಸ ಏನೊಂದು ಪರಿಸ್ಥಿತಿಯಿತ್ತು, ಈ ದಿವಸ ಆ ಪರಿಸ್ಥಿತಿ ಹೇಗೆ ಬದಲಾವಣೆ ಆಗಿದೆ ಎನ್ನುವುದನ್ನೆಲ್ಲಾ ಗಮನಿಸದೆ ಅವರು ಏಕಾಏಕಿ 80 ಲಕ್ಷ ಪ್ರಜೆಗಳಿಗೆ ಬಹಳ ಕಷ್ಟ ಬಂದಿದೆ, ಅವರು ಬಹಳ ಕಷ್ಟದಿಂದ್ದಾರೆ ಎಂದು ಹೇಳಿರತಕ್ಕದ್ದನ್ನು ನೋಡಿದರೆ ಅವರೇ ಅವರ ಆತ್ಮಕ್ಕೆ ಘಾತಕ ಮಾಡಿಕೊಂಡ ಹಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅವು ನನ್ನ ಅಂಕಿ ಅಂಶಗಳೇನೂ ಅಲ್ಲ. ತಮ್ಮ ಸರ್ಕಾರ ಹೊರಡಿಸಿರುವ ಸೆನ್ಸಸ್ ರಿಪೋರ್ಟಿನಲ್ಲಿ ಹೇಳಿರತಕ್ಕದ್ದನ್ನೇ ನಾನು ಹೇಳಿರುತ್ತೇನೆ. ಅಷ್ಟೇಹೊರತು ಅದರಲ್ಲಿ ನನ್ನ ಸ್ವಂತ ಅಭಿಪ್ರಾಯವೇನೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನು ನಮ್ಮ ದೇಶಕ್ಕೆ ಬರತಕ್ಕಂಥ ವರಮಾನ ಅಥವಾ ಆದಾಯ ಬಾಬುಗಳಲ್ಲಿ ಈ ಟ್ಯಾಕ್ಸ್ ಮತ್ತು ಇತರ ರೆವಿನ್ಯೂ ವರಮಾನದ ಬಗ್ಗೆ ಭರತಖಂಡದಲ್ಲಿರತಕ್ಕಂಥ ಇತರ ಯಾವ ದೇಶವನ್ನೇ ತಾವು ತೆಗೆದುಕೊಳ್ಳಿ—ಹೈದ್ರಾಬಾದ್, ಮಧ್ಯಪ್ರಾಂತ, ಸೌರಾಷ್ಟ್ರ, ಒರಿಸ್ಸಾ, ಬೀಹಾರ್, ಯು. ಪಿ., ಟ್ರಾವನ್ಕೂರ್-ಕೊಚ್ಚಿನ್ ಇತ್ಯಾದಿ ಎಲ್ಲಾ ಪ್ರಾಂತ್ಯಗಳಿಗಿಂತಲೂ, ನಮ್ಮ ದೇಶದಲ್ಲಿ ವಿಧಿಸುತ್ತಿರುವ ಟ್ಯಾಕ್ಸ್‌ಗಳು ಬಹಳ ಕಡಮೆ ಇವೆಯೆಂದು ಹೇಳುತ್ತಿರುವಾಗ, ನಮ್ಮ ಸರ್ಕಾರ ದೇಶದ ಜನರಿಗೆ ಅತ್ಯಂತ ಹೆಚ್ಚಿನ ರೀತಿಯಲ್ಲಿ ಸಹಾಯ ಸಹಕಾರಗಳನ್ನು ನೀಡಿ ತನ್ಮೂಲಕ ಜನರ ಸುಖ ಸೌಲಭ್ಯಗಳು ಹೆಚ್ಚುವಂತೆ ಹಣವನ್ನು ಖರ್ಚುಮಾಡಿರತಕ್ಕ ಬಗ್ಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ತಮ್ಮ ಮುಂದಿಟ್ಟರೆ ಅವುಗಳ ಸತ್ಯಾಂಶವನ್ನು ಅವಲೋಕಿಸದೆ, ದೇಶದಲ್ಲಿರತಕ್ಕ ಜನಗಳಲ್ಲಿ ಒಂದು ತಪ್ಪುಭಾವನೆ ಮೂಡುವಂತೆ ಮತ್ತು ದೇಶಕ್ಕೊಂದು ದ್ರೋಹವೆಸಗುವಂಥ ರೀತಿಯಲ್ಲಿ ಮಾತನಾಡಿರುವುದನ್ನು ನೋಡಿದರೆ ಆ ಮಾನ್ಯ ಸದಸ್ಯರು ಆ ರೀತಿ ಮಾತನಾಡಿದ್ದು ಸರ್ವಥಾ ಸರಿಯಾದ್ದಲ್ಲ ಎಂದು ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿದರೆ ಸಾಕೆಂದು ಕಾಣುತ್ತದೆ.

ಇನ್ನು ಈ ಸೋಷಿಯಲ್ ಸರ್ವಿಸ್ ವಿಚಾರದಲ್ಲಿ ಮತ್ತು ಸೋಷಿಯಲಿಜಂ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳ ಉದ್ವೇಗದಿಂದ ಮಾತನಾಡಲು ಪ್ರಾರಂಭಿಸು ಹಾಗ ಅವರು ಸೋಷಿಯಲಿಜಂ ಎಂಬ ಪದಕ್ಕೆ ಯಾವ ಅರ್ಥ ಮಾಡಿಕೊಂಡಿದ್ದಾರೋ ಅದು ನನಗೆ ಗೊತ್ತಾಗಲಿಲ್ಲ. ಈ ಭರತ ಖಂಡದಲ್ಲಿ ಅವರಿಗೆ ಯಾರು ನಿಜವಾದ ಸೋಷಿಯಲಿಜಂ ತತ್ವದ ಮೇಲೆ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಕೂಡ ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಂಡುಬರುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಅಧ್ಯಕ್ಷರೇ, ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರೇನಾದರೂ ಆ ಸೋಷಿಯಲಿಜಂ ಮೇಲೆ ವ್ಯಾಖ್ಯಾನ ಮಾಡುವುದಾದರೆ ಅದು ಅವರಿಗೆ ಖಂಡಿತ ಉಚಿತವಲ್ಲ. ಹಾಗೆ ಅವರು ಇದರಮೇಲೆ ವ್ಯಾಖ್ಯಾನ ಮಾಡಲು ಹೊರಟರೆ ನಾವೂ ಕೂಡ ಅವರ ತತ್ವಗಳಮೇಲೆ ವ್ಯಾಖ್ಯಾನ ಮಾಡಲೇ ಬೇಕಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನೀಗ ಆ ಸೋಷಿಯಲಿಜಂ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆ ಮಾನ್ಯ ಸದಸ್ಯರು ಈ ಸೋಷಿಯಲಿಜಂ ಬಗ್ಗೆ ಹೊಂದಿರತಕ್ಕಂಥ ತಪ್ಪು ಅಭಿಪ್ರಾಯವನ್ನು ಸರಿಪಡಿಸಬೇಕೆಂಬ ಉದ್ದೇಶದಿಂದ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳತಕ್ಕದ್ದು ಅನುಚಿತವಲ್ಲವೆಂಬುದು ನನ್ನ ಅಭಿಪ್ರಾಯ. ಈಗ ಆ ಮಾನ್ಯ ಸದಸ್ಯರು ಏನು ಒಂದು ರೀತಿಯಾಗಿ ಆ ಸೋಷಿಯಲಿಜಂ ಎನ್ನುವ ಪದಕ್ಕೆ ಅರ್ಥ ಮಾಡಿಕೊಂಡಿದ್ದಾರೋ ಅದು ಸರಿಯಾದದ್ದಲ್ಲ. ಅದು ನಿಜವಾದ ಸೋಷಿಯಲಿಜಮ್ಮೂ ಅಲ್ಲ. ಅದೊಂದು ಬರೀ ಸ್ಲೋಗನ್. ಅಂಥ ಸ್ಲೋಗನ್ ಹೇಳಿಕೊಂಡು ರಾಷ್ಟ್ರಘಾತಕ ಕಾರ್ಯಗಳಿಗೆ ಕೈಹಾಕುವುದು ನಿಜವಾದ ಸೋಷಿಯಲಿಜಂ ಎಂದು ಹೇಳುವುದಕ್ಕಾಗುವುದಿಲ್ಲ. ದೇಶದಲ್ಲಿರತಕ್ಕಂಥ ಜನರ ಬುದ್ಧಿಶಕ್ತಿ, ಅವರ ಸಾಮರ್ಥ್ಯಗಳನ್ನೆಲ್ಲಾ ಮೂಲೆಗೊತ್ತಿ ಹಾವಾಡಿಗನು ಹೇಗೆ ತನ್ನ ಬುಟ್ಟಿಯಲ್ಲಿರತಕ್ಕ ಹಾವನ್ನು ಹೊರಗೆ ಬಿಟ್ಟು ತನ್ಮೂಲಕ ಜನರನ್ನು ಹೆದರಿಸಿ—ಬೆದರಿಸಿ, ತಮಾಷೆ ಮಾಡಿ ಅನಂತರ ಅವರ ಜೇಬಿನಲ್ಲಿರುವ ದುಡ್ಡನ್ನು ಕಿತ್ತುಕೊಂಡು ಹೋಗುತ್ತಾನೋ ಅಂಥಾದ್ದನ್ನು ನಾವು ಅದು ಒಂದು ಸೋಷಿಯಲಿಜಂ ಎಂದು ಹೇಳುವುದು ಸರಿಯಾದದ್ದಲ್ಲ. ಈ ದಿವಸ ನಾವು ದುಡಿಯಬೇಕಾಗಿರುವಂಥ ನಿಜವಾದ ಆ ಸೋಷಿಯಲಿಜಂ ಯಾವುದೆಂದರೆ:—Absence of exploitation of man by man, minimising exploitation of one society by another and elimination of unemployment and distress and life of mutual assistance and co-operation. ಎಂದರೆ ಈ ಕ್ಯಾಪಿಟಲಿಸ್ಟ್ ಕ್ಲಾಸಿಗೂ ಮತ್ತು ಲೇಬರ್ ಕ್ಲಾಸಿಗೂ ಇರತಕ್ಕ ಬಿಕ್ಕಟ್ಟನ್ನು ಪರಿಹಾರ ಮಾಡಿ ಈ ಎರಡು ಪಕ್ಷಗಳನ್ನೂ ಒಂದು ಸಾಮರಸ್ಯಕ್ಕೆ ತಂದು ಎರಡನ್ನೂ ಒಟ್ಟಾಗಿ ಸೇರಿಸಿ ಒಂದು ಐಕಮತ್ಯದಿಂದ, ಒಂದು ಉದಾರಭಾವನೆಯಿಂದ, ಒಂದು ದೇಶ ವಾತ್ಸಲ್ಯ ಪ್ರೇಮದಿಂದ, ದೇಶದ ನೆಮ್ಮದಿಗೋಸ್ಕರವಾಗಿ, ದೇಶದ ಹಿತದೃಷ್ಟಿಯಿಂದ ಪರಸ್ಪರ ಹೊಂದಾ

ವಣಿಕೆಯಿಂದ ಈ ಉಭಯ ಪಕ್ಷಗಳವರೂ ಕೆಲಸ ನಡೆಸತಕ್ಕಂಥ ಒಂದು ಸುಗಮ ವಾತಾವರಣವನ್ನು ಉಂಟುಮಾಡಬೇಕೆನ್ನುವುದೇ ನಿಜವಾದ ಸೋಷಿಯಲಿಜಮ್ಮಿನ ಧ್ಯೇಯ. ಮತ್ತು ಆ ತತ್ವಗಳನ್ನೇ ಈಗ ನಮ್ಮ ಕಾಂಗ್ರೆಸ್ ಸಂಸ್ಥೆ ಜಾರಿಗೆ ತರಬೇಕೆಂದು ಉದ್ದೇಶಪಟ್ಟಿರುವುದು. ಅದನ್ನೇ ಈಗ ನಾವು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಎಂದು ಸಾರಿರುತ್ತೇವೆ. ಹೀಗೆ ಈ ದಿವಸ ನಾವು ಜಾರಿಗೆ ತರಬೇಕೆಂದು ಹೇಳುತ್ತಿರುವ ನಮ್ಮ ಈ ಸೋಷಿಯಲಿಜಂ ಏನಿದೆಯೋ ಇದಕ್ಕೂ ಈ ದಿವಸ ಆ ಮಾನ್ಯ ಸದಸ್ಯರು ಏನೊಂದನ್ನು ಸೋಷಿಯಲಿಜಂ ಎಂದು ಹೇಳುತ್ತಿದ್ದಾರೋ ಅದಕ್ಕೂ ಸಂಬಂಧವಿಲ್ಲ. ಹೀಗಿದ್ದರೂ ಆ ಮಾನ್ಯ ಸದಸ್ಯರು ತಮ್ಮ ಭಾಷಣಕ್ಕಾಗಿ ಘಂಟೆಗಟ್ಟಲೆ ಕಾಲ ತೆಗೆದುಕೊಂಡಿದ್ದಾರೆ. ಇಡೀ ರಾಷ್ಟ್ರಕ್ಕೇ ಅಂಧಕಾರವನ್ನುಂಟುಮಾಡತಕ್ಕಂಥ ಕಾಲದಲ್ಲಿ, ದೇಶದಲ್ಲಿರತಕ್ಕಂಥ ಜನರೆಲ್ಲಾ ಎಲ್ಲಿ ಇಂಥ ಒಂದು ದುಷ್ಪರಿಣಾಮ ಉಂಟಾಗಿ ಬಿಡುತ್ತದೋ ಎಂದು ಯೋಚನೆಯಲ್ಲಿ ಮಗ್ನರಾಗಿರುವಾಗ, ದೇಶದಲ್ಲಿರತಕ್ಕ ಜನರೆಲ್ಲಾ ಚಿಂತೆಪಡುತ್ತಾ ಕುಳಿತಿದ್ದಂಥ ಕಾಲದಲ್ಲಿ ಈ ಮಹನೀಯರುಗಳೆಲ್ಲಾ ದೇಶದ ಸ್ವಾತಂತ್ರ್ಯಕ್ಕಾಗಿ ಮತ್ತು ದೇಶದ ಅಭ್ಯುದಯಕ್ಕಾಗಿ ಏನೇನು ಕೆಲಸ ಮಾಡಿದ್ದಾರೆ ಎನ್ನುವುದನ್ನು ಅವರು ಮೊದಲು ಜ್ಞಾಪಕ ಮಾಡಿಕೊಳ್ಳಬೇಕು. ರಾಷ್ಟ್ರ ಬೆಳೆಯಬೇಕು, ಜನರು ಅಭಿವೃದ್ಧಿಗೆ ಬರಬೇಕು, ಜನರನ್ನು ಕಾರ್ಯೋನ್ಮುಖರನ್ನಾಗಿ ಮಾಡಬೇಕು, ಅವರೆಲ್ಲರಲ್ಲೂ ಒಂದು ಉತ್ಸಾಹ ಬೆಳೆಸಬೇಕು, ಜನಗಳಿಗೆಲ್ಲಾ ಒಂದೇಸಮನಾದ ಸುಖ ಸಂತೋಷಗಳು ತಂಡೋಪತಂಡವಾಗಿ ದೊರೆಯಬೇಕು ಎಂದು ಹೇಳುತ್ತಿರುವಾಗ ಅವುಗಳನ್ನು ಕಾರ್ಯರೂಪಕ್ಕೆ ತರಲು ನಾವೀಗ ದೇಶದಲ್ಲಿ ಅಲ್ಲಲ್ಲೇ ಉದ್ಭವಿಸುತ್ತಿರುವಂಥ ಕಷ್ಟಕರವಾದ ಸನ್ನಿವೇಶಗಳನ್ನು ದಿಟ್ಟತನದಿಂದ ಎದುರಿಸುತ್ತ, ಒಂದು ರಚನಾತ್ಮಕ ರೀತಿಯಲ್ಲಿ ಈ ಎಲ್ಲ ಕಾರ್ಯಗಳನ್ನೂ ನೆರವೇರಿಸಲು ಪಣತೊಟ್ಟು ನಿಂತಿರುವಾಗ, ತಾವು ಹೀಗೆ 'ಇತ್ತಲಾಗಿ ಮಗುವನ್ನು ತೂಗುತ್ತ ಅತ್ತಲಾಗಿ ಅದನ್ನು ಚಿಗುಟುತ್ತ' ಸೋಷಿಯಲಿಜಂ ತತ್ವಗಳ ಸ್ಲೋಗನ್ ಹೇಳಿಕೊಂಡು ಹೀಗೆಲ್ಲಾ ಮಾಡುತ್ತಿರುವುದು ಜನರಲ್ಲಿ ಒಂದು ಚೀಪ್ ಪಾಪ್ಯುಲಾರಿಟಿ ಗಳಿಸಬೇಕೆಂದಲ್ಲದಿದ್ದರೆ ಈ ಕಸಬನ್ನು ನಾನು ಮತ್ತೇನೆಂದು ಕೇಳುತ್ತೇನೆ. ಆ ದಿವಸ ಎಲೆಕ್ಟ್ರಿಕಲ್ ಇಲಾಖೆಯವರು ದೇಶಾದ್ಯಂತವೂ ಕೆಲಸ ನಿಲ್ಲಿಸಿಬಿಡುತ್ತೇವೆಂದು ಏಕ್‌ದಂ ನೋಟೀಸನ್ನು ಕೊಟ್ಟಾಗ ಆ ಜನರ ಜವಾಬ್ದಾರಿಯೇನು ಎನ್ನುವುದನ್ನಾದರೂ ಇವರು ಆಲೋಚನೆ ಮಾಡಿದ್ದರೇನು? ಆದರೂ—ನನಗೂ, ಮತ್ತು ತಮಗೆಲ್ಲರಿಗೂ ಗೊತ್ತಿರುವ ಹಾಗೆ, ನಮ್ಮ ಸಂಸ್ಥಾನದಲ್ಲಿ ಈ ಹೊತ್ತು ಈ ಎಲೆಕ್ಟ್ರಿಕಲ್ ಇಲಾಖಾ ನೌಕರರಿಗೆ ಕೊಡುತ್ತಿರುವಂಥ ಸೌಲಭ್ಯಗಳನ್ನು ಮತ್ತಲ್ಲಿಯೂ ಯಾರಿಗೂ ದೊರೆಯುತ್ತಿಲ್ಲ. ಈ ನೌಕರರಿಗೆ ಮನೆಗೆ ಬಾಡಿಗೆಯಿಲ್ಲ. 100 ರೂಪಾಯಿಗಳ ಸಂಬಳ, ಲೈಟ್ ಛಾರ್ಜ್ ಇಲ್ಲ; ಇವರ ಮಕ್ಕಳು ಮರಿಗಳ ವಿದ್ಯಾಭ್ಯಾಸಕ್ಕೆ ತೆರಿಗೆಯಿಲ್ಲ; ಇವರಿಗೆಲ್ಲಾ ಪುಗಸಾಟೆಯ ಔಷಧೋಪಚಾರಗಳು; ಇಷ್ಟೆಲ್ಲಾ ಸೌಲಭ್ಯಗಳ ಜೊತೆಗೆ ಸ್ಪೆಷಲ್ ಅಲೋಯನ್ಸ್ ಎಂದು ಬೇರೆ ತಿಂಗಳಿಗೆ 25 ರೂಪಾಯಿಗಳು. ಈ ರೀತಿಯಾಗಿ ಇಷ್ಟೆಲ್ಲಾ ಅನುಕೂಲಗಳನ್ನು ಇವರಿಗೆ ಕೊಟ್ಟಿರುವಾಗ, ಅವರು ಇಷ್ಟಕ್ಕೂ ತೃಪ್ತರಾಗದೆ ನಮಗಿನ್ನೂ ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡಬೇಕೆಂದು ಕೇಳಿದ್ದಕ್ಕೆ ಸರ್ಕಾರದವರು ಅದಕ್ಕೂ ಆಗಲಿ ಎಂದು ಒಪ್ಪಿಕೊಂಡರು. ಆದರೆ ಬಾಕಿ ಎಲ್ಲಾ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರುಗಳೂ ಸಹ ಇದೇ ರೀತಿಯ ಸೌಲಭ್ಯಗಳನ್ನು ನಮಗೂ ಕೊಡಿ ಎಂದು ಕೇಳುವುದಕ್ಕೆ ಪ್ರಾರಂಭಿಸಿದರೆ ಮುಂದಿನ ಗತಿ ಏನು ? ಇಂಥ ಮುಂದಿನ ಕ್ಲಿಷ್ಟಕರವಾದಂಥ ಸಮಸ್ಯೆಗಳ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಬೇಕಾದ್ದಿಲ್ಲವೇನು ? ಹಾಗೆ ಈ ದಿವಸ ಸರ್ಕಾರದವರು ಪ್ರತಿಯೊಂದು ಇಲಾಖೆಯವರೂ ಕೇಳಿ ಕೇಳಿದ ಹಾಗೆಲ್ಲಾ ಸೌಕರ್ಯಗಳನ್ನು ಕೊಡುತ್ತಾ ಹೋದರೆ ಬೊಕ್ಕಸದಲ್ಲಿರುವ ಹಣವನ್ನೆಲ್ಲಾ ಈ ಒಂದು ಇಲಾಖೆಯವರಿಗೆ ಅಳೆದು ಕೊಟ್ಟರೆ ಮುಂದೆ ಇದು ಎಂಥ ದುಷ್ಪರಿಣಾಮವನ್ನುಂಟು ಮಾಡೀತು ಎನ್ನುವ ವಿಚಾರಗಳನ್ನೆಲ್ಲಾ ಅವರು ಪರಿಶೀಲನೆ ಮಾಡಬೇಕಾದದ್ದು ಅತಿ ಮುಖ್ಯವಾದಂಥ ವಿಷಯ ಎನ್ನುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅಥವಾ ಒಂದು ವೇಳೆ ಹಾಗೆ ಆ ಇಲಾಖೆಯವರಿಗೆ ಅವರು ಕೇಳತಕ್ಕಂಥ ಸೌಕರ್ಯಗಳನ್ನು ಒದಗಿಸಿಕೊಟ್ಟರೆ ಮುಂದಕ್ಕೆ ಸರ್ಕಾರದವರ ಮೇಲೆ ಏನೂ ಅಂಥ ಪರಿಣಾಮಕಾರಿಯಾದಂಥ ಹೊಣೆಗಾರಿಕೆ ಬೀಳುವುದಿಲ್ಲ, ಅವರ ಬೇಡಿಕೆಗಳೆಲ್ಲಾ ನ್ಯಾಯವಾದವುಗಳು ಎಂದು ದೇಶದಲ್ಲಿರತಕ್ಕಂಥ ಜನರ ಮನಸ್ಸಿಗೆ ತಟ್ಟುವಂತೆ ಅವರು ವಾದ ಮಾಡಿದ್ದರೆ ಆಗ ಅವರು ಅವರ ಕರ್ತವ್ಯವನ್ನು ಜವಾಬ್ದಾರಿಯನ್ನರಿತು ನಿರ್ವಹಣೆ ಮಾಡಿದ್ದಾರೆಂದು ಹೇಳುತ್ತಿದ್ದೆ. ಆದರೆ ಅವರು ಹಾಗೆ ಮಾಡಿಲ್ಲ. ದೇಶದಲ್ಲಿರತಕ್ಕಂಥ ಕೆಲವು ಜನರನ್ನು ಗುಂಪು ಕಟ್ಟಿಕೊಂಡು ಇಡೀ ದೇಶವನ್ನೇ ಅಂಧಕಾರದಲ್ಲಿ ಮುಳುಗಿಸುವಂಥ ಕಾರ್ಯಾಚರಣೆಯಲ್ಲಿ ಮಗ್ನರಾಗಿ ಅಕ್ರಮ ನಡವಳಿಕೆಗಳನ್ನು ನಡೆಸಲುದ್ಯುಕ್ತರಾದಾಗ 'ಉರಿಯುವ ಬೆಂಕಿಗೆ ಎಣ್ಣೆಯನ್ನು ಸುರಿದರೆಂಬಂತೆ' ಕಾರ್ಯಾಚರಣೆ ಮಾಡಿದಂಥ ಜನರು ರಾಷ್ಟ್ರಘಾತಕರೋ ಅಥವಾ ಅಂಥ ಕೃತ್ಯಗಳನ್ನು ತಡೆಗಟ್ಟಿದಂಥ ನಾವು ರಾಷ್ಟ್ರಘಾತಕರೋ?

ಒಬ್ಬ ಸದಸ್ಯರು.—ಹಾಗೆ ಯಾರು ಮಾಡಿದ್ದಾರೆ?

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಎಂದೆಂದೂ ಈ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಅಂಥ ಕಾರ್ಯಗಳಿಗೆ ಕೈಹಾಕಿಲ್ಲ. ಯಾರೋ ಒಬ್ಬಿಬ್ಬರು ಆ ರೀತಿ ಮಾಡಿದ್ದರೂ ಮಾಡಿರಬಹುದು. ನಮ್ಮ ಪಾರ್ಟಿಗೇನೂ ಸಂಬಂಧವಿಲ್ಲ.

Sri H. M. CHANNABASAPPA.—I should congratulate the Leader of the Opposition on his having taken the right attitude. But some people whom I do not want to name did join this strike in order to bring about a deadlock.

Sri Mulka GOVINDA REDDY.—That is not correct. He cannot make such an irresponsible allegation and charge that we were responsible for that. We were not responsible for that. We tried our best to see that the strike was prevented.

Mr. SPEAKER.—Hon'ble Member will have a chance to have his say.

Sri Mulka GOVINDA REDDY.—Hon'ble Member cannot make such irresponsible statements.

ಶ್ರೀ ಎಚ್. ಎಂ. ಚನ್ನಬಸಪ್ಪ.— ಆದ್ದರಿಂದ ದೇಶದ ಮೂಲೆ ಮೂಲೆಗಳಲ್ಲಿ ತಾವು ಮಾಡಿದ್ದ ಕೆಲಸ ಯಶಸ್ವಿಯಾಗಿದ್ದ ಪಕ್ಷದಲ್ಲಿ ದೇಶದಲ್ಲಿ ಏನಾಗುತ್ತಿತ್ತು ಎಂಬುದನ್ನು ಸ್ವಲ್ಪ ಯೋಚನೆಮಾಡಿದರೆ, ಸುಮಾರು 100 ವರ್ಷಗಳಿಂದ ಕಾಪಾಡಿಕೊಂಡು ಬಂದಿರತಕ್ಕಂಥ ಪ್ರಗತಿ ನಿರ್ನಾಮವಾಗುತ್ತಿತ್ತು. ಇವೊತ್ತಿನ ದಿವಸ ಸರ್ಕಾರದವರು ದಿಟ್ಟತನದಿಂದ ತಮ್ಮ ನಿಲುವನ್ನು ಪ್ರತಿಪಾದನೆ ಮಾಡಿ ಈ ಗೊಂದಲವನ್ನು ಪರಿಹರಿಸಿದುದಕ್ಕಾಗಿ ಸರ್ಕಾರದವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಇಲ್ಲದಿದ್ದರೆ ಎಲ್ಲಾ ಕಡೆಗಳಲ್ಲೂ ಗಿರಣಿಗಳು ನಿಂತು ಹೋಗುತ್ತಿದ್ದವು. ಎಲ್ಲಾ ಕಡೆಗಳಲ್ಲೂ ಅಂಧಕಾರವಾಗುತ್ತಿತ್ತು. ಬೆಂಗಳೂರು, ಮೈಸೂರು, ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಜೀವನ ನಡೆಸುವುದೇ ಕಷ್ಟವಾಗಿ ಪ್ರಾಣಾಪಾಯಗಳು ಆಗುತ್ತಿದ್ದುವು. ದೇಶದಲ್ಲಿ ಆಗಬಾರದ ಕೆಲಸಗಳಾಗುತ್ತಿದ್ದವು. ಇದಕ್ಕೆಲ್ಲಾ ಜವಾಬ್ದಾರರು ಈ ರೀತಿ ಮಾಡಲು ಯಾರು ಪ್ರೇರೇಪಿಸಿದರೋ ಅವರೇ?

A MEMBER.—Congressmen.

Sri H. M. CHANNABASAPPA.—By their courtesy you are safe here. Had it not been for the creditable way in which the Government handled the situation probably things would have been different.

Sri Mulka GOVINDA REDDY.—Credit must be given to the workers.

ಶ್ರೀ ಎಚ್. ಎಂ. ಚನ್ನಬಸಪ್ಪ.—Yes, yes, ಹಣ ಹೆಚ್ಚು ಖರ್ಚಾಗುತ್ತಿದೆ. ಈಗ 8 ಕೋಟಿ ಯಾಗಿದೆ. ಇನ್ನೂ ಯಥೇಚ್ಛವಾಗಿ ಸಂಬಳ ಕೊಡಬೇಕಾಗಿದೆ. ಯಥೇಚ್ಛವಾಗಿ ಸಂಬಳ ಕೊಡುವವರಿಗೆ ಇನ್ನೂ ಹೆಚ್ಚು ಕೊಡಿ ಎಂದರೆ ಮೃಗದ ಭಯವೋ, ಮನುಷ್ಯನ ಭಯವೋ ನನಗೆ ಗೊತ್ತಾಗುವುದಿಲ್ಲ. I leave it to you to say what it is. I do not want to cast any aspersion. ನಾನು ತಮ್ಮಲ್ಲಿ ಅರಿಕೆ ಮಾಡುತ್ತೇನೆ. ಈಗ ನಾವು ರಚನಾತ್ಮಕ ಕಾರ್ಯದಲ್ಲಿ ತೊಡಗಿರುವಾಗ ಎಲ್ಲರೂ ರಚನಾತ್ಮಕವಾದ ಯೋಚನೆಯನ್ನೇ ಮಾಡಬೇಕು, ರಚನಾತ್ಮಕವಾದ ಕೆಲಸಗಳನ್ನೇ ಮಾಡಬೇಕು. ಈ ಒಂದು ಪಾಂಚವಾರ್ಷಿಕ ಯೋಜನೆಯಲ್ಲಿ ಇಡೀ ಭಾರತದ ಒಂದು ಭವಿಷ್ಯವನ್ನು ಬದಲಾಯಿಸಬೇಕು. ಅದರ ರೂಪವನ್ನೇ ಬದಲಾವಣೆಮಾಡಿ, ಇಡೀ ಜನತೆಯ ಆಶೆ, ಆಕಾಂಕ್ಷೆಗಳನ್ನು ಸ್ವಲ್ಪಮಟ್ಟಿಗಾದರೂ ಈಡೇರಿಸಿ ಜೀವಮಾನವನ್ನು ಸುಖಮಯ ಮಾಡಬೇಕು ಎಂಥ ಟೊಂಕ ಕಟ್ಟಿ ಹೊರಟಿರುವಾಗ ಪ್ರತಿಯೊಂದು ಕ್ಷೇತ್ರದಲ್ಲೂ ಅವರು ಯಾವ ಪಾರ್ಟಿಯವರೇ ಆಗಿದ್ದರೂ ಕೂಡ ರಚನಾತ್ಮಕವಾದ ರೀತಿಯಲ್ಲಿ ಅವರೆಲ್ಲರೂ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಬೇಕಾಗಿದೆಯೇ ವಿನಾ ಈ ರೀತಿ ರಾಷ್ಟ್ರ ಘಾತಕ ಕೆಲಸದಲ್ಲಿ ಉಪಯೋಗಿಸುವುದು ಸರಿಯಲ್ಲವೆಂದು ವಿನಯದಿಂದ ಬೇಡಿಕೊಳ್ಳುತ್ತೇನೆ. ಮತ್ತೆ Electricity Boardನ್ನು ಮಾಡಿಯೇ ಬಿಡಬೇಕು ಎಂದು ಇನ್ನೊಂದು ಸಲಹೆ ಮಾಡಿದ್ದಾರೆ. Electricity Board ಏನೆಂಬುದನ್ನು ಮಾನ್ಯ ಸದಸ್ಯರು ಯೋಚನೆಮಾಡಿದರೆ ಮತ್ತು ಇನ್ನೂ ಎಷ್ಟು ಖರ್ಚಾಗುತ್ತದೆ ಎಂದು ಯೋಚನೆಮಾಡಿದರೆ, ಯಾರೂ ಇದರ ಗೋಜಿಗೆ ಹೋಗುವುದಿಲ್ಲ. ವಿದ್ಯುಚ್ಛಕ್ತಿಯನ್ನು ಬರೀ ದೀಪಕ್ಕೆ ಕೊಡುತ್ತಾ ಇಲ್ಲ. ಜನರು ಸುಖಲೋಲುಪರಾಗಿರಬೇಕೆಂದಲ್ಲ. ದೇಶದಲ್ಲಿ ಕೈಗಾರಿಕೆಗಳ ಉತ್ಪನ್ನ ಹೆಚ್ಚಿ ಆ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಈ ರೀತಿಯಾಗಿ ದೇಶದಲ್ಲಿ ಒಂದು ಸಂಪಾದನೆ ಮಾಡುವ ಶಕ್ತಿಯನ್ನು ಹೆಚ್ಚಿಸುವುದರ ಜೊತೆಗೆ ವ್ಯವಸಾಯದಲ್ಲಿಯೂ ಕೂಡ ಹೆಚ್ಚಿಗೆ ಉತ್ಪನ್ನ ಮಾಡುವುದಕ್ಕೆ ಇದನ್ನು ಉಪಯೋಗಿಸಬೇಕಾಗುತ್ತದೆ. ಇಂತಹ ಒಂದು ಆಡಳಿತ ವ್ಯವಸ್ಥೆ ಸರ್ಕಾರದ ಹತೋಟಿಯಲ್ಲಿ ಇಲ್ಲದೆ ಬೇರೆ ಒಂದು ಬೋರ್ಡಿನ ಹತೋಟಿಯಲ್ಲಿದ್ದ ಪಕ್ಷದಲ್ಲಿ ಆಗ್ಗೆ ಎಷ್ಟು ಕಷ್ಟವಾಗುತ್ತಿತ್ತು ಎಂಬುದನ್ನು ಯೋಚನೆಮಾಡಿ ಈಗಾಗಲೇ ಪ್ರತಿಯೊಂದು ಸಂಸ್ಥಾನದಲ್ಲಿಯೂ Over-centralisation ಆಗಿರುವುದರಿಂದ ಕಷ್ಟಪಡುತ್ತಾರೆಂಬುದು ವ್ಯಕ್ತವಾಗಿದೆ. ಇನ್ನೂ ಹೆಚ್ಚಿಗೆ Centralisation ಆಗುವ ನೀತಿಯನ್ನು ತಪ್ಪಿಸಬೇಕು ಎಂದು ಹೇಳುವವರು ಅವರೇ. . . .

Sri K. HANUMANTHAIYA.—The Leader of the Opposition has always been against over-centralisation.

Sri H. M. CHANNABASAPPA.—That was what I was saying. ಆದ್ದರಿಂದ Over-centralisation ಆಗಕೂಡದು. Electricity Board ಮಾಡಬೇಕೆಂದು ಹೇಳುವವರು ಅವರೇ. . . .

ಶ್ರೀ ಎಸ್. ಗೋಪಾಲಗೌಡ.— ಕೇಂದ್ರ ಸರ್ಕಾರದವರು ಮಾಡಿರುವ ಕಾನೂನು ತಪ್ಪೇ? ಏತಕ್ಕೆ ಅವರು exception ತೆಗೆದುಕೊಂಡಿಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.—Electricity Board ಮಾಡುವುದರಿಂದ ಸರ್ಕಾರಕ್ಕೆ ಆಗುವ ಖರ್ಚು ಒಂದಕ್ಕೆ ಒಂದೂವರೆಯಷ್ಟು ಆಗುವುದಲ್ಲದೆ, ಅದರ ಮೇಲ್ವಿಚಾರಣೆ ನಮ್ಮ ಹತೋಟಿಗೆ ಮೀರಿ ಹೋಗಿ ಕೊನೆಗೆ ದೇಶದ ಪ್ರಗತಿ ಕಾರ್ಯಗಳಿಗೆ ನಮ್ಮ ಯೋಜನೆ ಪ್ರಕಾರ ಕೆಲಸ ಮಾಡುವುದೂ ಕೂಡ ಕಷ್ಟವಾಗುತ್ತದೆ. Labour legislation ಇದುವರೆಗೆ ಎಷ್ಟರಮಟ್ಟಿಗೆ ಕೆಲಸಮಾಡಿದೆ, ಇದು ನಮ್ಮ ಮೈಸೂರು ಸಂಸ್ಥಾನದಲ್ಲಿ ಒಂದರಲ್ಲೇ ಅಲ್ಲ, ಇಡೀ ಭಾರತದಲ್ಲಿ ಎಷ್ಟರಮಟ್ಟಿಗೆ ಅಪಘಾತವನ್ನುಂಟುಮಾಡಿದೆ, ಎಷ್ಟರಮಟ್ಟಿಗೆ ಅನುಕೂಲವನ್ನುಂಟುಮಾಡಿದೆ ಎಂದು ಎಲ್ಲವನ್ನೂ ಕೂಡ ಪರಿಶೀಲನೆಮಾಡಿ ಇದುವರೆಗೆ ಬಂದಿರತಕ್ಕಂಥ ಅನುಭವದ ದೃಷ್ಟಿಯಿಂದ ಮುಂದೆ ಅದನ್ನು ಯಾವ ರೀತಿ ಬದಲಾವಣೆ ಮಾಡಬೇಕು ಎನ್ನುವ ಪರಿಸ್ಥಿತಿಯಲ್ಲಿ ಇದ್ದೇವೆಂಬುದನ್ನು ನಾನು ತಮ್ಮಲ್ಲಿ ಸೂಚನೆ ಮಾಡಬೇಕೆಂದಿದ್ದೇನೆ. ಅದಕ್ಕೋಸ್ಕರ ಪ್ರಾಂತೀಯ ಸರ್ಕಾರಗಳವರೂ ಮತ್ತು ಭಾರತ ಸರ್ಕಾರದವರೂ ಸಮಯೋಚಿತವಾಗಿ ಹೈಪವರ್ ಕಮಿಷನ್ನನ್ನು ನೇಮಕ ಮಾಡಿಲ್ಲ. ಇಂಡಿಯಾದಲ್ಲೆಲ್ಲಾ labour legislation ಎಷ್ಟರಮಟ್ಟಿಗೆ ಕೆಲಸ ಮಾಡಿದೆ ಎಂಬುದನ್ನು assess ಮಾಡಿ ಮುಂದೆ ಯಾವ ರೀತಿ ಕೆಲಸ ಮಾಡಬೇಕು ಎಂಬ ಬಗ್ಗೆ ರಚನಾತ್ಮಕವಾದ ಸಲಹೆಗಳನ್ನು ಮಾಡುವುದಕ್ಕೋಸ್ಕರ ಒಂದು ಹೈ ಪವರ್ ಕಮಿಷನ್ನನ್ನು ರಚಿಸಿ ತನ್ಮೂಲಕ ಕಾರ್ಯಸಾಧನೆ ಮಾಡುವುದು ಸೂಕ್ತವೆಂದು ಈ ಮೂಲಕ ಹೇಳುತ್ತೇನೆ. ಕಾರ್ಮಿಕರಿಗೆ ವಾಸ್ತವವಾಗಿ ಇರುವ ಕಷ್ಟಪರಂಪರೆಗಳನ್ನು ಪರಿಹಾರ ಮಾಡಿ contented labour ಇರುವಂತೆ ಮಾಡುವುದು ನಮ್ಮ ಆದ್ಯ ಕರ್ತವ್ಯ. ಅದೂ ಅಲ್ಲದೆ ಕಾರ್ಮಿಕರನ್ನ ರಾಜಕೀಯ ಉದ್ದೇಶಗಳಿಗೆ ಉಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ಕೊಡದಂತೆ ಬಂದೋಬಸ್ತು

ಮಾಡುವುದೂ ಅತ್ಯಂತ ಅವಶ್ಯಕವಾಗಿದೆ. Electrical strike ಕೇವಲ ವ್ಯಕ್ತಿಗೆ ಸಂಬಂಧಪಟ್ಟ ಸಮಸ್ಯೆಯಲ್ಲ. ಇದು ಸರ್ಕಾರದ ಒಂದು ಅಂಗ. ಇದು ಖಾಸಗೀ ಉದ್ಯಮವಲ್ಲ. ಇದರಿಂದ ಬರತಕ್ಕ ಹಣ, ಉಳಿತಾಯವಾಗತಕ್ಕಂಥ ಹಣವನ್ನು ಮಂತ್ರಿಗಳು ಹಂಚಿಕೊಂಡು ಹೋಗುವುದಿಲ್ಲ, ಇದರಿಂದ ಜನರಿಗೆ ಉಪಯೋಗವಾಗುತ್ತದೆ. ಖಾಸಗೀ ಉದ್ಯಮದವರು ಶೋಷಣೆ ಮಾಡಿದರೆ ಅವರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಒಂದು ವಿಚಾರ. ಪ್ರಜಾಪ್ರಭುತ್ವದಲ್ಲಿರತಕ್ಕಂಥ ಸರ್ಕಾರಕ್ಕೆ ದೇಶದ ಜನತೆಯ ಭವಿಷ್ಯವನ್ನು ರೂಪಿಸಬೇಕೆಂದು ಕಣ್ಣಿಟ್ಟುಕೊಂಡು ನಿಂತ ಸರ್ಕಾರಕ್ಕೆ ಅಡ್ಡಿ ಆತಂಕಗಳನ್ನು ತಂದೊಡ್ಡುವುದಾದರೆ ಮತ್ತು ಒಂದು ತಿಂಗಳು ಆಗಿದ್ದ ಮುಷ್ಕರ ಎರಡು ತಿಂಗಳು ಮುಂದುವರಿಯುವಂತಾಗಿ ಕಾರ್ಮಿಕರು ಹೊಟ್ಟೆಗಿಲ್ಲದೆ ಸತ್ತುಹೋಗುವ ಪರಿಸ್ಥಿತಿ ಬರುವ ಸಂದರ್ಭವಿರುವಾಗ ಒಂದು restraint ಇಟ್ಟುಕೊಂಡು ಕೆಲಸ ಮಾಡಬೇಕೇ ಬೇಡವೇ ಎಂದು ಪ್ರಶ್ನೆ ಮಾಡುತ್ತೇನೆ. ಇಂತಹ ಮಾರ್ಗವನ್ನು ಬಿಟ್ಟು ರಚನಾತ್ಮಕವಾದ ರೀತಿಯಲ್ಲಿ ಮಾನ್ಯಸ್ನೇಹಿತರುಗಳು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರಯೋಗ ಮಾಡಬೇಕು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ನಿಮ್ಮ ಉಪದೇಶ ನಮಗೆ ಬೇಕಿಲ್ಲ.

Sri H. M. CHANNABASAPPA.—I only wish that this had prevailed on them at that time. ನಾವು ರಚನಾತ್ಮಕ ಕೆಲಸ ಕಾರ್ಯಗಳಲ್ಲಿರುವಾಗ ನಿರ್ದಿಷ್ಟವಾಗಿ ಹಣ ಇಷ್ಟೇ ಖರ್ಚಾಗುತ್ತದೆ ಎಂದು ಇತ್ಯರ್ಥ ಮಾಡುವುದು ಕಷ್ಟ. ಸಾಮಾನ್ಯ ಕಾಲದಲ್ಲಿ ಬಡ್ಜೆಟ್ಟನ್ನು ಸಮತೂಕ ಮಾಡುವುದು ಕಷ್ಟವಲ್ಲ. ಎಷ್ಟು ಹಣ ಬರುತ್ತದೆ, ಯಾವ ಯಾವ ಬಾಬುಗಳಿಗೆ ಎಷ್ಟು ಖರ್ಚಾಗುತ್ತದೆ ಎಂಬುದು ಗೊತ್ತಿರುತ್ತದೆ. ಈಗ ನಾವು ಇರುವುದು planning periodನಲ್ಲಿ, ಅಲ್ಪ ಕಾಲದಲ್ಲಿ ಯಥೇಚ್ಛವಾಗಿ ಅನುಕೂಲಗಳನ್ನು ಕಲ್ಪನೆ ಮಾಡಿ ಕೊಡಬೇಕು ಎಂಬ ಆಶೆ ಏನು ಇದೆಯೋ ಅದನ್ನು ಈಡೇರಿಸುವುದಕ್ಕೆ ನಾವು ಹೊರಟಿರುವಾಗ, ಹೇರಳವಾಗಿ ಹಣ ಬೇಕಾಗಿರುತ್ತದೆ. ಅದನ್ನು ನಾವು ಯಾವ ರೀತಿ ಒದಗಿಸಬೇಕು ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಅದರ ಜೊತೆಗೆ ಯಾವ ರೀತಿ ಆ ಹಣವನ್ನು ವಿನಿಯೋಗಿಸಬೇಕು ಎಂಬುದೂ ಬಹಳ ಪ್ರಾಮುಖ್ಯವಾದ ಪ್ರಶ್ನೆ. ವಿನಿಯೋಗ ಮಾಡುವ ರೀತಿಯಲ್ಲಿ ಟೀಕೆ ಟಿಪ್ಪಣಿಗಳು ಬಂದರೆ ಅವನ್ನು ಸ್ವಾಗತ ಮಾಡುವುದು ಎಲ್ಲ ಸರ್ಕಾರಗಳ ಕರ್ತವ್ಯ. ಶ್ರೀ ಇಮಾಂರವರು ಒಂದು ಮಾತನ್ನು ಹೇಳಿದರು. ಆಡಳಿತದ ಖರ್ಚು ಬಹಳ ಅಧಿಕವಾಗುತ್ತಾ ಇದೆ. ಅದು ರಚನಾತ್ಮಕವಾದ ಟೀಕೆ. ಅವಶ್ಯಕ ಪ್ರಮಾಣದಲ್ಲಿ ಸಿಬ್ಬಂದಿಯನ್ನಿಟ್ಟುಕೊಂಡು, ಹೆಚ್ಚುವರಿ ಸಿಬ್ಬಂದಿಯನ್ನು ಕಡಿಮೆಮಾಡತಕ್ಕಂಥಾದ್ದು ಬಹಳ ಅವಶ್ಯಕ. ಆದರೆ ಅವರು ಒಂದು ತಪ್ಪು ಹೇಳಿದರು. ಈಗ ಸಿಬ್ಬಂದಿಗಾಗಿ ಒಂಭತ್ತು ಕೋಟಿ ರೂಪಾಯಿ ಖರ್ಚಾಗುತ್ತಾ ಇಲ್ಲ. ಆ ರೀತಿ ಉತ್ಪ್ರೇಕ್ಷೆ ಮಾಡುವುದರಿಂದ ಜನ ಮರುಳಾಗುವುದಿಲ್ಲ.

Sri J. MOHAMED IMAM.—I have taken those figures from the Budget itself.

Sri H. M. CHANNABASAPPA.—It is not Rs. 9 crores. Anyway, as the Hon'ble Members have said, it is about Rs. 8 crores 26 lakhs. ಒಂಭತ್ತು ಕೋಟಿಯಲ್ಲ, ಅಂಡಾಕ್ಷಣ ಖರ್ಚನ್ನು ಕಡಿಮೆ ಮಾಡಬೇಕ ಎಂದಲ್ಲ. ಭಾರತದಲ್ಲಿ ಎಲ್ಲಾ ಸಂಸ್ಥಾನಗಳಿಗಿಂತಲೂ ಸಿಬ್ಬಂದಿಯ ಮೇಲೆ ಖರ್ಚು ಮಾಡುವುದು ಮೈಸೂರು ಸಂಸ್ಥಾನದಲ್ಲಿ ಕಡಿಮೆ ಎಂದು ಸಭೆಯ ಗಮನಕ್ಕೆ ತರುತ್ತೇನೆ. Finance Committee Report ನೋಡಿದರೆ ಅದು ತಮಗೇ ಗೊತ್ತಾಗುತ್ತದೆ. ಆದರೆ ಅಷ್ಟು ಕಡಮೆ ಖರ್ಚು ಮಾಡುತ್ತಾ ಇದ್ದಾರೆ ಎಂದು ಹೇಳಿ ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕಾಗಿಲ್ಲ. There is a lot of improvement to be made. Duplication ಆಗುವ ಸಂದರ್ಭಗಳು ಅನೇಕ ಇವೆ. ಕೆಲಸ ಕಾರ್ಯಗಳು duplicate ಆಗಿವೆ. ಕೆಲವು ಕಡೆ ಯಥೇಚ್ಛವಾಗಿ ಕೆಲಸ ಕಾರ್ಯಗಳನ್ನು ಮಾಡತಕ್ಕಂಥ ಜನರು ಇದ್ದಾರೆ. ಕೆಲಸವಿಲ್ಲದೆ ಕುಳಿತಿರತಕ್ಕವರು ಅನೇಕರಿದ್ದಾರೆ. ಕಾಲಾವಕಾಶವಿದ್ದ ಪಕ್ಷದಲ್ಲ ಅಂಕಿ ಅಂಶಗಳ ಸಮೇತ ಅದನ್ನು ತೋರಿಸುತ್ತೇನೆ. ಒಟ್ಟಿನಲ್ಲಿ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇದ್ದೇನೆ. High Price Allowance, Personal Allowance, Local Allowance, Duty Allowance, Deputation Allowance, Conveyance Allowance, House-Rent Allowance ಮತ್ತು Fixed Travelling Allowance ಎಂಬುದಾಗಿ ಅನೇಕ ತರಹ allowanceಗಳನ್ನು ಕೊಡುತ್ತಿದ್ದಾರೆ. ಪೂರ್ವದಲ್ಲಿ ಇಂಗ್ಲಿಷ್‌ನವರು ಸರ್ಕಾರ ನಡೆಸುತ್ತಿದ್ದ ಕಾಲದಲ್ಲಿ ಅವರಿಗೆ ಸೂಕ್ತವಾಗಿ ತೋರಿದ ರೀತಿಯಲ್ಲಿ ಈ ತರಹ allowanceಗಳನ್ನು ಕೊಡುತ್ತಾ ಬಂದರು. ಅದು ಸುಮಾರು ಲಕ್ಷಾಂತರ ರೂಪಾಯಿ ಆಗುತ್ತದೆ. 1949ನೇ ಇಸವಿಯ Dearness Allowances ಮತ್ತು Travelling Allowancesಗಳನ್ನು ಲೆಖ್ಖ ಹಾಕಿದರೆ Dearness Allowances ಮತ್ತು Travelling Allowances ಒಟ್ಟೇ ಮೂವತ್ತು ಲಕ್ಷ ರೂಪಾಯಿಗಳಾಗುತ್ತದೆ. ಈಗ ಅದು ಒಂದಕ್ಕೆರಡರಷ್ಟಾಗಬಹುದು. ಈಗ ಏನಾಗಿದೆ ಎಂದರೆ Public Works ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದವನನ್ನು ಮುನಿಸಿಪಾಲಟಿಗಾಗಲಿ, ಡಿಸ್ಟ್ರಿಕ್ಟ್ ಬೋರ್ಡಿಗಾಗಲಿ ಕಳುಹಿಸಿದರೆ ಸಂಬಳದ ಜೊತೆಗೆ Duty Allowance ನೂರು ರೂಪಾಯಿ ಕೊಡಬೇಕಾಗುತ್ತದೆ. ಅವರಲ್ಲಿರತಕ್ಕಂಥ ಶಕ್ತಿ, ಸಾಮರ್ಥ್ಯಗಳನ್ನು ದೇಶದ ಬೆಳವಣಿಗೆಗೆ ಪ್ರಯೋಗ ಮಾಡುವುದಕ್ಕೋಸ್ಕರ ಕೊಡುತ್ತಾರೆ. ಇಂತಹ ಕಡೆಯೇ ಕೆಲಸ ಮಾಡಬೇಕು ಎಂದು ನಿರ್ದಿಷ್ಟವಾಗಿ ಕೊಟ್ಟಿಲ್ಲ. ಆದ್ಧರಿಂದ ಈ ತರಹ allowanceನ್ನು ತಪ್ಪಿಸಬೇಕು. ಪೂರ್ವದಲ್ಲಿ ಯಾರಿಗಾದರೂ ನೂರು ರೂಪಾಯಿ Personal Allowance ಬರುತ್ತಿದ್ದರೆ 1,400 ರಿಂದ 1,600 ರೂಪಾಯಿಗಳವರೆಗೂ ಮಾಡಿಸಿ ಇನ್ನೊಂದು ಕಡೆಗೆ ವರ್ಗಾಯಿಸುತ್ತಿದ್ದರು. ಆ ರೀತಿ ಇಂಗ್ಲೀಷ್‌ನವರು ರಾಜ್ಯಭಾರ ಮಾಡುವ ಕಾಲದಲ್ಲಿ ಅವರಿಗೆ ಅನುಕೂಲವಾಗುವಂತೆ allowance ಕೊಟ್ಟು ಅವರು ವ್ಯವಹರಿಸುತ್ತಿದ್ದರು. ಅದು ಈ ಕಾಲಕ್ಕೆ ಒಪ್ಪತಕ್ಕದ್ದು ಅಲ್ಲ. ಯಾವುದು ಕೇವಲ ಅನಿವಾರ್ಯವಾಗಿದೆಯೋ ಅಂತಹುದನ್ನು ಮಾತ್ರ ಕೊಡಬೇಕೇ ವಿನಾ ಬಾಕಿ allowance ರದ್ದು ಮಾಡಬೇಕು. ಹಾಗೆ ಮಾಡಿದರೆ 25 ಲಕ್ಷ ರೂಪಾಯಿ ಉಳಿಯುತ್ತದೆ ಎಂದು ತಮಗೆ ಸಲಹೆ ಮಾಡುತ್ತೇನೆ. ಎರಡನೆಯದು, Socialistic Pattern of Society ಮಾಡಬೇಕು ಎನ್ನುವಾಗ ಐನೂರು ರೂಪಾಯಿ ಸಂಬಳ ಬರುವ I.A.S. ಆಫೀಸರಿಗೆ ಎರಡು ಸಾವಿರ ರೂಪಾಯಿ ಮಾಡು

(SRI H. M. CHANNABASAPPA.)

ವುದು ವಾಸ್ತವವಾಗಿ Socialistic Patternಗೆ ಹೊಂದಾಣಿಕೆಯಾಗುವುದಿಲ್ಲ. ಮೈಸೂರು ಪ್ರಾಂತ ಸರ್ಕಾರ ಒಂದೇ ಅಲ್ಲ, ಭಾರತ ಸರ್ಕಾರದವರೂ ಕೂಡ ಇದನ್ನು ಹೊಸ ದೃಷ್ಟಿಯಿಂದ ನೋಡಬೇಕು. ಈ ಸಂದರ್ಭದಲ್ಲಿ ಒಂದು resolution ಕಳುಹಿಸ ಬೇಕೆಂದು ಮನಸ್ಸಿನಲ್ಲಿಟ್ಟು ಕೊಂಡಿದ್ದೇನೆ. I.A.S. ಮಾಡಿ ಭಾರತ ಸರ್ಕಾರದವರು ನಮ್ಮ servicesನ್ನು integrate ಮಾಡಿರುವುದರಿಂದ ನಮಗೆ ಮಹಾಪ ಘಾತವಾಗಿದೆ. ಹಾಗೆ ಮಾಡಕೂಡದು ಎಂದು ಆ ಕಾಲದಲ್ಲಿ ಪ್ರತಿಪಾದನೆ ಮಾಡಿದವರಲ್ಲಿ ನಾನೂ ಒಬ್ಬ. ಇವೊತ್ತೂ ಕೂಡ ಯಾವುದಾದರೂ ಒಂದು ರೀತಿಯಲ್ಲಿ ಭಾರತ ಸರ್ಕಾರದವರನ್ನು ಒತ್ತಾಯ ಮಾಡಿ ನಮಗೆ I.A.S. ನಿಂದ ಬಿಡುಗಡೆ ಮಾಡಿಕೊಡಿ ಎಂದು ಕೇಳ ತಕ್ಕದ್ದು ಸರಿ. ಅದು ಅನಾವಶ್ಯಕ. ಇನ್ನು 1,400 ರೂಪಾಯಿಗಳಲ್ಲಿ ಕೆಲಸ ಮಾಡುತ್ತಾ ಇರುವ ಮಹನೀ ಯರನ್ನು I.A.S.ಗೆ ಸೇರಿಸಿಕೊಂಡರೆ ಅವರಿಗೆ 1,800 ರೂಪಾಯಿ ಕೊಡುವುದು. ಮತ್ತು ಹಾಗೆ 1,800 ರೂಪಾಯಿಗಳಿಂದ ಸುಮ್ಮ ಸುಮ್ಮನೆ ಎರಡು ಸಾವಿರ ರೂಪಾಯಿಕೊಟ್ಟು ಬಿಡುವುದು Socialistic Pattern of Societyಗೆ ಸರಿಹೊಂದುವುದಿಲ್ಲ. ಒಂದು ವೇಳೆ ಸಂಬಳ ಹೆಚ್ಚಾಗಿ ಅದಂತೆ ಅಧಿಕ ಪ್ರಮಾಣದಲ್ಲಿ ಬುದ್ಧಿ, ಶಕ್ತಿ, ಸಾಮರ್ಥ್ಯವುಂಟಾಗತಕ್ಕಂಥ ಮಾರ್ಗ ವನ್ನು ತೋರಿಸಿದರೆ ಆಗ ನಾವು ಒಪ್ಪಿಕೊಳ್ಳಬಹುದು. ಅದು ಏನೇ ಆಗಲಿ, ಅವರೂ ಕೂಡ ಈ ವಿಷಯದಲ್ಲಿ ಬಹಳ ಸಹಾನುಭೂತಿಯಿಂದ ಇರುತ್ತಾರೆ ಎಂದು ನನ್ನ ನಂಬಿಕೆ. ಏಕೆಂದರೆ ಅವರು ದೇಶಕ್ಕೆ ಒಳ್ಳೆಯ ಸೇವೆ ಸಲ್ಲಿಸಿದರು, ಸೇವೆ ಸಲ್ಲಿಸುತ್ತಾ ಇರುವವರು ಮತ್ತು ಮುಂದೆ ಅಧಿಕ ಪ್ರಮಾಣದಲ್ಲಿ ಸೇವೆಯನ್ನು ಸಲ್ಲಿಸ ಬೇಕಾಗಿದೆ. Socialistic Pattern of Society ಯಲ್ಲಿ ಜಮೀನು ಹೆಚ್ಚಿಗೆ ಇರುವವರು ಅದನ್ನು ಬಿಟ್ಟುಕೊಡುವುದಕ್ಕೆ ಸಿದ್ಧರಾಗಿರುವಾಗ, ಅವರು ಮುಂದೆ ಬಂದು ಹೆಚ್ಚಿಗೆ ಕೊಡಿ ಎಂದು ಕೇಳುತ್ತಾ ರೆಂದು ನಾನು ನಂಬುವುದಿಲ್ಲ. ಸರ್ಕಾರದವರು ಅವರಿಗೆ ಒಂದು ಸೂಚನೆಯನ್ನು ಕೊಟ್ಟರೆ ಅವರು ತಾವಾಗಿಯೇ ಒಪ್ಪಿಕೊಳ್ಳುತ್ತಾರೆ ಎಂದು ನನ್ನ ನಂಬಿಕೆ. ಅದು ಏನಾದರೂ ಇರಲಿ, ಒಟ್ಟಿನಲ್ಲಿ ಭಾರತ ಸರ್ಕಾರದವರು ಮುಂದೆ ಈ ಸಮಸ್ಯೆಯನ್ನು ಪರಿಶೀಲಿಸಿ I.A.S. ನಿಂದ ಈ ಮೈಸೂರು ಸಂಸ್ಥಾನ ವನ್ನು ಬಿಡುಗಡೆ ಮಾಡಬೇಕು ಎಂದು ಹೇಳುತ್ತೇನೆ. ಇದು ಹೇಗೆ, ಎಂತು ಎಂಬುದನ್ನು ನೋಡೋಣ. ಕಾನೂನಿಗೆ ವಿರೋಧವಾಗಿದೆಯೆಂದರೆ ಕಾನೂನನ್ನು ಬದಲಾವಣೆ ಮಾಡಬೇಕು. ಸೋಷಿಯಲಿಸ್ಟಿಕ್ ಪ್ಯಾಟರ್ನ್ ಸೊಸೈಟಿಯನ್ನು ತಯಾರು ಮಾಡುವುದಕ್ಕೆ ಕಾನೂನಿನ ವಿರೋಧವಿದ್ದರೆ ಅದನ್ನು ಸರಿಮಾಡ ಬಹುದು.

A MEMBER.—Efficiency ?

3 P.M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಚ್ಚಿಗೆ ಜನರನ್ನು ನೇಮಿಸುವುದರಿಂದಲೇ efficiency ಹೆಚ್ಚಾಗುತ್ತ ದೆಂದು ಹೇಳುವುದು ಸರಿಯಲ್ಲ. ಏಕೆಂದರೆ, ಈಗ ನೀವು ಹಿಂದೆ ಪಬ್ಲಿಷ್ ಮಾಡಿರುವ ರಾಘವೇಂದ್ರ ರಾಯರ ರಿಪೋರ್ಟನ್ನೇ ನೋಡಿ. 1949 ನೆಯ ಇಸವಿಯಲ್ಲಿ ಬಹಳ ಕಷ್ಟಪಟ್ಟು ಅವರು ಈ ರಿಪೋ ರ್ಟನ್ನು ತಯಾರುಮಾಡಿದ್ದಾರೆ. ಅದನ್ನು ತಾವು ಓದಿದಪಕ್ಷಕ್ಕೆ ರಿಟ್ರೆಂಚ್‌ಮೆಂಟ್ ಮಾಡುವುದನ್ನು ಕೇಳ ಬೇಕಾಗಿಯೇ ಇಲ್ಲ. I have great regard for him and give all the credit for that work.

SRI H. SIDDAVEERAPPA.—In the same report, he says, in some of the departments retrenchment is not possible. Please read that.

SRI H. M. CHANNABASAPPA.—Very well, I know.

ಅಲ್ಲದೆ, ಎಲ್ಲದರಲ್ಲೂ ರಿಟ್ರೆಂಚ್‌ಮೆಂಟ್ ಮಾಡ ಬೇಕೆಂದು ನಾವು ಹೇಳಿಲ್ಲ. ಅನೇಕ ಕಡೆಗಳಲ್ಲಿ ಕೆಲಸ ಗಳು overlap ಆಗಿವೆ. ಆರೋಗ್ಯ ರಕ್ಷಣಾ ಇಲಾಖೆ ಮತ್ತು ವೈದ್ಯ ಇಲಾಖೆ—ಇವೆರಡರ ಕರ್ತವ್ಯಗಳು ಒಂದಕ್ಕೊಂದಕ್ಕೆ ಹೊಂದಾಣಿಕೆ ಇರುವುದರಿಂದ, ಇವೆರಡಕ್ಕೂ ಬೇರೆಬೇರೆ ಸಿಬ್ಬಂದಿಗಳು, ಬೇರೆಬೇರೆ ಆಡಳಿತಾಧಿಕಾರಿಗಳು ಬೇರೆಬೇರೆ ಆಫೀಸುಗಳನ್ನು ಮಾಡಿಕೊಂಡು ಹೋಗುವುದರಿಂದ ಕೆಲಸದ ದಕ್ಷತೆ ಹೆಚ್ಚುವುದಿಲ್ಲ. ಇವೆರಡನ್ನೂ ಒಂದೇ ಮ್ಯಾನೇಜ್ ಮೆಂಟಿನಲ್ಲಿಡಬೇಕೆಂದು ಈ ಸಭೆಯಲ್ಲಿ ಮಾನ್ಯ ಸದಸ್ಯ ರನೇಕರು ಸಲಹೆ ಮಾಡಿದ್ದಾರೆ. ಅದೇ ಸಲಹೆಯನ್ನೇ ಈ ರಿಪೋರ್ಟಿನಲ್ಲಿಯೂ ಕೊಟ್ಟಿದೆ. ಇದೇರೀತಿ ವೆಟರಿ ನರಿ ಮತ್ತು ಅಗ್ರಿಕಲ್ಚರ್, ಇವೆರಡನ್ನೂ ಒಂದೇ ಇಲಾಖೆಯಾಗಿ ಏಕೆ ಸೇರಿಸಕೂಡದು? ಅಂದಮಾತ್ರಕ್ಕೇ ಖರ್ಚೆಲ್ಲವನ್ನೂ ಖೋತಾಮಾಡಿ ಎಂದು ನಾನು ಹೇಳು ವುದಿಲ್ಲ. ಎಷ್ಟರಮಟ್ಟಿಗೆ ಖರ್ಚು ಕಡಮೆ ಮಾಡಬಹು ದೆಂಬುದನ್ನು ಯೋಚನೆ ಮಾಡಬಹುದು. ಕಾಲಾವ ಕಾಶವಿದ್ದರೆ ಹೀಗೆಯೇ ಒಂದೊಂದು ವಿಷಯವನ್ನೂ ತೆಗೆದುಕೊಂಡು ನಾನು ಹೇಳಬಲ್ಲೆ, ಕಾಲಾವಕಾಶವಿಲ್ಲ ದಿರುವುದರಿಂದ ಸೂಕ್ಷ್ಮವಾಗಿ ಯಾವಯಾವ ಬಾಬಿನಲ್ಲಿ ಕಡಮೆಮಾಡಬಹುದೆಂದು ಹೇಳುತ್ತಿದ್ದೇನೆ, ಅಷ್ಟೆ.

Efficiency Audit Department ಎಂದು ಒಂದು ಇಲಾಖೆಯಿದೆ. ಇವರು ಇದುವರೆಗೂ ಎಫಿಷಿ ಯನ್ಸಿಯನ್ನು ಅಳತೆಮಾಡಿ ಯಾರು ಯಾರು inefficient ಎಂದೇನಾದರೂ ನಿರ್ಧರಮಾಡಿದ್ದಾರೆಯೇ? ಆ ಬಗ್ಗೆ ಅವರಲ್ಲೇನಾದರೂ statistics ಇದೆಯೇ? ಏನೂ ಇಲ್ಲ! 'Efficiency Bar' ಎಂಬುದಿರು ತ್ತದೆ. ಸಂಬಳ ಅಲ್ಲಿಗೆ ಬಂದು ನಿಂತಿತು ಅಂದರೆ, if there is nothing contrary, he will be simply given efficiency bar. There must be a specific remark that he is efficient in order to deserve the grade and to cross the efficiency bar. ಸುಮ್ಮನೆ normal ಆಗಿ ತಲೆತಗ್ಗಿಸಿಕೊಂಡು ಏನೂ ಅಪಾದನೆ ಯಿಲ್ಲದೆ ಇದ್ದರೆ ಅವನನ್ನು efficient ಎಂದು ಹೇಳೋಣವೇ? If merely because there is nothing against him, it does not mean that he is efficient. But when a man passes the efficiency bar, he is supposed to be a man who is sufficiently efficient. ಇವುಗಳೆಲ್ಲವನ್ನೂ ಸ್ವಲ್ಪ ಪರಿಶೀಲನೆ ಮಾಡಬೇಕು.

ಇನ್ನೊಂದು ವಿಷಯವೇನೆಂದರೆ, ಈಗ ಸರ್ಕಾರಿ ಕೆಲಸಗಳಲ್ಲಿ duplication of work ಇದೆ. ಎಷ್ಟೋ ಆಫೀಸಗಳಲ್ಲಿ ಗುಮಾಸ್ತರಿಗಾಗಲಿ, ಅಧಿ ಕಾರಿಗಳಿಗಾಗಲಿ ತಮ್ಮ ಅಧಿಕಾರವೆಷ್ಟಿದೆ ಎಂಬುದೇ ಗೊತ್ತಿರುವುದಿಲ್ಲ. ಇದನ್ನು ನೋಡಿದರೆ, ಇವೊತ್ತಿನ ದಿನ ಸಬ್‌ಡಿವಿಜನ್ ಆಫೀಸರಿಗೇ ಆಗಲಿ, ಅಮಲ್ದಾರ ರಿಗೇ ಆಗಲಿ ಇಂಥಿಂಥ ಆಕ್ಟ್‌ಗಳಲ್ಲಿ ಇಂಥಿಂಥ ಅಧಿ

ಕಾರಗಳು ಅವರಿಗೆ ಬಂದಿವೆಯೆಂಬ ಒಂದು ಪಟ್ಟಿ ಮಾಡಿಕೊಟ್ಟರೆ ಒಳ್ಳೆಯದೆಂದು ಕಾಣುತ್ತದೆ. ಇಲ್ಲದಿದ್ದರೆ ಪ್ರತಿಯೊಂದಕ್ಕೂ 'Submitted for orders' ಎಂದು ಹಾಕುತ್ತಾರೆ. ತನ್ನ ಕೈಯಲ್ಲಿ ಜವಾಬ್ದಾರಿಯಿದ್ದರೂ ಅದನ್ನು ನಿರ್ವಹಿಸದೆ 'submitted for orders' ಎಂದು ಹೇಳಿ ಇನ್ನೊಬ್ಬರ ಮೇಲೆ ಜವಾಬ್ದಾರಿ ಹೊರಿಸುತ್ತಾರೆ. ಆದ್ದರಿಂದ ಅಧಿಕಾರಿಗಳು ಕಾನೂನಿನಲ್ಲಿರತಕ್ಕ ಅಧಿಕಾರಗಳನ್ನು ಸಂಪೂರ್ಣವಾಗಿ ಪ್ರಯೋಗಮಾಡಿ ಯಾವುದೇ ಸಮಸ್ಯೆಯನ್ನು ಬಗೆಹರಿಸುವ ಶಕ್ತಿ ಸಾಮರ್ಥ್ಯ; ಆ ಮನೋಭಾವ ಅಧಿಕಾರಿಗಳಲ್ಲಿ ಬರಬೇಕು. ಹಾಗಿಲ್ಲದೆ, ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಬೇರೆಯವರ ಮೇಲೆ ಹಾಕುವ ಮನೋಭಾವವನ್ನು ತಾಳುವುದರಿಂದಲೇ ಕಾಗದ ಪತ್ರಗಳು ವ್ಯಥಾ ಮೇಲಕ್ಕೂ ಕೆಳಕ್ಕೂ ಹೋಗುತ್ತಿರುತ್ತಿವೆ, ಕೆಲಸ ಕಾರ್ಯಗಳು ಸುಲಲಿತವಾಗಿ ಆಗುವುದಿಲ್ಲ. Those stations are unnecessary, they could be nipped in the bud. ಇದರ ಜೊತೆಗೆ work load ನೋಡಿ ಪ್ರತಿಯೊಬ್ಬರಿಗೂ ಕೆಲಸ ಕೊಡುತ್ತಿದ್ದಾರೆಯೇ ? ಪ್ರತಿಯೊಬ್ಬ ಆಧಿಕಾರಿಯೂ ಎಷ್ಟೆಷ್ಟು ಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದಾನೆಂಬುದನ್ನು ನೋಡಿ ನಮ್ಮ ನಿರೀಕ್ಷೆಯ ಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದಾನೆಯೇ ಎಂಬುದನ್ನು ನೋಡಬೇಕು. ಹಾಗೆ ಮಾಡದೆ ಇದ್ದರೆ inefficient ಎಂದು ಹೇಳಿ ಅವನಿಗೆ ಮುದ್ರಣ ಮಾಡಬೇಕು. ಇವೊತ್ತಿನವರೆಗೂ ನಾವು ತಿಳಿದಿರುವುದರಲ್ಲಿ, ಲಂಚ ತಿಂದಿದ್ದಾನೆಂದು ಹೇಳಿ ಒಬ್ಬನನ್ನು ವಜಾ ಮಾಡಿರಬಹುದು ; inefficient ಎಂದು ಹೇಳಿ ಮೈಸೂರಿನ ಚರಿತ್ರೆಯಲ್ಲೇ ಒಬ್ಬರನ್ನೂ ವಜಾ ಮಾಡಿಲ್ಲ.

When a person is not efficient, there is no meaning in our entertaining him as an officer and continuing him till his retirement. There is no meaning in that. We have got to make a provision for all these things. I am making this suggestion in all seriousness to Government to consider these matters and see that the whole administration is reorganised and that with the minimum staff the maximum benefit is obtained.

ಇನ್ನು ನಿಮ್ಮ land reclamation policy ವಿಚಾರ ಹೇಳುತ್ತೇನೆ. ನಮ್ಮ ಸರ್ಕಾರದವರೇ ಅನೇಕವೇಳೆ ಈ ಸಭೆಯ ಮುಂದೆ ಹೇಳಿದಹಾಗೆ, 8 ಲಕ್ಷ 8 ಸಾವಿರ ಎಕರೆಗಳಷ್ಟು assessed waste lands ಇವೆ. 19 ಲಕ್ಷ ಎಕರೆಗಳಷ್ಟು current fallow lands ಇವೆ. ಇಷ್ಟು ಜಮೀನಿದ್ದರೂ ಕೂಡ ಜಮೀನು ಹಂಚಿಕೆಗೆ ತಕ್ಕ ಕಾರ್ಯಕ್ರಮಮಾಡಿಲ್ಲ. ಮೊನ್ನೆ ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಬೇಕಾದಷ್ಟು ಮನೆಗಳನ್ನು ಕಟ್ಟಿಕೊಡುವ ಒಂದು ಯೋಜನೆಯನ್ನು ಮಾಡಿದ್ದೀರಿ. ಈಗ ನೀವು ಮಾಡುತ್ತಿರುವಂತೆ ಭೂಮಿಯನ್ನೂ ಹಂಚಿ ಭೂವ್ಯವಸಾಯ ಮಾಡುವುದಕ್ಕೆ ಕೇಳಿದವರಿಗೆಲ್ಲಾ ಒಂದೆರಡು ಎಕರೆ ಜಮೀನನ್ನು ಕೊಡುವುದಾಗಿ ಹೇಳಿ ದುಡ್ಡಿಲ್ಲದಿರುವವರಿಗೆಲ್ಲಾ ಜಮೀನು ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಇದಕ್ಕೆ ತಾವು ಒಂದು ಯೋಜನೆ ಹಾಕಬೇಕು. ಲಕ್ಷಾಂತರ ಎಕರೆಗಳು ನಿಮ್ಮಲ್ಲಿ ಸಾಗುವಳಿಗಿರುವುದರಲ್ಲಿ ಈ ವರ್ಷ ಎರಡು ಮೂರು ಲಕ್ಷ ಎಕರೆಗಳನ್ನಾದರೂ ನಿರ್ದಿಷ್ಟವಾಗಿ ಸಾಗುವಳಿಗೆ ತರುವ ಏರ್ಪಾಡು ಮಾಡಬೇಕು. ಜಮೀನಿಲ್ಲದ ಜನರಿಗೆ ಸಾಧನ ಸಂಪತ್ತುಗಳು ಏನೇನುಬೇಕೋ ಅದನ್ನೆಲ್ಲಾ ಒದಗಿಸಿ ಅವರನ್ನು ಅಲ್ಲಿ ನೆಲಸುವಂತೆ ಮಾಡಿದರೆ ನೀವು ಕೊಟ್ಟ ಹಣ ನಿಮಗೆ ಪುನಃ ಬರುತ್ತದೆ. Experimental ಆಗಿ ಸಣ್ಣದಾಗಿ 10,000 ಎಕರೆಗಳ ಒಂದು plot ತೆಗೆದುಕೊಳ್ಳಿ. ಈ ಹತ್ತು ಸಾವಿರ ಎಕರೆಗಳಿಗೆ ಸರಾಸರಿ ಎಕರೆಗೆ 100 ರೂಪಾಯಿ ಖರ್ಚುಮಾಡಿದರೂ ಸಾಕು. ಟ್ರಾಕ್ಟರುಗಳ ಮೂಲಕ ಉಳಿಸಿ ಒಟ್ಟು 10,000 ಎಕರೆಗಳನ್ನೂ ಸಾಗುವಳಿ ಮಾಡುವುದಕ್ಕೆ ಎಷ್ಟು ಖರ್ಚಾಗುತ್ತದೆಂದು ಲೆಕ್ಕವಿದೆ. ಎಷ್ಟೇ ಖರ್ಚಾದರೂ ಎಕರೆಗೆ 100 ರೂಪಾಯಿಗಳ ಮೇಲೆ ಆಗುವುದಿಲ್ಲ. ಇಂಥ ಜಮೀನನ್ನು ಹತ್ತು-ಹತ್ತು ಎಕರೆಗಳಂತೆ ಸಾವಿರ ಸಂಸಾರಗಳಿಗೆ ಕೊಡಬಹುದು. ಐದು ಎಕರೆಯಂತೆ ಕೊಟ್ಟರೆ ಎರಡು ಸಾವಿರ ಸಂಸಾರಗಳಿಗೆ ಕೊಡಬಹುದು.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—10,000 ಎಕರೆಗಳು ಒಂದೇ ಕಡೆ ಇರುವ ಸ್ಥಳವನ್ನು ತೋರಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಡವಿನಕೋಟೆಯೆಂದು ಹೆಗ್ಗಡದೇವನಕೋಟೆಯಲ್ಲಿದೆ. ಅಲ್ಲಿಗೆ ಬೇಕಾದರೆ ಬಂದು ನೋಡಿ. ಬೇಕಾದಷ್ಟು ಜಮೀನಿದೆ. ಈಗ ನಿಮ್ಮ land reclamation policy ಯೆಂಬುದು ಏನಾಗಿದೆಯೆಂದರೆ, ಅರ್ಜಿಕೊಟ್ಟವನಿಗೆ ಜಮೀನು ಕೊಡುವುದಾಗಿದೆಯೇ ಹೊರತು, ಈ ಸಮಸ್ಯೆಯನ್ನು ಯಾವ ರೀತಿ ಪರಿಹಾರ ಮಾಡಬೇಕೆಂಬ ಯೋಚನೆಯಿಲ್ಲ. ಭಾರತ ಸರ್ಕಾರದವರು ಮನೆಗಳ ಅಭಾವವನ್ನು ನೀಗಿಸುವುದಕ್ಕೆ ಯಾವ ರೀತಿ ಒಂದು ವ್ಯವಸ್ಥೆಮಾಡಿದ್ದಾರೋ ಅದೇ ರೀತಿ, ಈ ಪ್ರಕಾರ 10,000 ಎಕರೆಗಳ ಒಂದು ಪ್ಲಾಟ್‌ಮಾಡಿ ಟ್ರಾಕ್ಟರುಗಳನ್ನು ಬಿಟ್ಟು ಉಳುಮೆ ಮಾಡಿಸಿ ಎಕರೆಗೆ 100 ರೂಪಾಯಿ ಖರ್ಚುಮಾಡುವ ಒಂದು ವ್ಯವಸ್ಥೆಮಾಡಲಿ : ಒಬ್ಬ ರೈತನಿಗೆ ಒಂದು ಜೊತೆ ಎತ್ತು, 6 ತಿಂಗಳ ಜೀವನಕ್ಕೆ 200 ರೂಪಾಯಿ—ಒಟ್ಟಿನಲ್ಲಿ 1,000 ರೂಪಾಯಿ ಖರ್ಚುಮಾಡಿದರೆ ಒಂದು ಸಂಸಾರವನ್ನು rehabilitate ಮಾಡಬಹುದು. ಆ ಒಂದು ಸಾವಿರ ರೂಪಾಯಿಗಳನ್ನು ಅವನು ಯಾವಾಗ ವಾಪಸು ಕೊಡುತ್ತಾನೋ ಅವನಿಗೆ ಆ ಜಮೀನು ಕೊಡಿ. ಆಗ್ಗ, ಸರ್ಕಾರದ ಹಣವೂ ನಷ್ಟವಾಗುವುದಿಲ್ಲ, ದೇಶದಲ್ಲಿ ಉತ್ಪನ್ನವೂ ಜಾಸ್ತಿಯಾಗುತ್ತದೆ. ಕೆಲಸಗಳು ದೊರಕದ ಜನರಿಗೆ ಕೆಲಸ ಸಿಕ್ಕುವಂತಾಗಿ ನಿರುದ್ಯೋಗವೂ ದೇಶದಲ್ಲ ಹೋಗುತ್ತದೆ. ವಿದ್ಯಾವಂತರಾಗಿರುವವರು ತಮ್ಮನ್ನು ದಿನವಹಿ ಬಂದು ಕೆಲಸ ಕೊಡಿ ಎಂದು ಕೇಳುವುದೂ ಹೋಗುತ್ತದೆ. ಹಸನಾಗಿ ಮಾಡಿರುವ ಜಮೀನನ್ನು ಹೇರಳವಾಗಿ ಕೊಡುತ್ತೇವೆಂದು ಹೇಳಿದರೆ ಯಾರಾದರೂ ಮುಂದೆ ಬರುತ್ತಾರೆ. ಅದಿಲ್ಲದೆ, ಕಾಡುಮೇಡುಗಳನ್ನು ಕೊಟ್ಟು ಬೇಸಾಯ ಮಾಡಿ ಎಂದರೆ ಯಾರೂ ಬರುವುದಿಲ್ಲ. ಆದ್ದರಿಂದ ನಿಮ್ಮ land reclamation policy ಯನ್ನು ಬದಲಾವಣೆಮಾಡಿ, ಉದಾರವಾದ ಯೋಜನೆಯನ್ನು ಹಾಕಿಕೊಂಡು ಇರತಕ್ಕ ಲಕ್ಷಾಂತರ ಎಕರೆಗಳನ್ನು ಸಾಗುವಳಿಗೆ ತಂದು ವ್ಯವಸಾಯಮಾಡುವುದಕ್ಕೆ ಮುಂದೆ ಬರುವ ವಿದ್ಯಾವಂತರಿಗೆ ವಿಶೇಷ ಪ್ರೋತ್ಸಾಹ ಕೊಟ್ಟು ಅವರನ್ನು rehabilitate ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

(ಶ್ರೀ ಎಚ್. ಎಂ. ಚೆನ್ನಬಸಪ್ಪ.)

ಕೊನೆಯದಾಗಿ ವಿಶ್ವವಿದ್ಯಾನಿಲಯದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಾನು ಈಗ ಸುಮಾರು 8—10 ವರ್ಷಗಳಿಂದಲೂ ನನ್ನ ಕೆಲವು ಸ್ನೇಹಿತರುಗಳ ಹತ್ತಿರ ಮಾತನಾಡುತ್ತಿರುವಾಗ ಸಾಂಪ್ರದಾಯಿಕವಾಗಿ ಕೆಲವು ವಿಷಯಗಳನ್ನು ಹೇಳುತ್ತಿದ್ದೇನೆ. ವಿಶ್ವವಿದ್ಯಾನಿಲಯದ ಪರಿಸ್ಥಿತಿ ಏನಾಗುತ್ತಿದೆ, ಈ ಹೊತ್ತು ಹೇಗಿದೆ ಎಂಬುದನ್ನು ಹೇಳುತ್ತಿದ್ದೇನೆ. ಅಲ್ಲಿ ಈಗ ಏನಾಗಿದೆ ಎಂಬುದನ್ನು ನಮ್ಮನಮ್ಮಲ್ಲೇ ಪರೀಕ್ಷೆ ಮಾಡೋಣ.

Mr. SPEAKER.—I would request the Hon'ble Member to close his speech.

Sri H. M. CHANNABASAPPA.—I would take few more minutes, Sir.

Sri K. HANUMANTHAIYA.—I request the Hon'ble Member not to make any extravagant remarks on this incident. I understand the University Council has appointed a Committee to go into the matter. Better these things are not exaggerated and bad reputation brought to the University.

Sri H. M. CHANNABASAPPA.—I am very sorry, I did not want to exaggerate; in fact, I wanted to place facts before you. But anyway as the Chief Minister says that a Committee has been appointed to go into the matter, I do not like to make much of it. I am glad the Government sees the reason.

Mr. SPEAKER.—The Hon'ble Member will close now.

Now the House will rise and meet at 3-45 P.M.

The House adjourned at Fifteen Minutes past Three of the Clock and re-assembled at Forty-five Minutes past Three of the Clock.

[MR. DEPUTY SPEAKER in the Chair.]

ಶ್ರೀ ಕೆ. ಪಟ್ಟಾಭಿರಾಮರ್ (ಕೋಲಾರ).—ಮಾನ್ಯ ಸಭಾಪತಿಗಳೇ, ಮೈಸೂರು ಸಂಸ್ಥಾನದ ಸಂಚಿತ ನಿಧಿಯಿಂದ ಸುಮಾರು 60 ಕೋಟಿಗಳಷ್ಟು ಹಣವನ್ನು ನಮ್ಮ ಸರ್ಕಾರ ಮುಂದಿನ ಸಾಲಿನಲ್ಲಿ ಖರ್ಚುಮಾಡತಕ್ಕ ಬಗ್ಗೆ ಈಗ ಈ ಮಾನ್ಯ ಸಭೆಯು ತನ್ನ ಅನುಮತಿಯನ್ನು ಕೊಡಬೇಕಾಗಿರುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳತಕ್ಕದ್ದು ಅತ್ಯಗತ್ಯವೆಂದು ಕಾಣಿಸುತ್ತಿದೆ.

ಈಗಾಗಲೇ ಈ ಹಿಂದೆ ಈ ಡಿಮ್ಯಾಂಡ್ ಮನವಿಗಳ ಬಗ್ಗೆ ಮಾನ್ಯ ಸದಸ್ಯರು ತಂದಿದ್ದಂಥ ಖೋತಾ ಸೂಚನೆಗಳ ಸಂಬಂಧದಲ್ಲಿ ಚರ್ಚೆನಡೆದಾಗ ಅನೇಕ ಮಾನ್ಯ ಸದಸ್ಯರುಗಳು ಸರ್ಕಾರ ತನ್ನ ಆಡಳಿತ ವೆಚ್ಚಗಳಲ್ಲಿ ಹೇಗೆ ಮಿತವ್ಯಯಗೊಳಿಸಬೇಕು ಮತ್ತು ಈ ಸರ್ಕಾರಿ ಕಾರ್ಯಕಲಾಪಗಳಲ್ಲಿ ಹೇಗೆ ಆಡಳಿತವರ್ಗ ದಕ್ಷತೆಯಿಂದ ಕೆಲಸಮಾಡಬೇಕು ಎಂಬತಕ್ಕ ಬಗ್ಗೆ ಅನೇಕ ಉಪಯುಕ್ತ ಸಲಹೆಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಆದರೆ ಆ ರೀತಿಯಾಗಿ ಇಲ್ಲಿಯವರೆಗೂ ಅನೇಕ ಮಾನ್ಯ ಸದಸ್ಯರುಗಳು ಏನೇನು ಸೂಚನೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೋ ಅವುಗಳನ್ನೆಲ್ಲಾ ಮುಂದಿನ ಸಾಲಿನಲ್ಲಿ ಸರ್ಕಾರದವರು ಸಂಪೂರ್ಣವಾಗಿ ಜಾರಿಗೆ ತಂದರೆ ಆಗ ಈ ಮಾನ್ಯ ಸದಸ್ಯರುಗಳು ಕೊಟ್ಟಂಥ ಸಲಹೆಗಳಿಗೆ ಒಂದು ಮಾನ್ಯತೆಯನ್ನು ತಾವು ಕೊಟ್ಟಹಾಗೆ ಆಗುವುದಲ್ಲದೆ ಮುಂದೆ ದೇಶದಲ್ಲಿ ಪರಿಣಾಮಕಾರಿಯಾದಂಥ ಅನುಕೂಲಗಳುಂಟಾಗುತ್ತವೆ. ಆದುದರಿಂದ ಈ ಎಲ್ಲಾ ಸಲಹೆಗಳನ್ನೂ ಕಾರ್ಯರೂಪಕ್ಕೆ ತರತಕ್ಕದ್ದು ಸರ್ಕಾರದವರ ಆದ್ಯ ಕರ್ತವ್ಯವೆಂದು ನಾನು ಹೇಳಲಿಚ್ಛಿಸುತ್ತೇನೆ. ಆದರೆ ಈಗತಾನೆ ಮಾನ್ಯ ಸದಸರಾದ ಶ್ರೀ ಜೆ. ಮಹಮ್ಮದ್ ಇಮಾಂರವರು ತಮ್ಮ ಭಾಷಣ ಕಾಲದಲ್ಲಿ ಸರ್ಕಾರಕ್ಕೆ ಬಹಳ ಉತ್ತಮವಾದಂಥ ಮತ್ತು ಅಮೂಲ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಈಗ ಕಾಲಸನ್ನಿಹಿತವೂ ಮತ್ತು ಸಮಯೋಚಿತವೂ ಕೂಡ ಆಗಿದೆ. ಅದೇ ವಿಷಯವನ್ನು ನಾವುಗಳನೇಕರು ಸರ್ಕಾರದವರ ಗಮನಕ್ಕೆ ಕಳೆದ ಎರಡು ಮೂರು ವರ್ಷಗಳಿಂದಲೂ ಒಂದೇ ಸಮನಾಗಿ ತರುತ್ತಲೇ ಇದ್ದೇವೆ. ಅದು ಯಾವ ವಿಚಾರ ಎಂದರೆ ನಮ್ಮ ಸರ್ಕಾರದ ಖರ್ಚು ವೆಚ್ಚಗಳು ದಿನೇ ದಿನೇ ಜಾಸ್ತಿಯಾಗುತ್ತಾ ಇವೆ, ವರಮಾನ ದಿನೇ ದಿನೇ ಕಡಮೆಯಾಗುತ್ತಿದೆ ಎನ್ನತಕ್ಕದ್ದೇ ಆಗಿದೆ. ಆದರೆ ಈಗ ಈ ಪ್ರಶ್ನೆಯನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಅನುಕೂಲವಾದಂಥ ಸಮಯ ಒದಗಿ ಬಂದಿರುವಂತೆ ನನಗೆ ಭಾಸವಾಗುತ್ತಿದೆ. ನಾನು ಈ ವಿಚಾರವನ್ನು ಚರ್ಚೆಮಾಡಬೇಕೆಂದು ಕೇಳುತ್ತಿರುವುದರಲ್ಲಿ ನಮಗೆ ಸರ್ಕಾರದವರ ಬಗ್ಗೆ ಯಾವ ಒಂದು ವಿರೋಧಾಭಿಪ್ರಾಯವೂ ಇರುವುದಿಲ್ಲ. ಮತ್ತು ಸರ್ಕಾರದವರನ್ನು ಆಕ್ಷೇಪಣೆ ಮಾಡಬೇಕು ಎನ್ನುವಂಥ ಉದ್ದೇಶವೂ ಸಹ ಇದರಲ್ಲಿರುವುದಿಲ್ಲ. ನಾವು ಇದನ್ನು ಕೇವಲ ಸದಭಿಮಾನದಿಂದ, ಸದಭಿಪ್ರಾಯದಿಂದ ಮತ್ತು ದೇಶದ ಏಳಿಗೆಯ ದೃಷ್ಟಿಯಿಂದ ಸೂಚಿಸತಕ್ಕದ್ದಾಗಿದೆ. ಆದರೆ ಈ ದಿವಸ ನಾವು ನಮ್ಮಲ್ಲಿರತಕ್ಕಂಥ ಪರಿಸ್ಥಿತಿಗನುಗುಣವಾಗಿ, ನಾವು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಒಂದು ಸುಭದ್ರವಾದ ತಳಹದಿಯ ಮೇಲೆ ಪರಿಮಿತಿಗೊಳಿಸ ಬೇಕಾಗಿದೆ. ಈಗ ನಡೆಯುತ್ತಿರುವ ರೀತಿಯನ್ನು ನೋಡಿದರೆ ದಿನೇದಿನೇ ನಮ್ಮ ಖರ್ಚು ವೆಚ್ಚಗಳು ಜಾಸ್ತಿಯಾಗುತ್ತ ಉಳಿತಾಯದ ಬದಲು ಇಳಿತಾಯವಾಗುತ್ತಿದೆ. ಈಗ ಈ ವಿಚಾರಗಳನ್ನೆಲ್ಲಾ ಆಮೂಲಾಗ್ರವಾಗಿ ಪರಿಶೀಲನೆಮಾಡಿ ನಮ್ಮ ಹಣಕಾಸಿನ ವ್ಯವಸ್ಥೆಯನ್ನು ಒಂದು ಸುವ್ಯವಸ್ಥಿತಿಗೆ ತರಲು ಅನೇಕ ಮಾನ್ಯ ಸದಸ್ಯರು ಅನೇಕ ರೀತಿಯ ಸಲಹೆಗಳನ್ನು ಈಗ ಸಭೆಯ ಮುಂದಿಟ್ಟಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಸರ್ಕಾರದವರೂ ಕೂಡ ಈ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡತಕ್ಕ ಬಗ್ಗೆ ಒಂದು ಸಮಿತಿಯನ್ನು ರಚಿಸುವುದಾಗಿ ಒಂದು ಭರವಸೆಯನ್ನು ಕೊಟ್ಟಿರುವುದು ಬಹಳ ಸಂತೋಷದ ವಿಷಯ. ಈಗ ಮಾನ್ಯ ಶ್ರೀ ಇಮಾಂರವರು ಈ ಸರ್ಕಾರಿ ನೌಕರರ ಸಂಬಳಸಾರಿಗೆಗೆ ಸಂಬಂಧಪಟ್ಟಂಥ ಕೆಲವು ಸಲಹೆಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಅಲ್ಲದೆ ಅವರು ನೀಡಿರತಕ್ಕಂಥ ಸಲಹೆಗಳು ಬಹಳ ಅಮೂಲ್ಯವಾದವುಗಳು. ಈಗ ನನಗೆ ತೋರುತ್ತಿರುವ ರೀತಿಯಲ್ಲಿ ಈ ಸಂಬಳ ಸಾರಿಗೆ

ಗಳು ಎರಡು ಮುಖವಾಗಿವೆ. ನೂರು ರೂಪಾಯಿಗಳಿಗಿಂತಲೂ ಕಮ್ಮಿ ಸಂಬಳ ಪಡೆಯತಕ್ಕವರು ಒಂದು ಹಂತ. ನೂರು ರೂಪಾಯಿಗಳಿಗಿಂತಲೂ ಹೆಚ್ಚಿಗೆ ಸಂಬಳ ಪಡೆಯುತ್ತಿರುವವರು ಇನ್ನೊಂದು ಹಂತ. ಹೀಗೆ ಇದನ್ನು ಎರಡು ಹಂತಗಳಾಗಿ ವಿಭಾಗ ಮಾಡಬಹುದು. ಆದರೆ ಈ ವಿಚಾರದಲ್ಲಿ ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರು ಇನ್ನೊಂದು ರೀತಿಯಾಗಿ ಹೇಳಿದ್ದಾರೆ. ಆದರೆ ನಾವೀಗ ಮೊದಲನೆಯದಾಗಿ ಈ ಐ.ಎ.ಎಸ್. ಎಂಬ ಒಂದು ದರ್ಜೆಯ ಅಧಿಕಾರಿಗಳ ವಿಚಾರವನ್ನು ಪರಿಶೀಲನೆಮಾಡಿ ನೋಡೋಣ. ನನಗೆ ಅವರು ಹಾಗೆ ಮಾತನಾಡುತ್ತಿದ್ದಾಗ ಒಂದು ವಿಷಯ ಜ್ಞಾಪಕಕ್ಕೆ ಬಂತು. ಈ ಹಿಂದೆ ಬ್ರಿಟಿಷರು ಇಲ್ಲಿ ಆಡಳಿತ ನಡೆಸುತ್ತಿದ್ದಂಥ ಕಾಲದಲ್ಲಿ ಈ ಐ.ಸಿ.ಎಸ್. ಎಂಬ ಒಂದು ವ್ಯವಸ್ಥೆಯಿತ್ತು. ಅದಕ್ಕೆ ಅವರು 'ಸ್ಟೀಲ್‌ಫ್ರೇಂ' ಎಂದು ಒಂದು ಪದವನ್ನು ಉಪಯೋಗಿಸುತ್ತಿದ್ದರೆಂಬ ವಿಚಾರ ನನಗೆ ಜ್ಞಾಪಕಕ್ಕೆ ಬಂತು. ಹಿಂದೆ ಒಂದಾವರ್ತಿ ಪ್ರಧಾನಿ ಲಾಯಿಡ್ ಜಾರ್ಜರವರು ಪಾರ್ಲಿಯಮೆಂಟಿನ ಮುಂದೆ ಮಾತನಾಡುತ್ತಿದ್ದಾಗ ಜನರ ಲಕ್ಷಣಗಳು ಮತ್ತು ಅವರ ವಿರೋಧ ಭಾವನೆಗಳು ಯಾವ ರೀತಿಯಾಗಿ ಇರುತ್ತವೆಯೋ ಆ ರೀತಿಯನ್ನೇ ಅನುಸರಿಸಿ ಸರ್ಕಾರ ನಡೆಯಬೇಕಾದರೆ ಅದಕ್ಕನುಗುಣವಾದಂಥ ಶಿಬ್ಬಂದಿಯನ್ನು ಕಟ್ಟಲೇಬೇಕು ಮತ್ತು ಅಂಥ ಶಿಬ್ಬಂದಿಯ ಆಧಾರದಮೇಲೆ ಸರ್ಕಾರಿ ಆಡಳಿತಗಳು ನಡೆಸಲ್ಪಡಬೇಕಾಗುವುದು, ಆದುದರಿಂದ ನಾವು ಈ ರೀತಿಯಾಗಿ ಒಂದು ಪದವನ್ನು ಈ ಶಿಬ್ಬಂದಿಗೆ ಉಪಯೋಗಿಸುತ್ತಿದ್ದೇವೆ ಎಂದು ಹೇಳಿದ್ದರು. ಈ 'ಸ್ಟೀಲ್ ಫ್ರೇಂ' ಎಂದರೆ ಬ್ಯೂರಾಕ್ರೆಟಿಕ್ ಆಡಳಿತಕ್ಕನುಗುಣವಾಗಿ ಒಂದು ಚೌಕಟ್ಟಿನಲ್ಲಿ ಕೆಲಸ ಕಾರ್ಯಗಳು ನಡೆಸಲು ಅನುಕೂಲವಾಗುವಂತೆ ಕಲ್ಪಿಸಿಕೊಂಡಿದ್ದಂಥ ಒಂದು ಶಿಬ್ಬಂದಿಗೆ ಈ ಪದವನ್ನು ಅವರು ಉಪಯೋಗಿಸುತ್ತಿದ್ದಹಾಗೆ ಕಾಣುತ್ತದೆ. ಆ ದಿವಸ ಈ ಸಿವಿಲ್ ಸರ್ವಿಸ್ ಶಿಬ್ಬಂದಿಗೆ ಬರುತ್ತಿದ್ದಂಥ ವರಮಾನಕ್ಕೂ ಮತ್ತು ದೇಶದಲ್ಲಿರತಕ್ಕಂಥ ಸಾಮಾನ್ಯ ಜನತೆಯ ಅಥವಾ ವರಮಾನ, ಆ ಒಂದು ಆದಾಯವೇನಿತ್ತೋ ಅದಕ್ಕೂ ಒಂದು ಸರಿಸಮಾನವಾದ ಅಂತರವಿರಲಿಲ್ಲ. ಅದಕ್ಕಾಗಿ ನಾವು ಹಿಂದೆಲ್ಲ ಅವರನ್ನು ಬಹಳ ಕಟುವಾಗಿ ಟೀಕೆ ಮಾಡುತ್ತಿದ್ದೆವು. ತಾವು ಈ ಅಂಶವನ್ನು ದಯವಿಟ್ಟು ಮರೆಯಬಾರದು. ಆದರೆ ನಾವು ಈ ದಿವಸ ಜಾರಿಯಲ್ಲಿ ತಂದಿರತಕ್ಕಂಥ ಈ ಐ.ಎ.ಎಸ್. ಮತ್ತು ಐ.ಸಿ.ಎಸ್. ಎಂಬ ಹೊಸ ಪದ್ಧತಿಗಳೆಲ್ಲಾ ಈಗಿನ ಪ್ರಜಾಪ್ರಭುತ್ವಾಡಳಿತಕ್ಕೆ ವಿರುದ್ಧವಾದವುಗಳಾಗಿರುತ್ತವೆ. ಈಗಿನ ಆಡಳಿತಕ್ಕೆ ಇವುಗಳು ಅನುಗುಣವಾಗಿಲ್ಲ. ಹೀಗೆ ತಾವು ಈ ದಿವಸ ಈ ಒಂದು ಹೊಸ ವರ್ಗವನ್ನು ನಿರ್ಮಾಣ ಮಾಡುವುದು ಪ್ರಜಾಪ್ರಭುತ್ವ ಯುಗಕ್ಕೂ ಮತ್ತು ತತ್ವಕ್ಕೂ ತೀರಾ ವಿರುದ್ಧವಾಗಿದೆ. ಹೀಗೆ ನಾವು ಈ ಹಿಂದೆ ಯಾವುದನ್ನು ತೀರಾ ಕಟುವಾಗಿ ಮತ್ತು ಉಗ್ರವಾಗಿ ಖಂಡಿಸಿ ಟೀಕೆ ಮಾಡುತ್ತಿದ್ದೆವೋ ಅಂಥ ಪದ್ಧತಿಯನ್ನೇ ನಾವು ಈಗ ಆಚರಣೆಗೆ ತರುವುದಕ್ಕೆ ಪ್ರಾರಂಭಿಸಿದ್ದೇವೆಂಬುದನ್ನು ತಿಳಿಸಲು ನಾನು ತುಂಬ ವಿಷಾದ ಪಡುತ್ತೇನೆ. ನಾವುಗಳೆಲ್ಲರೂ ಈ ಹಿಂದೆ ಹೀಗೆ ಭಾಷಣಗಳನ್ನು ಮಾಡುತ್ತಿದ್ದೆವೆಂಬುದು ಅನೇಕ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ಈಗ ನಾವು ಉದಾಹರಣೆಗಾಗಿ ನಮ್ಮ ಮಾನ್ಯ ಗೃಹ ಸಚಿವರ ಖಾತೆಗೆ ಸಂಬಂಧಪಟ್ಟಹಾಗೆ ಒಂದು ವಿಷಯವನ್ನು ತೆಗೆದುಕೊಳ್ಳೋಣ. ಈಗ ಒಬ್ಬ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅಧಿಕಾರಿಗೆ ತಿಂಗಳೊಂದಕ್ಕೆ 400-500 ರೂಪಾಯಿಗಳ ಸಂಬಳ ಬರುತ್ತದೆ. ಹೀಗೆ ಒಬ್ಬ ಅಧಿಕಾರಿಗೆ 500 ರೂಪಾಯಿಗಳ ಸಂಬಳ ಕೊಡುವ ಕಡೆ ಐ.ಪಿ.ಎಸ್. ಎಂದು ಹೇಳಿ ಏಕ್‌ದಂ ತಿಂಗಳಿಗೆ 800 ರೂಪಾಯಿಗಳಿಂದ ಹಿಡಿದು 1,000 ರೂಪಾಯಿಗಳ ತನಕ ಸಂಬಳ ಕೊಡಬೇಕೆಂದು ಹೇಳುತ್ತಿದ್ದೀರಿ. ಆದರೆ ಅವರು ಮಾಡತಕ್ಕ ಕೆಲಸದಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ. ಅವರು ಇದ್ದ ಊರನ್ನೂ ಬಿಡಲಿಲ್ಲ. ಅವರ ದಕ್ಷತೆಯಲ್ಲೇನೂ ಹೆಚ್ಚು ಕಡಮೆ ಆಗಲಿಲ್ಲ. ಅವರು ಮೊದಲೇನು ಕೆಲಸ ಮಾಡುತ್ತಿದ್ದರೋ ಈಗಲೂ ಅದೇ ಕೆಲಸವನ್ನೇ ಮಾಡುತ್ತಿದ್ದಾರೆ. ಆದರೆ 500 ರೂಪಾಯಿಗಳಂತೆ ಸಂಬಳ ಕೊಡುತ್ತಿದ್ದ ಕಡೆ 800 ರೂಪಾಯಿಗಳಂತೆ ಸಂಬಳ ಕೊಡತಕ್ಕದ್ದೆಂಬ ವ್ಯತ್ಯಾಸ ವಿನಾ ಮತ್ತೆ ಯಾವ ವ್ಯತ್ಯಾಸಗಳೂ ಕಂಡುಬರುವುದಿಲ್ಲ. ನಾವು ಹೀಗೆ ಇದನ್ನು ಮುಂದುವರಿಸಿಕೊಂಡು ಹೋದರೆ ಇದರ ಪರಿಣಾಮ ಕೊನೆಗೇನು ಆಗುತ್ತದೆ ಎಂಬುದನ್ನು ತಾವು ಏನಾದರೂ ಆಲೋಚಿಸಿದ್ದೀರಾ? ಭಾರತಕ್ಕೆ ಸ್ವಾತಂತ್ರ್ಯವನ್ನು ತರುವ ಮುನ್ನ ಹೂಡಲಾಗಿದ್ದ ಆ ಸ್ವಾತಂತ್ರ್ಯ ಚಳವಳಿಯಲ್ಲಿ ಆಳರಸರ ಆಡಳಿತವನ್ನು ನಾವೆಲ್ಲರೂ ಬಹಳ ಕಟುವಾಗಿ ಟೀಕಿಸುತ್ತಿದ್ದೆವು. ಆ ದಿವಸ ನಾವು ಅಷ್ಟೊಂಥು ಟೀಕೆ ಮಾಡುತ್ತಿದ್ದುದಕ್ಕೆ ಈ ನೌಕರಮಾನೇರ ಸಂಬಳ ಸಾರಿಗೆಯೇ ಮುಖ್ಯ ಮತ್ತು ಮೂಲಕಾರಣವಾಗಿತ್ತು. ಆ ಆಳರಸರು ಆ ದಿವಸ ಸಾಮಾನ್ಯ ಜನರಿಗೂ ಮತ್ತು ಈ ನೌಕರಿ ವರ್ಗಕ್ಕೂ ಇಷ್ಟೊಂದು ಅಗಾಧವಾದ ಅಂತರವನ್ನು ಏರ್ಪಡಿಸಿದ್ದಾರೆಂದು ಆ ದಿವಸ ನಾವು ಹೇಳುತ್ತಿದ್ದೆವು. ಆದರೆ ನಾವು ಈ ದಿವಸ ಆ ಹೊಣೆಗಾರಿಕೆಯನ್ನು ಮೈಸೂರು ಸರ್ಕಾರದ ಮೇಲೆ ಹಾಕಬೇಕಾಗಿದೆ. ನಾನೀಗ ಇದನ್ನೆಲ್ಲಾ ಟೀಕೆ ಮಾಡಬೇಕೆಂಬ ಅಭಿಪ್ರಾಯದಿಂದ ಹೇಳುತ್ತಿಲ್ಲ. ಭಾರತ ಸರ್ಕಾರ ಈ ದಿವಸ ಈ ದಾರಿಯಲ್ಲಿ ಹೋಗುತ್ತಿರಬಹುದು. ಅವರಿಗಾದರೂ ಸಹ ಇದು ಸರಿಯಲ್ಲ ಎಂದು ಹೇಳುವುದಕ್ಕೆ ನಾವು ಹಿಂಜರಿಯಬಾರದು. ಇನ್ನು ಮುಂದಕ್ಕೆ ಇದು ಹೀಗೆಯೇ ಹತ್ತಾರು ವರ್ಷಗಳ ಕಾಲ ನಡೆದರೆ ಇದು ಯಾವರೀತಿಯಾಗುತ್ತದೆಯೆಂದರೆ ಈ ನೌಕರಿ ವರ್ಗದಲ್ಲಿ ಸಂಪೂರ್ಣವಾಗಿ ಎರಡು ವಿಭಾಗಮಾಡಿ ಅವರಲ್ಲಿ ಒಂದು ವರ್ಗಕ್ಕೆ ಅತೃಪ್ತಿ, ಅಸಮಾಧಾನ ಹುಟ್ಟಿಸಿ, ಅವರಲ್ಲಿ ದಕ್ಷತೆಯನ್ನು ತಗ್ಗಿಸುವುದಕ್ಕೆ ಇದೇ ಮೂಲಕಾರಣವಾಗುತ್ತದೆ. ಆದುದರಿಂದ ದೇಶದಲ್ಲಿ ಪ್ರಜೆಗಳಿಗೆ ಬರತಕ್ಕಂಥ ಒಂದು ವರಮಾನಕ್ಕೂ ಮತ್ತು ಈ ನೌಕರಿ ವರ್ಗದ ಆದಾಯಕ್ಕೂ ಪೂರಾ ವಿರುಪೇರಾಗಿದೆ. ಆದುದರಿಂದ ಇದನ್ನು ಬದಲಾವಣೆ ಮಾಡಬೇಕೆಂಬುದು ಒಂದನೇ ವಿಷಯ. ಈಗ ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಂಡಿಯಾ ದೇಶದಲ್ಲಿ ಈ ಮಂತ್ರಿಮಂಡಳವನ್ನು ರಚಿಸತಕ್ಕಂಥ ಕಾರ್ಯದಲ್ಲಿ ತೊಡಗಬೇಕಾಗಿ ಬಂದಂಥ ವೇಳೆಯಲ್ಲಿ ಮಹಾತ್ಮಾ ಗಾಂಧಿಯವರು ಯಾವ ಮಂತ್ರಿಗಳಿಗೇ ಆಗಲಿ ತಿಂಗಳಿಗೆ 500 ರೂಪಾಯಿಗಳಿಗಿಂತ ಹೆಚ್ಚಿಗೆ ಸಂಬಳ ಇರಬಾರದೆಂದು ಒಂದು ಸಲಹೆ ಮಾಡಿದ್ದರು. ಅಂದರೆ 500 ರೂಪಾಯಿಗಳಿಗೆ ಮೀರಿ ಒಂದು ರೂಪಾಯಿ ಹೆಚ್ಚಾಗಿಯೂ ಆಗಬಾರದು ಅಥವಾ ಒಂದು ರೂಪಾಯಿ ಕಮ್ಮಿಯಾಗಿ 499 ರೂಪಾಯಿಯೂ ಆಗಬಾರದು ಎನ್ನತಕ್ಕದ್ದಲ್ಲ ಅವರ ಅಭಿಪ್ರಾಯ. ಹೀಗೆ ಒಂದು ಇಕ್ಕಟ್ಟನ್ನು ತಂದಿಟ್ಟು ಕೆಲಸ ಮಾಡಿಸಬೇಕೆಂದು ಹಾಗೆ ಅವರು ಹೇಳಲಿಲ್ಲ. ದೇಶಕ್ಕೆ ಒಂದು ಆದರ್ಶ ರೀತಿಯಲ್ಲಿರುವಂತೆ ಇದನ್ನು ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಅವರು ಹಾಗೆ ಹೇಳಿದ್ದಾರೆ. ಆ ಅಭಿಪ್ರಾಯಕ್ಕೆ ಆಗಬಹುದೆಂದು ಆ ದಿವಸವೇ ಅನೇಕರು

(ಶ್ರೀ ಕೆ. ಪಟ್ಟಾಭಿರಾಮನ್.)

